ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

46

ಮಾರ್ಚ್ 15 ಭಾನುವಾರ 2026

ಸಂಪುಟ: 46 | ಸಂಚಿಕೆ: 324 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com




ಮೈಸೂರು ಮಿತ್ರ

ಭಾನುವಾರ 15 ಮಾರ್ಚ್ 2026

ಇಂದು ಮೈಸೂರು ಓಪನ್ ಫೋರಂನಲ್ಲಿ ಇರಾನ್ ಯುದ್ಧ ಸಂಬಂಧ ಉಪನ್ಯಾಸ



ಒಂಬತ್ಕೆರೆ



ರವಿ ಜೋಶಿ

ಮೈಸೂರು, ಮಾ. 14– ಮೈಸೂರು ಓಪನ್ ಫೋರಂ ವತಿಯಿಂದ ನಾಳೆ (ಮಾ.15) ಬೆಳಗ್ಗೆ 10.30ಕ್ಕೆ ವಿಜಯನಗರ 4ನೇ ಹಂತದಲ್ಲಿರುವ ಕಲ್ಪಕ್ಷೇತ್ರ ಸಭಾಂಗಣದಲ್ಲಿ ಮೇಜರ್ ಜನರಲ್ ಎಸ್.ಜಿ. ಒಂಬತ್ಕೆರೆ ಅವರು 'ಇರಾನ್ ಮೇಲಿನ ಯುದ್ಧ–ಮಿಲಿಟರಿ ಅಂಶಗಳು' ಕುರಿತು ಮತ್ತು ಭಾರತ ಸರ್ಕಾರದ ಸಂಪುಟ ಸಚಿವಾಲಯದ ನಿವೃತ್ತ ಜಂಟಿ ಕಾರ್ಯದರ್ಶಿ ರವಿ ಜೋಶಿ ಅವರು 'ರಾಜಕೀಯ ಮತ್ತು ಕಾರ್ಯತಂತ್ರದ ಅಂಶಗಳು' ಕುರಿತು ಮಾತನಾಡಲಿದ್ದಾರೆ.

ಮೇಜರ್ ಜನರಲ್ (ನಿವೃತ್ತ) ಸುಧೀರ್ ಒಂಬತ್ಕೆರೆ ಅವರು, ವಸಾಹತು ಶಾಹಿ ಯುಗದಲ್ಲಿ ದೇಶದ್ರೋಹ ಕಾನೂನನ್ನು ನ್ಯಾಯಾಲಯದಲ್ಲಿ ಪ್ರಶ್ನಿಸಿದ ಅರ್ಜಿದಾರರಲ್ಲಿ ಒಬ್ಬರು. ಮೈಸೂರಿನಲ್ಲಿ ನೆಲೆಸಿರುವ ಅವರು, ಕುಕ್ಕರಹಳ್ಳಿ ಕೆರೆ ಮತ್ತು ಚಾಮುಂಡಿಬೆಟ್ಟ ಸೇರಿದಂತೆ ನಗರದ ಪರಿಸರ ಮತ್ತು ಪರಂಪರೆಯ ರಕ್ಷಣೆಗಾಗಿ ಅಭಿಯಾನದಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದಾರೆ.

ರವಿ ಜೋಷಿ ಅವರು ಮೈಸೂರು ವಿಶ್ವವಿದ್ಯಾಲಯ ಮತ್ತು ಜೆಎನ್‌ಯುನ ಹಳೆಯ ವಿದ್ಯಾರ್ಥಿ. ಭಾರತೀಯ ಬಾಹ್ಯ ಗುಪ್ತಚರ ಸೇವೆಗೆ ಸೇರಿ, ಸಂಶೋಧನೆ ಮತ್ತು ವಿಶ್ಲೇಷಣಾ ವಿಭಾಗದಲ್ಲಿ ಸುಮಾರು 25 ವರ್ಷಗಳಿಗೂ ಹೆಚ್ಚು ಕಾಲ ಸೇವೆ ಸಲ್ಲಿಸಿದ್ದಾರೆ. ಆರ್ ಅಂಡ್ ಎಡಬ್ಲ್ಯೂನಲ್ಲಿ ತಮ್ಮ ಅಧಿಕಾರಾವಧಿಯಲ್ಲಿ, ಅವರು ಚೀನಾ, ಪಾಕಿಸ್ತಾನ, ರಷ್ಯಾ, ಮಧ್ಯ ಏಷ್ಯಾ, ಇರಾನ್ ಮತ್ತು ಪಶ್ಚಿಮ ಏಷ್ಯಾವನ್ನು ಪ್ರತಿನಿಧಿಸುವ ಹಲವಾರು ಪ್ರಮುಖ ಡೆಸ್ಕ್‌ಗಳಲ್ಲಿ ಸೇವೆ ಸಲ್ಲಿಸಿದ್ದಾರೆ. ನಿವೃತ್ತಿಯ ನಂತರ ಅವರು ನವದೆಹಲಿಯಲ್ಲಿರುವ ಪ್ರಮುಖ ಚಿಂತಕರ ಚಾವಡಿಯಾದ ಅಬ್ಸರ್ವರ್ ಸಂಶೋಧನಾ ಪ್ರತಿಷ್ಠಾನ (ಒಆರ್‌ಎಫ್)ನಲ್ಲಿ ವಿಸಿಟಿಂಗ್ ಫೆಲೋ ಆಗಿದ್ದಾರೆ. ಅವರು ಮಾಲ್ಡೀವ್ಸ್, ಇರಾನ್ ಮತ್ತು ಪಶ್ಚಿಮ ಏಷ್ಯಾದ ರಾಜಕೀಯ ವ್ಯವಹಾರಗಳ ಕುರಿತು ಒಆರ್‌ಎಫ್ ಹಾಗೂ ಹಲವಾರು ಮುದ್ರಾ ಮತ್ತು ಆನ್‌ಲೈನ್ ಮಾಧ್ಯಮ ಸಂಸ್ಥೆಗಳಿಗೆ ನಿಯಮಿತವಾಗಿ ಮಾಹಿತಿ ನೀಡುತ್ತಿದ್ದಾರೆ. ಚರ್ಚೆಗೆ ಎಲ್ಲರಿಗೂ ಮುಕ್ತ ಅವಕಾಶ ವಿದೆ. [ಮೊಬೈಲ್: 94498–19536]

ಲಲಿತ ಮಹಲ್ ಮೈದಾನಕ್ಕೆ ಬೇಲಿ; ತಲೆ ಎತ್ತಿದ 'ಖಾಸಗಿ ಸ್ವತ್ತು' ಫಲಕ

ಮೈಸೂರು,ಮಾ.14(ಪಿಎಂ)– ಲಲಿತ ಮಹಲ್ ಮೈದಾನ ಎಂದೇ ಜನಮನದಲ್ಲಿ ಹೆಸರಾಗಿರುವ ಲಲಿತ ಮಹಲ್ ಹೋಟೆಲ್ ಎದುರಿನ ಮೈದಾನಕ್ಕೀಗ 'ಖಾಸಗಿ ಸ್ವತ್ತು' ಫಲಕ ಅಳವಡಿಸುವ ಜೊತೆಗೆ ಬೇಲಿ ಹಾಕುವ ಪ್ರಕ್ರಿಯೆ ನಡೆಯುತ್ತಿದೆ.

ನಗರದ ಟಿ.ನರಸೀಪುರ ರಸ್ತೆ (ಲಲಿತ ಮಹಲ್ ರಸ್ತೆ) ಹಾಗೂ ನಾಡಪ್ರಭು ಕೆಂಪೇಗೌಡ ವೃತ್ತಕ್ಕೆ ಹೊಂದಿಕೊಂಡಿರುವ ವಿಶಾಲ ಮೈದಾನಕ್ಕೆ ಸಿಮೆಂಟ್ ಕಂಬಗಳನ್ನು ಅಳವಡಿಸಿ, ಬೇಲಿ ನಿರ್ಮಿಸಲಾಗುತ್ತಿದೆ. ಅಲ್ಲಿ 'ಇದು ಖಾಸಗಿ ಸ್ವತ್ತು' ಫಲಕ ಅಳವಡಿಸಿದ್ದು, ಕೆಂಪೇಗೌಡ ವೃತ್ತದ ದಿಕ್ಕು ಹಾಗೂ ಮೈದಾನಕ್ಕೆ ಹೊಂದುಕೊಂಡಂತೆ ಇರುವ ಇಂದಿರಾ ಕ್ಯಾಂಟಿನ್ ಹೊರತಾಗಿ ಬೇಲಿ ಹಾಕಲಾಗುತ್ತಿದೆ.

ಆಷಾಢ ಮಾಸದ ಶುಕ್ರವಾರಗಳಂದು ಚಾಮುಂಡಿ ಬೆಟ್ಟಕ್ಕೆ ಭಕ್ತರು ತೆರಳಲು ಇದೇ ಮೈದಾನದಿಂದ ಜಿಲ್ಲಾಡಳಿತವು ಉಚಿತ ಸಾರಿಗೆ ವ್ಯವಸ್ಥೆ ಮಾಡುತ್ತಿದೆ. ಹಲವು ವರ್ಷಗಳಿಂದ ಇದು ನಡೆದು ಬಂದಿದ್ದು, ಈ ವೇಳೆ ಖಾಸಗಿ ವಾಹನಗಳಿಗೆ ನಿರ್ಬಂಧ ವಿಧಿಸಿ ಉಚಿತ ಸಾರಿಗೆ ಸೌಲಭ್ಯವನ್ನು ಇಲ್ಲಿಂದ ಕಲ್ಪಿಸಲಾಗುತ್ತಿದೆ. ಜೊತೆಗೆ ಇದೇ ಮೈದಾನದಲ್ಲಿ ಭಕ್ತರ ವಾಹನ ನಿಲುಗಡೆಗೂ ವ್ಯವಸ್ಥೆ ಕಲ್ಪಿಸಲಾಗುತ್ತದೆ. ಇಂತಹ ವ್ಯವಸ್ಥೆ ಹಲವು ವರ್ಷಗಳಿಂದ ನಡೆದು ಬಂದಿದ್ದು, ಇದರೊಂದಿಗೆ ಇದೇ ಮೈದಾನದಲ್ಲಿ ಕ್ರಿಕೆಟ್ ಪಂದ್ಯಾವಳಿ ಸೇರಿದಂತೆ ಅನೇಕ ಕ್ರೀಡಾ ಪಂದ್ಯಗಳು ಮಾತ್ರವಲ್ಲದೆ, ಸಭೆ–ಸಮಾರಂಭಗಳು ಆಯೋಜನೆಗೊಳ್ಳುವುದು ಇದೆ.

ಈ ಎಲ್ಲದರ ಹಿನ್ನೆಲೆಯಲ್ಲಿ ಇದು ಸರ್ಕಾರಿ ಭೂಮಿ ಎಂದೇ ಸಾರ್ವಜನಿಕ ವಲಯದಲ್ಲಿ ಬಿಂಬಿತವಾಗಿದೆ. ಹಾಗಾಗಿ ಇದೀಗ ಬೇಲಿ ಹಾಕುತ್ತಿರುವ ಕಾರಣ ಸಾರ್ವಜನಿಕ ವಲಯದಲ್ಲಿ ಚರ್ಚೆ ಶುರುವಾಗಿದೆ.



ಲಲಿತ ಮಹಲ್ ಮೈದಾನದ ಸುತ್ತಲು ಬೇಲಿ ಹಾಕುವ ಕಾರ್ಯ ನಡೆಯುತ್ತಿರುವುದನ್ನು ಚಿತ್ರದಲ್ಲಿ ಕಾಣಬಹುದು.

ಲಲಿತ ಮಹಲ್ ಹೋಟೆಲ್ ರಸ್ತೆಯ (ಟಿ.ನರಸೀಪುರ ರಸ್ತೆ) ಮೂಲಕ ಲಲಿತ ಮಹಲ್ ಹೋಟೆಲ್‌ಗೆ ಸಂಪರ್ಕ ಕಲ್ಪಿಸುವ ರಸ್ತೆಯ ಒಂದು ಬದಿಗೆ ಮೈದಾನ ಇದ್ದರೆ, ರಸ್ತೆ ಮತ್ತೊಂದು ಬದಿಗೂ ಖಾಲಿ ಜಾಗ ಇದ್ದು, ಹೋಟೆಲ್‌ಗೆ ಸಂಪರ್ಕ ಕಲ್ಪಿಸುವ ರಸ್ತೆ ಹೊರತಾಗಿ ಈ ಎಲ್ಲಕ್ಕೂ ಬೇಲಿ ಹಾಕುವ ಪ್ರಕ್ರಿಯೆ ಭರದಿಂದ ಸಾಗಿದೆ.

ಮೈಸೂರು ರಾಜವಂಶಸ್ಥೆ ಪ್ರಮೋದಾ ದೇವಿ ಒಡೆಯರ್ ಅವರು ಈ ಮೈದಾನ ತಮ್ಮ ಖಾಸಗಿ ಸ್ವತ್ತು ಎಂದು ಪ್ರತಿಪಾದಿಸಿದ್ದು, ಅವರು ಬೇಲಿ ಹಾಕಿಸುವ ಕಾರ್ಯ ಕೈಗೆತ್ತಿಕೊಂಡಿದ್ದಾರೆ. 2020ರಲ್ಲಿ ಈ ಮೈದಾನವು ಮೈಸೂರು ರಾಜವಂಶಸ್ಥರಿಗೆ ಸೇರಿದ್ದು ಎಂದು ಕೋರ್ಟ್ ತೀರ್ಪು ನೀಡಿದೆ. ಇಲ್ಲಿ ಯಾವ ಸರ್ಕಾರಿ ಭೂಮಿ ಇಲ್ಲವೆಂದು ಕೋರ್ಟ್ ತನ್ನ ತೀರ್ಪಿನಲ್ಲಿ ಹೇಳಿದೆ. ಆಷಾಢ ಸಮಯದಲ್ಲೂ ಪ್ರಮೋದಾದೇವಿ ಒಡೆಯರ್ ಅವರ ಅನುಮತಿ ಮೇರೆಗೆ ಜಿಲ್ಲಾಡಳಿತ ಸಾರಿಗೆ ಸೌಲಭ್ಯ ಕಲ್ಪಿಸಲು ಈ ಮೈದಾನವನ್ನು ಬಳಸಿ ಕೊಳ್ಳುತ್ತಾ ಬಂದಿದೆ ಎಂದು ಸ್ಥಳದಲ್ಲಿದ್ದ ರಾಜವಂಶ ಸ್ಥರ ಕಚೇರಿ ಸಿಬ್ಬಂದಿ ಪತ್ರಿಕೆಗೆ ತಿಳಿಸಿದರು. ಈ ಸಂಬಂಧ 'ಮೈಸೂರು ಮಿತ್ರ'ನೊಂದಿಗೆ ಪ್ರಮೋದಾದೇವಿ ಒಡೆಯರ್ ಮಾತನಾಡಿ, 2020 ರಲ್ಲೇ ಕೋರ್ಟ್ ಈ ಮೈದಾನದ ನಮಗೆ ಸೇರಿದ್ದು ಎಂದು ತೀರ್ಪು ನೀಡಿದೆ. ಅಕ್ರಮ–ಅನೈತಿಕ ಚಟುವಟಿಕೆಗಳಿಗೆ ತಡೆಯೊಡ್ಡುವ ನಿಟ್ಟಿನಲ್ಲಿ ಮೈದಾನದ ಸುತ್ತಲು ಬೇಲಿ ಹಾಕಲು ಕ್ರಮ ವಹಿಸಿದ್ದೇವೆ. ನಮ್ಮ ಅನುಮತಿ ಮೇರೆಗೆ ಕಾರ್ಯಕ್ರಮಗಳ ಆಯೋಜನೆಗೆ ಹಿಂದಿನಿಂದ ಮೈದಾನ ನೀಡುತ್ತಿದ್ದೇವೆ ಎಂದು ತಿಳಿಸಿದರು.

ಸದ್ಯಕ್ಕಿಲ್ಲ ಮಾಹಿತಿ: ಕುರುಬಾರಹಳ್ಳಿ ಸರ್ವೆ ನಂ.72ರಲ್ಲಿ 43 ಎಕರೆ, ಆಲನಹಳ್ಳಿ ಸರ್ವೆ ನಂ.41ರಲ್ಲಿ 9 ಎಕರೆ 39 ಗುಂಟೆ ಭೂಮಿಯ ಆರ್‌ಟಿಸಿ ಪ್ರವಾಸೋದ್ಯಮ ಇಲಾಖೆ ಹೆಸರಿನಲ್ಲಿದೆ. ಸ್ಥಳ ನೋಡಿಲ್ಲದ ಕಾರಣ ಈಗ ಬೇಲಿ ಹಾಕುತ್ತಿರುವ ಜಾಗ ಯಾವುದು, ಯಾರಿಗೆ ಸೇರಿದೆ ಎಂಬ ಬಗ್ಗೆ ನನಗೆ ಸದ್ಯಕ್ಕೆ ಮಾಹಿತಿ ಇಲ್ಲ ಎಂದು ಮೈಸೂರು ತಾಲೂಕು ತಹಸೀಲ್ದಾರ್ ಕೆ.ಎಂ.ಮಹೇಶ್‌ಕುಮಾರ್ ತಿಳಿಸಿದ್ದಾರೆ. ಈ ಸಂಬಂಧ ಪ್ರವಾಸೋದ್ಯಮ ಇಲಾಖೆ ಜಂಟಿ ನಿರ್ದೇಶಕರು ಹಾಗೂ ಸಹಾಯಕ ನಿರ್ದೇಶಕರನ್ನು ಸಂಪರ್ಕಿಸಲು ಪತ್ರಿಕೆಯಿಂದ ಪ್ರಯತ್ನಿಸಲಾಯಿತಾದರೂ ಅವರು ಸಂಪರ್ಕಕ್ಕೆ ಸಿಗಲಿಲ್ಲ.

ಅಂದು ಹೆಲಿಪ್ಯಾಡ್‌ಗೂ ಗೇಟ್...

2021 ಜನವರಿಯಲ್ಲಿ ಲಲಿತ ಮಹಲ್ ಹೆಲಿಪ್ಯಾಡ್‌ಗೂ ಗೇಟ್ ಹಾಕಲಾಯಿತು. ಅಲ್ಲದೆ, ಸದರಿ ಸ್ವತ್ತು ಶ್ರೀಮತಿ ಪಿ.ಡಿ.ಒಡೆಯರ್ ಅವರ ಖಾಸಗಿ ಆಸ್ತಿಯಾಗಿದೆ ಎಂದು ಫಲಕ ಸಹ ಅಳವಡಿಸಲಾಗಿತ್ತು. ಆ ಬಳಿಕ ಸುದ್ದಿಗೋಷ್ಠಿ ನಡೆಸಿದ್ದ ಪ್ರಮೋದಾದೇವಿ ಒಡೆಯರ್, ಕೋರ್ಟ್ ತೀರ್ಪಿನಂತೆ ನಮ್ಮ ಆಸ್ತಿ ರಕ್ಷಣೆಗಾಗಿ ಲಲಿತ ಮಹಲ್ ಹೆಲಿಪ್ಯಾಡ್‌ನಲ್ಲಿ ಗೇಟ್ ಅಳವಡಿಸಿದ್ದು, ಇದರ ಹಿಂದೆ ಯಾವುದೇ ದುರುದ್ದೇಶವಿಲ್ಲ ಎಂದು ಸ್ಪಷ್ಟಪಡಿಸಿದ್ದರು. ನಮ್ಮ ಆಸ್ತಿ ರಕ್ಷಣೆಗಾಗಿ ಹೆಲಿಪ್ಯಾಡ್ ಸಂಪರ್ಕ ರಸ್ತೆಗೆ ಗೇಟ್ ಅಳವಡಿಸಿದ್ದೇವೆ. ರಸ್ತೆ ಭಾಗಕ್ಕೆ ಬೇಲಿಯನ್ನು ಸಹ ನಾವು ಹಾಕಿಲ್ಲ ಎಂದು ಅವರು ಅಂದು ತಿಳಿಸಿದ್ದರು.

ಮನೆ ಕಟ್ಟಲು ಅವಕಾಶ ನೀಡದೆ ಕಿರುಕುಳ

ಮೈಸೂರು, ಮಾ.14(ಜಿಎ)–ಚಾಮರಾಜನಗರ ಜಿಲ್ಲೆ ಅಗರ–ಮಾಂಬಳ್ಳಿ ಗ್ರಾಪಂ ವ್ಯಾಪ್ತಿಯ ಮಾಂಬಳ್ಳಿಯ ತಮ್ಮ ಜಾಗದಲ್ಲಿ ಮನೆ ಕಟ್ಟಿಕೊಳ್ಳಲು ಮುಂದಾದಲ್ಲಿ ಪಕ್ಕದ ಮನೆಯವರಾದ ನಾಗಬಸವಯ್ಯ ಮತ್ತು ಮಾಧವಿ ಕಿರುಕುಳ ನೀಡುತ್ತಿದ್ದು, ಈ ಕುರಿತು ದೂರು ನೀಡಲು ಹೋದರೆ ಅಗರ–ಮಾಂಬಳ್ಳಿ ಠಾಣೆಯಲ್ಲಿ ಸ್ವೀಕರಿಸುತ್ತಿಲ್ಲ. ಬದಲಾಗಿ ತಮಗೇ ಬೆದರಿಕೆ ಹಾಕುತ್ತಾರೆ ಎಂದು ಮೈಸೂರು ಮೂಲದ ವಕೀಲರಾದ ಸುಜಾತ ಆರೋಪಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ತಮ್ಮದು 934/ಸಿ ಸ್ವತ್ತಿನ ಸಂಖ್ಯೆ. ಇದಕ್ಕೆ ಸಂಬಂಧಿಸಿದ ಎಲ್ಲಾ ದಾಖಲೆ ಪತ್ರ ತಮ್ಮಲ್ಲಿವೆ. ಆದರೂ ಸಹಾ ತಮಗೆ ಕಿರುಕುಳ ನೀಡುವುದು ಮುಂದುವರಿದಿದೆ. ತಾವು ಈ ಕುರಿತು ಸ್ಥಳೀಯ ಠಾಣೆ, ಡಿವೈಎಸ್ಪಿ ಮೊದಲಾದವರಿಗೆಲ್ಲ ದೂರು ನೀಡಿದರೂ ಪ್ರಯೋಜನವಾಗಿಲ್ಲ ಎಂದರು.

ಪೊಲೀಸರಿಗೆ ದೂರು ನೀಡಿದರೂ ಪ್ರಯೋಜನವಿಲ್ಲ

ಮೈಸೂರು ಮೂಲದವರಾದ ತಾವು ದೂರು ನೀಡಲೆಂದು ಸಾಕಷ್ಟು ಬಾರಿ ಠಾಣೆಗೆ ಅಲೆದರೂ ಸ್ವೀಕರಿಸುವುದಿಲ್ಲ. ತಮಗೆ ಕಿರುಕುಳ ನೀಡುವವರ ವಿರುದ್ಧ ಕ್ರಮ ಕೈಗೊಳ್ಳುತ್ತಿಲ್ಲ. ಈಗಿನ ಮನೆಯಲ್ಲಿ ಹಿರಿಯ ನಾಗರಿಕರು ವಾಸ ಮಾಡುತ್ತಿದ್ದು, ಮನೆ ರಸ್ತೆಯಲ್ಲಿ ನಾಗಬಸವಯ್ಯ ಹಾಗೂ ಮಾಧವಿ ಜಲ್ಲಿ ಕಲ್ಲು ಸುರಿಯುವ ಮೂಲಕ ಓಡಾಡದಂತೆ ಮಾಡುತ್ತಿದ್ದಾರೆ. ಇನ್ನಾದರೂ ಸಂಬಂಧಿಸಿದವರು ಇತ್ತ ಗಮನಹರಿಸಿ ಸಮಸ್ಯೆ ಬಗೆಹರಿಸದಿದ್ದರೆ ಸಂಬಂಧಿಸಿದ ತಹಸೀಲ್ದಾರ್ ಕಚೇರಿ ಎದುರು ಧರಣಿ ನಡೆಸಬೇಕಾಗುತ್ತದೆ ಎಂದು ಎಚ್ಚರಿಸಿದರು.

ಸುದ್ದಿಗೋಷ್ಠಿಯಲ್ಲಿ ಕುಟುಂಬದವರು, ಹಿರಿಯ ನಾಗರಿಕರಾದ ತಾಯಮ್ಮ, ಪುಟ್ಟನಂಜಮ್ಮ, ಸವಿತಾ ಉಪಸ್ಥಿತರಿದ್ದರು.

ಇಂದು ಮೈಸೂರಲ್ಲಿ ಕ್ರೀಡಾ ಚಟುವಟಿಕೆ ಆಯೋಜನೆ

ಮೈಸೂರು,ಮಾ.14(ಜಿಎ)–ಮೈಸೂರಿನ ಶ್ರೀರಾಂಪುರದಲ್ಲಿರುವ ಶ್ರೀ ಚನ್ನಕೇಶವಸ್ವಾಮಿ ವಿದ್ಯಾಸಂಸ್ಥೆಯಲ್ಲಿ, ಶ್ರೀ ಚನ್ನಕೇಶವಸ್ವಾಮಿ ಪ್ರೌಢಶಾಲೆ, ಅಶೋಕ ಪ್ರೌಢಶಾಲೆ, ಅಶೋಕಪುರಂ ಹಾಗೂ ಸಿ.ಕೆ.ಡ್ರೀಮ್ ಲ್ಯಾಂಡ್‌ಪ್ರೀ ಸ್ಕೂಲ್‌ಗಳ ಸಂಯುಕ್ತಾಶ್ರಯದಲ್ಲಿ ವಿಶ್ವ ಮಹಿಳಾ ದಿನಾಚರಣೆ ಅಂಗವಾಗಿ ಮಾರ್ಚ್ 15ರಂದು ಕ್ರೀಡಾ ಚಟುವಟಿಕೆ ಆಯೋಜಿಸಲಾಗಿದೆ ಎಂದು ಆಡಳಿತಾಧಿಕಾರಿ ಸುಶ್ಮಿತ ಪವಾರ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬೆಳಗ್ಗೆ 9ರಿಂದ ಸಂಜೆ 4ರವರೆಗೆ ಶ್ರೀರಾಂಪುರ, ಪರಸಯ್ಯನಹುಂಡಿ, ಶ್ರೀ ಚನ್ನಕೇಶವಸ್ವಾಮಿ ಪ್ರೌಢಶಾಲೆಯಲ್ಲಿ 16 ವರ್ಷಕ್ಕೂ ಮೇಲ್ಪಟ್ಟ ಮಹಿಳೆಯರಿಗೆ ವಿವಿಧ ಕ್ರೀಡಾ ಸ್ಪರ್ಧಾ ಚಟುವಟಿಕೆಗಳನ್ನು (ರಂಗೋಲಿ ಸ್ಪರ್ಧೆ, ಹಗ್ಗ ಜಗ್ಗಾಟ, ಥ್ರೋಬಾಲ್, ಮ್ಯೂಸಿಕಲ್ ಚೇರ್, ಕೆರೆ ದಡ ಮತ್ತು ಗುಂಡು ಎಸೆತ ಸ್ಪರ್ಧೆಗಳು) ಹಮ್ಮಿಕೊಳ್ಳಲಾಗಿದೆ ಎಂದರು.

ಎಲ್ಲಾ ಸ್ಪರ್ಧೆಗಳಲ್ಲೂ ಮಹಿಳೆಯರು ಉಚಿತವಾಗಿ ಭಾಗವಹಿಸಬಹುದಾಗಿದೆ. ಮಾ.22ರಂದು ನಡೆಯಲಿರುವ ಕಾರ್ಯಕ್ರಮದಲ್ಲಿ ಸ್ಪರ್ಧಾ ವಿಜೇತರಿಗೆ ಆಕರ್ಷಕ ಬಹುಮಾನಗಳನ್ನು ಗಣ್ಯ ಅತಿಥಿಗಳು ವಿತರಿಸುವರು. ಶಾಸಕ ಜಿ.ಟಿ.ದೇವೇಗೌಡರ ಧರ್ಮಪತ್ನಿ ಲಲಿತಾ ಜಿ.ಟಿ. ದೇವೇಗೌಡ, ವಿಭಾವಸು ದೀಪಕ್, ಪಲ್ಲವಿ ಮತ್ತಿತರರು ಮುಖ್ಯ ಅತಿಥಿ ಗಳಾಗಿ ಭಾಗವಹಿಸುವರು ಹೆಚ್ಚಿನ ಮಾಹಿತಿಗಾಗಿ ಮೊ: 9611495551, 9611545551 ಅನ್ನು ಸಂಪರ್ಕಿಸ ಬಹುದು ಎಂದರು. ಸಂಸ್ಥೆಯ ದಿವ್ಯಶ್ರೀ, ಪೂಜಾ, ನಂದಿನಿ ಸುದ್ದಿಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಕನಕದಾಸ ಕಪ್–2026 ಕ್ರಿಕೆಟ್ ಟೂರ್ನಿಗೆ ಚಾಲನೆ



ಮೈಸೂರಿನ ರೈಲ್ವೆ ಕ್ರೀಡಾಂಗಣದಲ್ಲಿ ಕನಕದಾಸ ಕಪ್–2026 ಕ್ರಿಕೆಟ್ ಪಂದ್ಯಾವಳಿಗೆ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಚಾಲನೆ ನೀಡಿ, ಕ್ರೀಡಾಪಟುಗಳಿಗೆ ಶುಭ ಹಾರೈಸಿದರು. ಈ ವೇಳೆ ಆಯೋಜಕರಾದ ಎಂ.ಪಿ.ಮಂಜು, ರವಿಕುಮಾರ್, ಪ್ರತಾಪ್ ಗೌಡ, ವಿನಯ್, ಶಿವುಗೌಡ, ಸಿ.ಎಸ್.ಗಗನ್ ಮತ್ತಿತರರು ಉಪಸ್ಥಿತರಿದ್ದರು.

ಆಹಾರ ಕಿಟ್ ವಿತರಣೆ...



ರಂಜಾನ್ ಹಬ್ಬದ ಪ್ರಯುಕ್ತ ಚಾಮರಾಜ ವಿಧಾನಸಭಾ ಕ್ಷೇತ್ರದ ಮುಸಲ್ಮಾನ ಬಂಧುಗಳಿಗೆ ಶಾಸಕ ಕೆ.ಹರೀಶ್‌ಗೌಡರು ಸುಮಾರು 15 ಸಾಮಗ್ರಿಗಳನ್ನು ಒಳಗೊಂಡ ಆಹಾರ ಕಿಟ್ ಅನ್ನು 3,000ಕ್ಕೂ ಹೆಚ್ಚು ಮಂದಿಗೆ ವಿತರಿಸಿದರು. ಈ ವೇಳೆ ಸ್ಥಳೀಯ ಮುಸಲ್ಮಾನ ಮುಖಂಡರು, ಧರ್ಮ ಗುರುಗಳು, ಕಾಂಗ್ರೆಸ್ ಮುಖಂಡರು, ಪದಾಧಿಕಾರಿಗಳು, ಕಾರ್ಯಕರ್ತರು ಉಪಸ್ಥಿತರಿದ್ದರು.

ನಿಧನ

ಆರ್.ಪಿ.ಸುಂದರರಾಜ ಶೆಟ್ಟಿ



ಮೈಸೂರು, ಮಾ.14– ಮೈಸೂರಿನ ಕೆ.ಆರ್. ಸರ್ಕಲ್‌ನಲ್ಲಿರುವ ರಾಘವೇಂದ್ರ ಮೆಡಿಕಲ್ಸ್ ಮತ್ತು ಹಳೇ ಸಂತೇಪೇಟೆಯಲ್ಲಿರುವ ಕನ್ನಿಕಾ ಟ್ರೇಡಿಂಗ್ ಕಂಪನಿಯ ಮಾಲೀಕರಾಗಿದ್ದ ಆರ್.ಪಿ. ಸುಂದರರಾಜ ಶೆಟ್ಟಿ (97) ಶನಿವಾರ ಬೆಳಗ್ಗೆ ನಿಧನರಾದರು.

ಮೈಸೂರಿನ ಕುವೆಂಪುನಗರ ನಿವಾಸಿಯಾದ ಇವರು ಪತ್ನಿ ಪದ್ಮಾವತಿ, ಇಬ್ಬರು ಪುತ್ರರಾದ ಆರ್.ಎಸ್. ಶ್ರೀನಿವಾಸ ಶೆಟ್ಟಿ ಮತ್ತು ಆರ್.ಎಸ್. ಸತ್ಯನಾರಾಯಣ ಶೆಟ್ಟಿ, ಸೊಸೆಯಂದಿರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ಮಿತ್ರರನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಚಾಮುಂಡಿಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಕಾಳೇಗೌಡ



ಮೈಸೂರು ತಾಲೂಕು ಕಡಕೊಳ ಬಿ.ಜಿ ಹುಂಡಿ ಗ್ರಾಮದ ಕುರುಬ ಸಮಾಜದ ಹಿರಿಯ ಮುಖಂಡ ಕಾಳೇಗೌಡ ನಿನ್ನೆ (ಮಾ.13) ಬೆಳಗ್ಗೆ ನಿಧನರಾದರು. ಅವರಿಗೆ 82 ವರ್ಷ ವಯಸ್ಸಾಗಿತ್ತು. ಇವರಿಗೆ ಇಬ್ಬರು ಪತ್ನಿಯರು, ಇಬ್ಬರು ಪುತ್ರರು ಎಲ್.ಐ.ಸಿ ಸಂಸ್ಥೆಯ ನೌಕರ ಹಾಗೂ ಕಾರ್ಮಿಕ ಮುಖಂಡ ರವಿ, ಯುವ ಮುಖಂಡ ರವೀಂದ್ರ, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅವರ ಅಂತ್ಯಕ್ರಿಯೆ ಇಂದು ಕಡಕೊಳ ಗ್ರಾಮದಲ್ಲಿ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಎಂ.ಗಂಗಾಧರ



ಮೈಸೂರಿನ ಅಶೋಕಪುರಂನ 13ನೇ ಕ್ರಾಸ್ ನಿವಾಸಿ, ಆರೋಗ್ಯ ಇಲಾಖೆಯ ನೌಕರರಾದ ಎಂ.ಗಂಗಾಧರ (58) ಅನಾರೋಗ್ಯ ನಿಮಿತ್ತ ಸ್ವ–ಗೃಹದಲ್ಲಿ ಶನಿವಾರ ನಿಧನ ಹೊಂದಿದರು. ಇವರು ಪತ್ನಿ ಜಯಲಕ್ಷ್ಮಿ, ಇಬ್ಬರು ಪುತ್ರಿಯರಾದ ಪೂಜಾ, ಲಾವಣ್ಯ ಹಾಗೂ ಅಪಾರ ಬಂಧುಬಳಗವನ್ನು ಅಗಲಿದ್ದಾರೆ. ಸಮಾಜ ಸೇವೆಯಲ್ಲಿ ತೊಡಗಿಸಿಕೊಂಡಿದ್ದ ಎಂ.ಗಂಗಾಧರ ಅವರು ಅಶೋಕಪುರಂ ವಿನಾಯಕ ಕ್ರೀಡಾ ಹಾಗೂ ಸಮಾಜ ಸೇವಾಸಂಸ್ಥೆ ಸಹ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದ್ದರು. ಅಂತ್ಯಕ್ರಿಯೆ ವಿದ್ಯಾರಣ್ಯಪುರಂನಲ್ಲಿರುವ ಅಶೋಕಪುರಂ ಚಿತಾಗಾರದಲ್ಲಿ ಶನಿವಾರ ಮಧ್ಯಾಹ್ನ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮಹದೇವ



ನಂಜನಗೂಡು ತಾಲೂಕಿನ ಅಳಗಂಚಿಪುರದ ಹಿರಿಯ ಪ್ರಾಥಮಿಕ ಶಾಲೆ ಮುಖ್ಯ ಶಿಕ್ಷಕ ಮಹದೇವ (55) ಶುಕ್ರವಾರ ಸಂಜೆ ಹೃದಯಾಘಾತದಿಂದ ನಿಧನರಾಗಿದ್ದಾರೆ.

ಮೃತರು ಪತ್ನಿ ಸೇರಿದಂತೆ ಅಪಾರ ಬಂಧು ಮಿತ್ರರನ್ನು ಅಗಲಿದ್ದಾರೆ. ಇವರ ಅಂತಕ್ರಿಯೆ ಮಧ್ಯಾಹ್ನ ಬುಕ್ಕಳ್ಳಿಯ ಸ್ವಗ್ರಾಮದಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

15.3.2026 ಭಾನುವಾರ, ಮಳೆ ನಕ್ಷತ್ರ: ಪೂರ್ವಾಭಾದ್ರ 4.03.2026 ರಿಂದ 17.03.2026 ವಿಶ್ವಾವಸು ನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಫಾಲ್ಗುಣ ಮಾಸ, ಕೃಷ್ಣ ಪಕ್ಷ, ತಿಥಿ: ಏಕಾದಶಿ, ನಕ್ಷತ್ರ: ಶ್ರವಣ, ರಾಹುಕಾಲ: ಸಂಜೆ 4.30ರಿಂದ 6ರವರೆಗೆ

- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಬೆಳಗ್ಗೆ 6.30 ರಿಂದ ದೇಹ–ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಬೆಳಗ್ಗೆ 9.30 ರಿಂದ ಕಿಡ್ನಿ ಆರೋಗ್ಯ ತಪಾಸಣೆ ಮತ್ತು ವಸಂತ ವಮನ ದೇಹಶುದ್ಧಿ ಚಿಕಿತ್ಸಾ ಶಿಬಿರ, ಪಿಸಿಒಡಿ ತೊಂದರೆಗೆ ಚಿಕಿತ್ಸಾ ಶಿಬಿರ, ಪೈಲ್ಸ್, ಮೂಲವ್ಯಾದಿ, ಫಿಸ್ತುಲಾ, ಭಗಂದರ, ನಾಡಿವ್ರಣ, ಫಿಶರ್ ಕಾಯಿಲೆಗಳಿಗೆ ಉಚಿತ ತಪಾಸಣೆ, ಸಲಹಾ ಶಿಬಿರ, ಕುತ್ತಿಗೆ ಹಾಗೂ ಬೆನ್ನು ನೋವಿಗೆ ಆಕ್ಯೂಪಂಕ್ಚರ್ ಮತ್ತು ಯೋಗ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ.
- **ಕಾವೇರಿ ಆಯುರ್ವೇದ ಆಸ್ಪತ್ರೆ :** ಪಿಸಿಓಡಿ ಮತ್ತು ಕುತ್ತಿಗೆ ನೋವು ಬಗ್ಗೆ ಉಚಿತ ತಪಾಸಣೆ ಮತ್ತು ಚಿಕಿತ್ಸಾ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಬೆಳಗ್ಗೆ 10ರಿಂದ.
- **ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಜೆಎಸ್‌ಎಸ್ ಅಕಾಡೆಮಿ ಆಫ್ ಹೈಯರ್ ಎಜುಕೇಷನ್ ಅಂಡ್ ರಿಸರ್ಚ್ :** ರಾಷ್ಟ್ರೀಯ ಭಾವೈಕ್ಯತಾ ಶಿಬಿರ, ಸ್ಥಳ: ಶ್ರೀ ರಾಜೇಂದ್ರ ಸಭಾಂಗಣ, ಜೆಎಸ್‌ಎಸ್ ಫಾರ್ಮಸಿ ಕಾಲೇಜು, ಬೆಳಗ್ಗೆ 10 ರಿಂದ.
- **ಬೃಂದಾವನ ಆಸ್ಪತ್ರೆ :** ರೋಬೋಟಿಕ್ ಮತ್ತು ಸ್ಪೈನ್ ನ್ಯಾವಿಗೇಷನ್ ಸರ್ಜರಿ ಉದ್ಘಾಟನೆ, ಮುಖ್ಯ ಅತಿಥಿಗಳು: ಶಾಸಕರಾದ ಕೆ. ಹರೀಶ್‌ಗೌಡ, ಟಿ.ಎಸ್. ಶ್ರೀವತ್ಸ, ಸ್ಥಳ: ಬೃಂದಾವನ ಆಸ್ಪತ್ರೆ, ಬೆಳಗ್ಗೆ 10.30ಕ್ಕೆ.
- **ವ್ಯವಸ್ಥಾಪಕರು :** ಆಸ್ಥಾನ ವಿದ್ವಾನ್ ವಿ. ನಾಗಭೂಷಣಚಾರ್ ಸಂಸ್ಮರಣಾ ಕಾರ್ಯಕ್ರಮ, ವಿದ್ವಾನ್ ಎನ್. ಶ್ರೀನಾಥ್ ಅವರಿಂದ ಹಾಡುಗಾರಿಕೆ, ವಿದ್ವಾನ್ ಎಂ.ಆರ್. ಶ್ರೀಕಾಂತ್–ಪಿಟೀಲು, ವಿದ್ವಾನ್ ಎಂ.ಆರ್. ಉದಯಕುಮಾರ್–ಮೃದಂಗ, ವಿದ್ವಾನ್ ಎಂ.ಎಸ್. ಕಿರಣ್‌ಕುಮಾರ್–ಘಟಂ, ವಿದ್ವಾನ್ ಆರ್. ದಾಸಪ್ಪ–ಮೋರ್ಚಿಂಗ್, ಸ್ಥಳ: ವಾಸುದೇವಾಚಾರ್ಯರ ಮನೆ, ಅಗ್ರಹಾರ, ಬೆಳಗ್ಗೆ 10ಕ್ಕೆ.
- **ಸಿಗ್ಮಾ ಆಸ್ಪತ್ರೆ :** ಮಹಿಳಾ ದಿನಾಚರಣೆ ಪ್ರಯುಕ್ತ ಮಹಿಳೆಯರಿಗೆ ಉಚಿತ ಆರೋಗ್ಯ ತಪಾಸಣಾ ಶಿಬಿರ, ಸ್ಥಳ: ಸಿಗ್ಮಾ ಆಸ್ಪತ್ರೆ, ಸರಸ್ವತಿಪುರಂ, ಬೆಳಗ್ಗೆ 10 ರಿಂದ.
- **ಶ್ರೀ ಗಾನಯೋಗಿ ಕಲಾ ಟ್ರಸ್ಟ್ :** ಡಾ. ಪಂಡಿತ್ ಪುಟ್ಟರಾಜ ಗವಾಯಿಗಳವರ 112ನೇ ಜಯಂತ್ಯೋತ್ಸವ, ಪ್ರಶಸ್ತಿ ಪ್ರದಾನ, ಸಂಗೀತೋತ್ಸವ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಪ್ರಶಸ್ತಿ ಪ್ರದಾನ : ಶ್ರೀ ವೀರೇಶ್ವರ ಪುಣ್ಯಾಶ್ರಮ, ಗದಗ ಪೀಠಾಧಿಪತಿ ಶ್ರೀ ಕಲ್ಲಯ್ಯ ಸ್ವಾಮೀಜಿ, ಕೃತಿಗಳ ಬಿಡುಗಡೆ : ಶ್ರೀಕುಂದೂರು ಮಠದ ಡಾ. ಶರತ್‌ಚಂದ್ರ ಸ್ವಾಮೀಜಿ, ಅರಮನೆ ಶ್ರೀ ಪಂಚಗವಿ ಮಠದ ಶ್ರೀಕಂಠ ಸ್ವಾಮೀಜಿ, ಗಾನಯೋಗಿ ಪ್ರಶಸ್ತಿ ಪ್ರದಾನ : ಹಿಂದೂಸ್ಥಾನಿ ಗಾಯಕ ಡಾ. ಪಂಡಿತ್ ಎಂ. ವೆಂಕಟೇಶ್ ಕುಮಾರ್, ಮುಖ್ಯ ಅತಿಥಿಗಳು : ಪ್ರವಚನಕಾರ ಪಂಡಿತ್ ಎಂ. ಕಲ್ಲಿನಾಥಶಾಸ್ತ್ರಿಗಳು ಅಡ್ನೂರ, ಅಧ್ಯಕ್ಷತೆ: ಟ್ರಸ್ಟ್ ಗೌರವಾಧ್ಯಕ್ಷ ಮ.ಗು. ಸದಾನಂದಯ್ಯ, ಉಪಸ್ಥಿತರು : ಮಾಜಿ ವಿಧಾನ ಪರಿಷತ್ ಸದಸ್ಯ ತೋಂಟದಾರ್ಯ, ಟ್ರಸ್ಟ್ ಅಧ್ಯಕ್ಷ ಹೆಚ್.ಎನ್. ಲೋಕೇಶಪ್ಪ, ಡಾ. ಪಂಡಿತ್ ಎಂ. ವೆಂಕಟೇಶ್‌ಕುಮಾರ್ ಅವರಿಂದ ಸಂಗೀತೋತ್ಸವ, ವಿದ್ವಾನ್ ಕೇಶವ ಜೋಷಿ–ತಬಲ, ವಿದ್ವಾನ್ ಬಿ. ಸತೀಶ್ ಭಟ್–ಹಾರ್ಮೋನಿಯಂ, ಸ್ಥಳ: ನವಜ್ಯೋತಿ ಸಭಾಂಗಣ, ಜೆಎಸ್‌ಎಸ್ ಮಹಿಳಾ ಕಾಲೇಜು, ಸರಸ್ವತಿಪುರಂ, ಬೆಳಗ್ಗೆ 10ಕ್ಕೆ.
- **ಕವಿತಾ ಪ್ರಕಾಶನ :** ರಮೇಶಚಂದ್ರ ಅವರ ಕವನ ಸಂಕಲನ ಹಾದಿಯೊಳಗಣ ಹಾಡೇ..., ಗಣೇಶ ಅಮೀನಗಡ ಅವರ ಕೃದಿಗಳ ಕಥನ, ರಂಗ ಪ್ರಸಂಗ, ರಂಗ ಕರ್ಪೂರ ಪುಸ್ತಕಗಳ ಬಿಡುಗಡೆ ಸಮಾರಂಭ, ಕೃತಿಗಳ ಬಿಡುಗಡೆ : ಹಿರಿಯ ವಿಮರ್ಶಕ ಓ.ಎಲ್. ನಾಗಭೂಷಣಸ್ವಾಮಿ, ಉಪಸ್ಥಿತರು : ಹಿರಿಯ ರಂಗಕರ್ಮಿ ಹುಲಗಪ್ಪ ಕಟ್ಟಿಮನಿ, ಎಚ್.ವಿ. ರಮೇಶ್, ಮಹೇಶ ಬಾಗಳಿ, ಸ್ಥಳ: ಎಸ್.ಪಿ. ಭಟ್ ಸಭಾಂಗಣ, ಎಂಜಿನಿಯರುಗಳ ಸಂಸ್ಥೆ, ಬೆಳಗ್ಗೆ 10.30ಕ್ಕೆ.
- **ಸಪಸ ಸಂಗೀತ ವಿದ್ಯಾಲಯ :** ಮಹಿಳಾ ದಿನಾಚರಣೆ ಪ್ರಯುಕ್ತ ಗಾಯನ ಸ್ಪರ್ಧೆ ಮತ್ತು ಆಟೋಟಗಳ ಸ್ಪರ್ಧೆ, ಸ್ಥಳ: ಸಪಸ ಸಂಗೀತ ವಿದ್ಯಾಲಯ, ಗಾನಭಾರತಿ ಹತ್ತಿರ, ಕುವೆಂಪುನಗರ, ಬೆಳಗ್ಗೆ 10.30ಕ್ಕೆ.
- **ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯ :** ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಕುರಿತು ಮಹಿಳೆ ಮತ್ತು ಕುಟುಂಬದ ಸಮಗ್ರ ಆರೋಗ್ಯ ಕುರಿತು ಉಪನ್ಯಾಸ, ಸಾನ್ನಿಧ್ಯ : ಮುಖ್ಯ ಸಂಚಾಲಕರಾದ ರಾಜಯೋಗಿನಿ ಡಾ. ಬಿ.ಕೆ. ಲಕ್ಷ್ಮೀಜಿ, ಉದ್ಘಾಟನೆ : ಶಿಕ್ಷಣ ಇಲಾಖೆ (ಪದವಿಪೂರ್ವ) ಉಪನಿರ್ದೇಶಕರಾದ ಶ್ರೀಮತಿ ಎಂ.ಪಿ. ನಾಗಮ್ಮ, ಮುಖ್ಯ ಅತಿಥಿಗಳು : ಜಿಲ್ಲಾ ಆಯುಷ್ ಅಧಿಕಾರಿ ಡಾ. ಸಿ. ರೇಣುಕಾದೇವಿ, ಪ್ರೊ. ಸುತ್ತೂರು ಎಸ್. ಮಾಲಿನಿ, ಡಾ. ಶಿಲ್ಪ ಅವರೆಬೀಳ್, ಡಾ.ವಿ. ಪ್ರೀತಿ, ಶ್ರೀಮತಿ ರಾಧಾ ನೀಲಕಂಠ, ಸ್ಥಳ: ಜ್ಞಾನಪ್ರಕಾಶ ಭವನ, ಯಾದವಗಿರಿ, ಬೆಳಗ್ಗೆ 11ಕ್ಕೆ.
- **ಜನಚೈತನ್ಯ ಫೌಂಡೇಷನ್:** ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ, ಉದ್ಘಾಟನೆ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ಮಲ್ಲಿಕಾರ್ಜುನಸ್ವಾಮಿ, ಅಧ್ಯಕ್ಷತೆ: ಜನಚೈತನ್ಯ ಫೌಂಡೇಷನ್ ಅಧ್ಯಕ್ಷ ಆರ್.ಲಕ್ಷ್ಮಣ್, ಮುಖ್ಯ ಅತಿಥಿಗಳು: ಡಾ.ಕುಸುಮ ಆಚಾರ್, ಶಾಮು, ರಂಜಿತ್ ಹೆಗಡೆ, ಡಾ.ಪೂರ್ಣಿಮಾ, ಎಸ್.ಎ.ವೀಣಾ, ಆನಂದ್ ಶೆಟ್ಟಿ, ಪುಷ್ಪಲತಾ ಶಿವಕುಮಾರ್, ಕವಿತಾ ಕಾಮತ್, ಸ್ಥಳ: ಜನಚೈತನ್ಯ ಫೌಂಡೇಷನ್, ಟಿ.ಎಸ್.ಸುಬ್ಬಣ್ಣ ಸಾರ್ವಜನಿಕ ಹಾಸ್ಟೆಲ್ ಹಿಂಭಾಗ, ವಿದ್ಯಾರಣ್ಯಪುರಂ, ಸಂಜೆ 4ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ–ಪ್ರೊ.ಮಾಲತಿ ಪಟ್ಟಣಶೆಟ್ಟಿ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಸಿನಿಮಾ ಯಾನ–ಜನ ಮೆಚ್ಚಿದ ಕನ್ನಡ ಚಿತ್ರಗಳ ನೆನಪಿನ ಮಾಲೆ, ಪ್ರಸ್ತುತಿ : ಶ್ರೀನಿವಾಸ್ ಪ್ರಸಾದ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ: ಟಿ.ಎಸ್. ಸ್ನೇಹ, ವ್ಯಾಖ್ಯಾನ–ಡಾ.ಬಿ. ವಿ. ವಸಂತಕುಮಾರ್, 6.50 ರೈತರಿಗೆ ಸಲಹೆ, 7.15 ಕಾದಂಬರಿ ವಿಹಾರ ಕೃಪಾಕರ ಸೇನಾನಿ ಅವರ ಕೆನ್ನಾಯಿಯ ಜಾಡಿನಲಿ ಕೃತಿಯ ಬಾನುಲಿ ಓದು, ಪ್ರಸ್ತುತಿ: ಜಿ.ಶಾಂತಕುಮಾರ್, 8.30 ಸೌರಶಕ್ತಿ ಬಳಸೋಣ–ಮನೆ ಮನೆಗು ಸೌರ ವಿದ್ಯುತ್ ಉಪಯೋಗಿಸೋಣ, ಪ್ರಾಯೋಜಕರು–BESCOM, ಬೆಂಗಳೂರು, 8.35 ಚಿತ್ರಗೀತೆಗಳು 9.40 ನಮ್ಮ ಆರೋಗ್ಯ ಮೂಗಿನಲ್ಲಿ ರಕ್ತಸ್ರಾವ ಕಾರಣಗಳು ಮತ್ತು ಪರಿಹಾರ ಕುರಿತು ಮೈಸೂರಿನ ಅಪೋಲೋ ಬಿ.ಜಿ.ಎಸ್ ಆಸ್ಪತ್ರೆಯ ಕಿವಿ, ಮೂಗು, ಗಂಟಲು ತಜ್ಞರಾದ ಡಾ.ಕವಿತಾ ಪ್ರಕಾಶ್ ಪಲ್ಲೇದ್ ಅವರೊಂದಿಗೆ ಮಾತುಕತೆ, ಇವರೊಂದಿಗೆ ಭಾಗವಹಿಸುತ್ತಾರೆ–ತೇಜಸ್ವಿನಿ ಗಿರೀಶ್, 10.00 ಕೇಳಿಗಿಳಿಗಳೇ–ಕಥೆ ಹೇಳ್ತಿಯೋ ಹಾಡು ಹೇಳ್ತಿಯೋ ನೇರ ಫೋನ್ ಇನ್ ಕಾರ್ಯಕ್ರಮ, 10.30 ಮಕ್ಕಳ ಮಂಟಪ ಪರೀಕ್ಷೆಗೆ ಸಿದ್ಧರಾಗೋಣ ಬನ್ನಿ ಎಸ್.ಎಸ್.ಎಲ್.ಸಿ ಪರೀಕ್ಷಾ ಸಿದ್ಧತೆ ಕುರಿತು ಬಾನುಲಿ ಸರಣಿ ಕಾರ್ಯಕ್ರಮ, ವಿಷಯ–ಪರೀಕ್ಷೆಗೆ ಕೊನೆಯ ಕ್ಷಣದ ತಯಾರಿ ಕುರಿತು ಮಾಹಿತಿ, ಭಾಗವಹಿ ಸುವವರು–ಪಿ.ಎಸ್ .ನಂದಿನಿ ರಂಗನಾಥ. ನಿವೃತ್ತ ಶಿಕ್ಷಕಿ, ಪ್ರಸ್ತುತಿ –ದಿಗ್ವಿಜಯ್.ಬಿ, 11.00 ಮಿಶ್ರಮಾಧುರ್ಯ

ಮಧ್ಯಾಹ್ನ: 12.05 ವನಿತಾ ವಿಹಾರ – ಯುಗಾದಿ – ಸಂಭ್ರಮದ ಸರಿಗಮ– ಮನೋನ್ಮಣಿ ಕಲಾ ತಂಡದಿಂದ ಯುಗಾದಿ ವಿಶೇಷ ಕಾರ್ಯಕ್ರಮ, ನಿರ್ಮಾಣ–ಆಶಾ, 12.35 ಭಕ್ತಿಗೀತೆಗಳು : ಮೇಧಾ ಮಂಜುನಾಥ್, 12.45 ಜನಪದ ಸಂಗೀತ : ಚಾಮರಾಜನಗರ ಜಿಲ್ಲೆ ಸಿದ್ಧಯ್ಯನಪುರದ ಆನಂದ್ ಮತ್ತು ಸಂಗಡಿಗರಿಂದ ಸೋಬಾನೆ ಪದ, 1.00 ಪ್ರಗತಿಪಥ – ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ ಪ್ರಧಾನ ಮಂತ್ರಿ ಸ್ವಾಸ್ಥ್ಯ ಸುರಕ್ಷಾ ಯೋಜನೆ ಕುರಿತು ಮಾಹಿತಿ, 1.20 ಭಾವಗೀತೆಗಳು–ಭೂಮಿಕಾ ಅರುಣ್, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ಕನ್ನಡ ಚಲನಚಿತ್ರ ಧ್ವನಿವಾಹಿನಿ – ಅದೃಷ್ಟವಂತ, 3.40 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ: ಜಿ.ಕೆ.ರವೀಂದ್ರಕುಮಾರ್, 3.45 ಯಕ್ಷಗಾನ–ತಾಳಮದ್ದಲೆ, ಪ್ರಸಂಗ–ರೇಣುಕಾ ಮಹಾತ್ಮೆ, ಪ್ರಸ್ತುತಿ–ನೀಲಾವರ ಲಕ್ಷ್ಮೀನಾರಾಯಣ ಮತ್ತು ಸಂಗಡಿಗರು, 4.45 ಚಿತ್ರಗೀತೆಗಳು, 6.51 ತೋರಣ ಹೂರಣ–ಸಾಪ್ತಾಹಿಕ ಸರಣಿ ಕಾರ್ಯಕ್ರಮ, ಪ್ರಸ್ತುತಿ: ಎನ್.ಕೇಶವಮೂರ್ತಿ, ಆರ್. ಲೋಕೇಶ್ವರಿ, ಡಾ.ಮೈಸೂರು ಉಮೇಶ್, ಕೃಷಿಲೋಕ, ಕೃಷಿ ದರ್ಪಣ–ವಾರದ ಕೃಷಿರಂಗ–ಕಿಸಾನ್‌ವಾಣಿ ಕಾರ್ಯಕ್ರಮಗಳ ಮುನ್ನೋಟ, ಪ್ರಸ್ತುತಿ: ಆರ್. ಲೋಕೇಶ್ವರಿ, 7.45 ಕನ್ನಡದಲ್ಲಿ ಭಾಷಣ, 8.00 ಫಸ್ಟ್ ಫಿಲ್ಮ್ – ಪ್ರಸ್ತುತಿ–ಎಸ್.ಶ್ರೀಮಾನ್, 8.30 ಹಿಂದಿ ಚಿತ್ರಗೀತೆಗಳು, 9.15 ರಂಗಗೀತೆಗಳು–ಜಿ.ಆರ್.ರಾಮಚಂದ್ರ, 9.30 ರಾಷ್ಟ್ರೀಯ ನಾಟಕ–ನಮ್ಮೊಳಗಿನ ಕುರುಕ್ಷೇತ್ರ, 10.00 ರವಿವಾಸರೀಯ ಅಖಿಲ ಭಾರತೀಯ ಸಂಗೀತ ಸಭಾ, ಎನ್.ಸಿ.ಮಾಧವ್ ಅವರ ವಯೊಲಾ ವಾದನ

- **ಲಯನ್ಸ್ ಇಂಟರ್‌ನ್ಯಾಷನಲ್ ಡಿಸ್ಟ್ರಿಕ್ಟ್ 317–ಜಿ :** ಪ್ರಾದೇಶಿಕ ಸಮ್ಮೇಳನ–ರೀಜನ್–5, ಉದ್ಘಾಟನೆ: ಕೃಷಿ ಸಚಿವ ಎನ್. ಚಲುವರಾಯಸ್ವಾಮಿ, ಮುಖ್ಯ ಅತಿಥಿಗಳು : ಮಾಜಿ ಇಂಟರ್‌ನ್ಯಾಷನಲ್ ನಿರ್ದೇಶಕ ವಿ.ವಿ. ಕೃಷ್ಣರೆಡ್ಡಿ, ಮುಖ್ಯ ಅತಿಥಿಗಳು : ಚೇತನ್‌ರಾಮ್, ಕೆ. ದೇವೇಗೌಡ, ಎಸ್. ರಾಮಚಂದ್ರನ್, ಕೆ. ರವಿ, ಸ್ಥಳ: ಆಟ್ಮಾಸ್‌ಪಿಯರ್, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿನಗರ, ಸಂಜೆ 5ಕ್ಕೆ.
- **ಪರಂಪರೆ, ಬೆಂಗಳೂರಿನ ಬನ್ನಂಜೆ ಗೋವಿಂದಚಾರ್ಯ ಪ್ರತಿಷ್ಠಾನ :** ಬನ್ನಂಜೆ 90ರ ವಿಶ್ವನಮನ, ಅಧ್ಯಕ್ಷತೆ : ಸಂಸ್ಕೃತ ವಿದ್ವಾಂಸ ಡಾ. ಹೆಚ್.ವಿ. ನಾಗರಾಜರಾವ್, ಪ್ರಸ್ತಾವನೆ : ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್, ಬನ್ನಂಜೆಯವರ ಒಡನಾಟ ಉಪನ್ಯಾಸ, ಗಂಜೀಫಾ ರಘುಪತಿ ಭಟ್, 'ನನ್ನ ಗೋವಿಂದಣ್ಣ' ಉಪನ್ಯಾಸ, ಶ್ರೀಮತಿ ಜಯಶ್ರೀ ಶ್ಯಾನಬಾಗ್, ಬನ್ನಂಜೆ–ಸಂಸ್ಕೃತ ವಿದ್ವಾಂಸರು' ಉಪನ್ಯಾಸ : ವಿದ್ವಾನ್ ಗ.ನಾ. ಭಟ್ಟ, ವಂದನಾರ್ಪಣೆ : ಶ್ರೀಮತಿ ವೀಣಾ ಬನ್ನಂಜೆ, ಬನ್ನಂಜೆಯವರ ಹಾಡುಗಬ್ಬ : ಶ್ರೀಮತಿ ಕವಿತಾ ಉಡುಪ ಮತ್ತು ಶ್ರೀಮತಿ ಸುಮಾ ಶಾಸ್ತ್ರಿ, ಸ್ಥಳ: ಗಾನಭಾರತೀ ರಮಾಗೋವಿಂದ ಕಲಾ ವೇದಿಕೆ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ, ಸಂಜೆ 5.30ಕ್ಕೆ.
- **ಹರೀಶ್‌ಗೌಡ ಸ್ನೇಹ ಬಳಗ :** ಯುಗಾದಿ ಹಬ್ಬದ ಅಂಗವಾಗಿ ಬ್ರಾಹ್ಮಣ ಕುಟುಂಬದವರಿಗೆ ಉಚಿತ ಒಂಟಿಕೊಪ್ಪಲ್ ಪಂಚಾಂಗ ವಿತರಣೆ ಕಾರ್ಯಕ್ರಮ, ಮುಖ್ಯ ಅತಿಥಿಗಳು ಶಾಸಕ ಹರೀಶ್ ಗೌಡ, ಯೋಗ ನರಸಿಂಹ ಸ್ವಾಮಿ ದೇವಸ್ಥಾನದ ಸಂಸ್ಥಾಪಕ ನಾಡೋಜ ಡಾ.ಭಾಷ್ಯಂ ಸ್ವಾಮೀಜಿ, ಚಾಮುಂಡಿ ಬೆಟ್ಟದ ಪ್ರಧಾನ ಅರ್ಚಕ ಶಶಿ ಶೇಖರ್ ದೀಕ್ಷಿತ್, ಇತಿಹಾಸ ತಜ್ಞರಾದ ಶೆಲ್ವಪಿಳ್ಳೈ ಅಯ್ಯಂಗಾರ್, ಮೇಲುಕೋಟೆ ವಂಗಿಪುರ ಮಠದ ಇಳೈ ಆಳ್ವಾರ್, ಅಮೃತೇಶ್ವರ ದೇವಸ್ಥಾನದ ಪ್ರಧಾನ ಅರ್ಚಕರಾದ ಮೈ ಕುಮಾರ್, ಸದ್ವಿದ್ಯಾ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ಎಂ.ಡಿ. ಗೋಪಿನಾಥ್, ಹಿರಿಯ ಸಮಾಜ ಸೇವಕ ಕೆ ರಘುರಾಮ್ ವಾಜಪೇಯಿ, ಮೈಸೂರು ಬ್ರಾಹ್ಮಣ ಯುವ ವೇದಿಕೆ ಪ್ರಧಾನ ಕಾರ್ಯದರ್ಶಿ ವಿಕ್ರಂ ಅಯ್ಯಂಗಾರ್, ಅಜಯ್ ಶಾಸ್ತ್ರಿ, ಸ್ಥಳ: ಸದ್ವಿದ್ಯಾ ಶಿಕ್ಷಣ ಸಂಸ್ಥೆಯ ಆವರಣ, ನಾರಾಯಣಶಾಸ್ತ್ರಿ ರಸ್ತೆ, ಸಂಜೆ 5.30ಕ್ಕೆ.
- **ರಂಗ ರತ್ನಾಕರ :** ರಂಗ ಸಂಗೀತ ತಜ್ಞರಾದ ಕೆ.ಆರ್. ಲಕ್ಷ್ಮೀನಾರಾಯಣರಾವ್ ಅವರ ಸ್ಮರಣಾರ್ಥ ವೃತ್ತಿ ರಂಗಭೂಮಿ ನಾಟಕಗಳ, ಕಂಪನಿ ಕಲಾವಿದರುಗಳ ಪುಸ್ತಕಗಳ ಬಿಡುಗಡೆ, ರಂಗ ಗೀತೆಗಳು ಮತ್ತು ರಂಗನಾಟಕ–ದೃಶ್ಯಗಳ ಪ್ರದರ್ಶನ ಕಾರ್ಯಕ್ರಮ, ಉದ್ಘಾಟನೆ : ಕರ್ನಾಟಕ ನಾಟಕ ಅಕಾಡೆಮಿ ನಿವೃತ್ತ ಅಧ್ಯಕ್ಷ ಡಾ. ಬಿ.ವಿ. ರಾಜಾರಾಂ, ಅಧ್ಯಕ್ಷತೆ : ಶಾರದಾ ವಿಲಾಸ ಕಾಲೇಜು ನಿವೃತ್ತ ಪ್ರಾಧ್ಯಾಪಕ ಪ್ರೊ. ಎ.ವಿ. ಸೂರ್ಯನಾರಾಯಣಸ್ವಾಮಿ, ಪುಸ್ತಕಗಳ ಬಿಡುಗಡೆ : ರಂಗ ಸಾಹಿತಿ ಎನ್. ಧನಂಜಯ, ಸ್ಥಳ: ರಮಾಗೋವಿಂದ ರಂಗ ಮಂದಿರ, ನೃಪತುಂಗ ಶಾಲಾ ಆವರಣ, ರಾಮಕೃಷ್ಣನಗರ, ಸಂಜೆ 5.30ಕ್ಕೆ
- **ರಂಗಾಯಣ :** ಭಾರತೀಯ ರಂಗ ಶಿಕ್ಷಣ ಕೇಂದ್ರದ ವಿದ್ಯಾರ್ಥಿಗಳಿಂದ ಹಂದಿ–ಮಂದಿ ನಾಟಕ ಪ್ರದರ್ಶನ, ನಿರ್ದೇಶನ : ಶಕೀಲ್ ಅಹ್ಮದ್, ಸ್ಥಳ: ಭೂಮಿಗೀತ, ರಂಗಾಯಣ, ಸಂಜೆ 6.30ಕ್ಕೆ.
- **ಮೈಸೂರಿನ ರಂಗವಲ್ಲಿ ಸಂಸ್ಥೆ ಮತ್ತು ಹೊರೈಜಾನ್ ಸ್ಕೂಲ್ ಆಫ್ ಡ್ರಮ್ಸ್ :** ಹೆಸರಾಂತ ರಂಗ ನಿರ್ದೇಶಕ ಶ್ರೀನಿವಾಸ ಪ್ರಭು ಅವರು ರಚಿಸಿರುವ 'ಪರಮೇಶಿ ಪ್ರೇಮ ಪ್ರಸಂಗ' ಹಾಸ್ಯ ನಾಟಕ ಪ್ರದರ್ಶನ, ನಿರ್ದೇಶನ : ರವಿಪ್ರಸಾದ್, ಸ್ಥಳ: ಕಿರುರಂಗಮಂದಿರ, ಕಲಾಮಂದಿರ, ಸಂಜೆ 6.30ಕ್ಕೆ.

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮಾರ್ಚ್ 15 ಭಾನುವಾರ 2026

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

46

ಸಂಪುಟ: 46 | ಸಂಚಿಕೆ: 324 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಸಿಲಿಂಡರ್ ಅಕ್ರಮ ಸಂಗ್ರಹಣೆ, ಮಾರಾಟ ವಿರುದ್ಧ ಕಠಿಣ ಕ್ರಮ

ಗೃಹ ಸಚಿವ ಡಾ.ಜಿ.ಪರಮೇಶ್ವರ್ ಎಚ್ಚರಿಕೆ





ತುಮಕೂರು, ಮಾ.14– ಎಲ್‌ಪಿಜಿ ಸಿಲಿಂಡರ್‌ಗಳ ಸಂಗ್ರಹಣೆ ಮತ್ತು ಕಾಳಸಂತೆಯಲ್ಲಿ ಮಾರಾಟ ಮಾಡುವವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲು ಪೊಲೀಸರಿಗೆ ಸೂಚನೆ ನೀಡಲಾಗಿದೆ ಎಂದು ಗೃಹ ಸಚಿವ ಜಿ.ಪರಮೇಶ್ವರ್ ಶನಿವಾರ ಎಚ್ಚರಿಕೆ ನೀಡಿದ್ದಾರೆ.

ಪಶ್ಚಿಮ ಏಷ್ಯಾ ಸಂಘರ್ಷದಿಂದ ಅನಿಲ ಪೂರೈಕೆಯಲ್ಲಿ ಭಾರೀ ವ್ಯತ್ಯಯ ಉಂಟಾಗಿದ್ದು, ಜನ ಎಲ್‌ಪಿಜಿ ಸಿಲಿಂಡರ್‌ಗಳಿಗಾಗಿ ಪರದಾಡುತ್ತಿದ್ದಾರೆ. ಯಾರಾದರೂ ಅನಿಲ ಸಿಲಿಂಡರ್‌ಗಳನ್ನು ಸಂಗ್ರಹಿಸಲು ಅಥವಾ ಕಾಳಸಂತೆಯಲ್ಲಿ ಮಾರಾಟ ಮಾಡಲು ಪ್ರಯತ್ನಿಸಿದರೆ, ಅವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು. ರಾಜ್ಯಾದ್ಯಂತ ಪೊಲೀಸರಿಗೆ ಈ ನಿಟ್ಟಿನಲ್ಲಿ ಸೂಚನೆ ನೀಡಲಾಗಿದೆ. ನಾವು ಅದಕ್ಕೆ ಅವಕಾಶ ನೀಡುವುದಿಲ್ಲ ಎಂದು ಪರಮೇಶ್ವರ್ ತಿಳಿಸಿದ್ದಾರೆ.

ಅಧಿಕಾರಿಗಳ ಹೇಳಿಕೆಯನ್ನು ಉಲ್ಲೇಖಿಸಿ, ಮನೆಗಳಿಗೆ ಅಡಿಗೆ ಅನಿಲ ಸಿಲಿಂಡರ್‌ಗಳ ಪೂರೈಕೆಯಲ್ಲಿ ಪ್ರಸ್ತುತ ಯಾವುದೇ ಸಮಸ್ಯೆಗಳಿಲ್ಲ. ಆದಾಗ್ಯೂ, ವಾಣಿಜ್ಯ ಅನಿಲ ಸಿಲಿಂಡರ್‌ಗಳಿಗೆ ಸಂಬಂಧಿಸಿದಂತೆ ಪೂರೈಕೆ ಸಮಸ್ಯೆಗಳಿವೆ ಎಂದು ಗೃಹ ಸಚಿವರು ತಿಳಿಸಿದ್ದಾರೆ.

ಹೋಟೆಲ್‌ಗಳು ಒಂದೆರಡು ದಿನಗಳವರೆಗೆ ಸಮಸ್ಯೆಗಳನ್ನು ಎದುರಿಸಬಹುದು. ಇದನ್ನು ಪರಿಹರಿಸುವ ಪ್ರಯತ್ನಗಳು ನಡೆಯುತ್ತಿವೆ. ಇರಾನ್ ಭಾರತಕ್ಕೆ ಕೆಲವು ವಿನಾಯಿತಿಗಳನ್ನು ನೀಡಿದ ನಂತರ, ಹಾರ್ಮುಜ್ ಜಲಸಂಧಿಯ ಮೂಲಕ ಎರಡು ಭಾರತೀಯ ಹಡಗುಗಳು ಮುಂಬೈ ತಲುಪಿವೆ ಎಂಬ ವರದಿಗಳಿಗೆ ಪ್ರತಿಕ್ರಿಯಿಸಿದ ಪರಮೇಶ್ವರ್, ಗಲ್ಫ್ ದೇಶಗಳಿಂದ ಅನಿಲ ಮತ್ತು ತೈಲ ಪೂರೈಕೆ ಶೀಘ್ರದಲ್ಲೇ ಸುಧಾರಿಸುತ್ತದೆ ಎಂಬ ಭರವಸೆಯನ್ನು ವ್ಯಕ್ತಪಡಿಸಿದರು.

ವಿಶೇಷ ಸಂಪುಟ ಸಭೆಯಲ್ಲಿ ನಿರ್ಧಾರ: ಇದೇ ವೇಳೆ ಒಳ ಮೀಸಲಾತಿ ಕುರಿತ ಪ್ರಶ್ನೆಗೆ ಉತ್ತರಿಸಿದ ಗೃಹ ಸಚಿವರು, ನೇಮಕಾತಿಯಲ್ಲಿ ಒಳ ಮೀಸಲಾತಿ ಕುರಿತು ಚರ್ಚಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ▶ 10ನೇ ಪುಟಕ್ಕೆ

ಕೇಂದ್ರ ಸರ್ಕಾರ ಸಹಕರಿಸಿದರೆ ಸಿಲಿಂಡರ್ ಸಮಸ್ಯೆಗೆ ಪರಿಹಾರ




ಸಿದ್ದರಾಮಯ್ಯ

ಬೆಂಗಳೂರು,ಮಾ.14(ಕೆಎಂಶಿ)– ಕೇಂದ್ರ ಸರ್ಕಾರ ಅಡುಗೆ ಅನಿಲ (ಎಲ್‌ಪಿಜಿ) ಸಿಲಿಂಡರ್ ಪೂರೈಕೆ ಸಮರ್ಪಕವಾಗಿ ಮಾಡಿದರೆ ಯಾವುದೇ ಸಮಸ್ಯೆ ಎದುರಾಗದು ಎಂದು ಮುಖ್ಯ ಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ. ರಾಜ್ಯ ಸರ್ಕಾರಕ್ಕೆ ಸಿಲಿಂಡರ್ ವಿತರಣೆ ಜವಾಬ್ದಾರಿ ಮಾತ್ರ ಇದ್ದು, ನಮಗೆ ಎದುರಾಗಿರುವ ಕೊರತೆ ಸರಿದೂಗಿಸುವಂತೆ ಕೇಂದ್ರ ರಾಸಾಯನಿಕ–ಪೆಟ್ರೋಲಿಯಂ ಸಚಿವರಿಗೆ ಪತ್ರ ಬರೆದಿದ್ದೇನೆ ಎಂದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಆಹಾರ ಮತ್ತು ನಾಗರಿಕ ಪೂರೈಕೆ ಸಚಿವ ಕೆ.ಎಚ್. ಮುನಿಯಪ್ಪ ತೈಲ ಕಂಪನಿ ಅಧಿಕಾರಿಗಳ ಜೊತೆ ಎರಡು ಸಭೆಗಳನ್ನು ಮಾಡಿ ಅಗತ್ಯ ಎಲ್‌ಪಿಜಿ ಪೂರೈಸುವಂತೆ ಮನವಿ ಮಾಡಿದ್ದಾರೆ. ಒಳಮೀಸಲಾತಿ ಕುರಿತು ಮಾ.27ರಂದು ವಿಶೇಷ ಸಂಪುಟ ಸಭೆ ಕರೆದಿದ್ದು, ಸರ್ಕಾರ ತೀರ್ಮಾನ ಕೈಗೊಳ್ಳಲಿದೆ ಎಂದರು. ದಾವಣಗೆರೆ ದಕ್ಷಿಣ ಹಾಗೂ ಬಾಗಲಕೋಟೆ ವಿಧಾನ ಸಭಾ ಕ್ಷೇತ್ರಗಳ ▶ 10ನೇ ಪುಟಕ್ಕೆ

ಸಿದ್ದರಾಮಯ್ಯ ಮಗನನ್ನ ಬೆಳೆಸಿ ಅಂತಾರೆ, ಇದೇನು ರಾಜರ ಆಡಳಿತಾನಾ?

ವಿಪಕ್ಷ ನಾಯಕ ಅಶೋಕ್ ಕಿಡಿ



ಬೆಂಗಳೂರು: ತಮ್ಮ ಮಗನನ್ನು ಬೆಳೆಸಿ ಎಂಬ ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿಕೆಗೆ ವಿಪಕ್ಷ ನಾಯಕ ಆರ್.ಅಶೋಕ್ ಕಿಡಿಕಾರಿದ್ದಾರೆ.

ಮೈಸೂರಿನಲ್ಲಿ ಡಾ. ಯತೀಂದ್ರ ಬೆಂಬಲಿಸುವಂತೆ ಸಿಎಂ ಸಿದ್ದರಾಮಯ್ಯ ಹೇಳಿಕೆ ವಿಚಾರಕ್ಕೆ ಬಿಜೆಪಿ ಕಚೇರಿಯಲ್ಲಿ ಪ್ರತಿಕ್ರಿಯೆ ನೀಡಿದ ಅವರು, ಸಿದ್ದರಾಮಯ್ಯ ಅವರು ನಾನು ಸಮಾಜವಾದಿ ಅಲ್ಲ. ಜಾತಿವಾದಿ ಅಲ್ಲ. ಕುಟುಂಬವಾದಿ ಅಲ್ಲ ಅಂತಿದ್ದರು. ನಿನ್ನೆ ಮಗನನ್ನ ನೋಡಿಕೊಳ್ಳಿ ಅಂತ ಹೇಳಿದ್ದಾರೆ. ಮುಂದೆ ಮೊಮ್ಮಗನನ್ನೂ ನೋಡಿಕೊಳ್ಳಿ ಅಂತ ಹೇಳ್ತಾರೆ. ಇದೇನು ರಾಜರ ಮನೆ ಆಡಳಿತಾನಾ? ಅವರು ರಾಜ ಆದ ಮೇಲೆ ಅವರ ಮಗ ರಾಜ ಆಗಬೇಕು ಅನ್ನೋದಕ್ಕೆ ಅಂತ ಕಿಡಿಕಾರಿದರು.

ಅಂಬೇಡ್ಕರ್ ಸಂವಿಧಾನದಲ್ಲಿ ಹೇಳಿದ್ರು, ರಾಜರ ಆಡಳಿತ ಹೋಗಿ ಪ್ರಜಾಪ್ರಭುತ್ವ ಬರಬೇಕು ಅಂತ. ಆದರೆ, ಅಂಬೇಡ್ಕರ್ ಸಂವಿಧಾನಕ್ಕೆ ತಿಲಾಂಜಲಿ ಹಾಕಿದ್ದಾರೆ. ಯಾರೇ ಆದರೂ ಬ್ಯಾಲೆಟ್‌ನಿಂದ ಗೆದ್ದು ಬರಬೇಕು. ಇಲ್ಲದೆ ಹೋದರೆ ಮಗನನ್ನ, ಮೊಮ್ಮಗನನ್ನ ಗೆಲ್ಲಿಸಿ ಅಂತ ಕೂರ್ತಾರೆ. ಈ ಹೇಳಿಕೆ ನನಗೆ ಆಶ್ಚರ್ಯ ಎನ್ನಿಸಿದೆ ಅಂತ ತಿಳಿಸಿದರು. ▶ 10ನೇ ಪುಟಕ್ಕೆ

100 ರೂ. ಕೇಳಿದ್ರೆ 5 ರೂ. ಆದ್ರೂ ಕೊಡಬಾರ್ದಾ

ಬಜೆಟ್ ಬಗ್ಗೆ ಶಾಸಕ ಇಕ್ಬಾಲ್ ಹುಸೇನ್ ಮತ್ತೆ ಅಸಮಾಧಾನ



ರಾಮನಗರ: ಪ್ರವಾಹದಿಂದ ನನ್ನ ಕ್ಷೇತ್ರದಲ್ಲಾಗಿರುವ ಹಾನಿಯ ಚಿತ್ರಗಳನ್ನು ಮುಖ್ಯಮಂತ್ರಿಗೆ ತೋರಿಸಿ ಅನುದಾನ ಕೇಳಿದ್ದೆ. 100 ರೂ. ಕೇಳಿದ್ರೆ ಕನಿಷ್ಠ 5 ರೂ. ಆದ್ರೂ ಕೊಡಬಾರದಾ? ಬಜೆಟ್‌ನಲ್ಲಿ ನನ್ನ ಕ್ಷೇತ್ರಕ್ಕೆ ಏನು ಆಗಬೇಕಿತ್ತೊ ಅದು ಆಗಿಲ್ಲ ಎಂದು ರಾಮನಗರ ಶಾಸಕ ಎಚ್.ಎ. ಇಕ್ಬಾಲ್ ಹುಸೇನ್ ಬಜೆಟ್ ಕುರಿತು ಮತ್ತೆ ತಮ್ಮ ಅಸಮಾಧಾನ ಹೊರ ಹಾಕಿದರು.

ಬಜೆಟ್ ಬಗ್ಗೆ ಬೇಸರ ವ್ಯಕ್ತಪಡಿಸಿದ್ದಕ್ಕಾಗಿ ಪಕ್ಷದಿಂದ ಹೊರ ಹಾಕಬೇಕು ಎಂದು ಸ್ವಪಕ್ಷದವರೇ ಆಕ್ರೋಶ ವ್ಯಕ್ತಪಡಿಸಿರುವುದರ ಕುರಿತು ನಗರದಲ್ಲಿ ಶನಿವಾರ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಅವರು, ನನಗೆ ಹಾಗೂ ಕ್ಷೇತ್ರಕ್ಕೆ ಆಗಿರುವ ನೋವನ್ನು ನಾನು ತೋಡಿಕೊಂಡಿದ್ದೇನೆ. ಯಾರು ಏನಾದರೂ ಹೇಳಿಕೊಳ್ಳಲಿ ಎಂದರು.

ಬೇರಾವುದೇ ವಿಷಯದ ಬಗ್ಗೆ ನಾನು ಮಾತನಾಡಿಲ್ಲ. ನಾನು ಹೇಳಿದ್ದು ಒಳ್ಳೆಯದಾಗಿದ್ದರೆ ಒಪ್ಪಿಕೊಳ್ಳಲಿ. ಕೆಟ್ಟದಾಗಿದ್ದರೆ ತಿರಸ್ಕರಿಸಲಿ. ಕ್ಷೇತ್ರದ ವಿಷಯಕ್ಕೆ ಸಂಬಂಧಿಸಿದಂತೆ ಸಾಕಷ್ಟು ಸಲ ಮುಖ್ಯಮಂತ್ರಿ ಮತ್ತು ಉಪಮುಖ್ಯಮಂತ್ರಿಗಳನ್ನು ಮುಖಾಮುಖಿ ಭೇಟಿಯಾಗಿದ್ದೇನೆ. ಮೂರು ವರ್ಷದ ಹಿಂದೆ ▶ 10ನೇ ಪುಟಕ್ಕೆ

ಮಾ.17ರೊಳಗೆ ಭಾರತಕ್ಕೆ ಇರಾನ್‌ನಿಂದ 92,700 ಮೆಟ್ರಿಕ್ ಟನ್ ಎಲ್‌ಪಿಜಿ



ನವದೆಹಲಿ, ಮಾ.14– ದೇಶದಲ್ಲಿ ಎಲ್‌ಪಿಜಿ ಸಂಗ್ರಹದಲ್ಲಿ ಯಾವುದೇ ಕೊರತೆಯಿಲ್ಲ. ಪಶ್ಚಿಮ ಏಷ್ಯಾದ ಸಂಘರ್ಷ ಹೆಚ್ಚುತ್ತಿರುವ ಮಧ್ಯೆ ದೇಶದಲ್ಲಿ ಕಚ್ಚಾ ತೈಲ, ಪೆಟ್ರೋಲ್, ಡೀಸೆಲ್ ಮತ್ತು ಎಲ್‌ಪಿಜಿಯ ಸಾಕಷ್ಟು ಪೂರೈಕೆ ಭಾರತದಲ್ಲಿ ಲಭ್ಯವಿದೆ. ಜನರು ವಿನಾಕಾರಣ ಆತಂಕಕ್ಕೊಳಗಾಗಿ ಬುಕಿಂಗ್ ಮಾಡುತ್ತಿದ್ದಾರೆ ಎಂದು ಕೇಂದ್ರ ಸರ್ಕಾರ ಹೇಳಿದೆ. ಭಾರತವು ವಿಶ್ವದ ಎರಡನೇ ಅತಿದೊಡ್ಡ ದ್ರವೀಕೃತ ಪೆಟ್ರೋಲಿಯಂ ಅನಿಲ (ಎಲ್‌ಪಿಜಿ) ಖರೀದಿದಾರ ರಾಷ್ಟ್ರವಾಗಿದ್ದು, ಇದರಲ್ಲಿ ಶೇ. 90ರಷ್ಟು ಹಾರ್ಮುಜ್ ಜಲಸಂಧಿಯ ಮೂಲಕ ಹಾದುಬರುತ್ತದೆ.

ಪರ್ಷಿಯನ್ ಕೊಲ್ಲಿಯಲ್ಲಿ ಎಲ್ಲಾ ಭಾರತೀಯ ನಾವಿಕರು ಸುರಕ್ಷಿತರಾಗಿದ್ದಾರೆ. ಕಳೆದ 24 ಗಂಟೆಗಳಲ್ಲಿ ಯಾವುದೇ ಅಹಿತಕರ ಘಟನೆ ವರದಿಯಾಗಿಲ್ಲ. ಭಾರತೀಯ ಧ್ವಜ ಹೊಂದಿರುವ ಒಟ್ಟು 24 ಹಡಗುಗಳು ಇದ್ದವು. ಈ ಪೈಕಿ 'ಶಿವಾಲಿಕ್', 'ನಂದಾ ದೇವಿ' ಹಡಗುಗಳು LPG ಸಾಗಿಸುತ್ತಿವೆ. ಇವು ನಿನ್ನೆ ತಡರಾತ್ರಿ ಹಾರ್ಮುಜ್ ಜಲಸಂಧಿಯನ್ನು ಸುರಕ್ಷಿತವಾಗಿ ದಾಟಿವೆ. ಈ ಹಡಗುಗಳಲ್ಲಿ ಸುಮಾರು 92,700 ಮೆಟ್ರಿಕ್ ಟನ್ ಐಕಉ ಸಾಗಿಸಲಾಗುತ್ತಿದೆ. ಇವು ಕ್ರಮವಾಗಿ ಗುಜರಾತ್‌ನ ಮುಂದ್ರಾ, ಕಾಂಡ್ಲಾ ಬಂದರು ತಲುಪಲಿವೆ. ಮಾರ್ಚ್ 16 ಮತ್ತು ಮಾರ್ಚ್ 17ರಂದು ಇವು ಭಾರತದ ಬಂದರು ತಲುಪುವ ನಿರೀಕ್ಷೆಯಿದೆ. ಪರ್ಷಿಯನ್ ಕೊಲ್ಲಿಯಲ್ಲಿ ಇನ್ನೂ ಭಾರತದ 22 ಹಡಗುಗಳು ಇವೆ. ಇವುಗಳಲ್ಲಿ 611 ಭಾರತೀಯ ನಾವಿಕರು ಕಾರ್ಯನಿರ್ವಹಿಸುತ್ತಿದ್ದಾರೆ ಎಂದು ಕೇಂದ್ರ ಸರ್ಕಾರದ ಹಡಗು ಸಾಗಣೆ ಸಚಿವಾಲಯದ ಅಧಿಕಾರಿ ರಾಜೇಶ್ ಕುಮಾರ್ ಸಿನ್ಹಾ ಹೇಳಿದ್ದಾರೆ. ▶ 10ನೇ ಪುಟಕ್ಕೆ

ಸುದೀರ್ಘ ಸಮರಕ್ಕೆ ನಾವು ಸಿದ್ಧ

ಅಮೆರಿಕಕ್ಕೆ ಇರಾನ್ ಘೋರ ಸಂದೇಶ



ನವದೆಹಲಿ: ಇರಾನ್ ಮಾತುಕತೆಗೆ ಮುಂದಾಗಿದೆ ಎಂಬ ಅಮೆರಿಕದ ಹೇಳಿಕೆಯನ್ನು ಇರಾನ್ ಶನಿವಾರ ಸ್ಪಷ್ಟವಾಗಿ ತಳ್ಳಿಹಾಕುವ ಮೂಲಕ ಸುದೀರ್ಘ ಸಂಘರ್ಷಕ್ಕೆ ಸಿದ್ಧ ಎಂಬ ಸಂದೇಶ ರವಾನಿಸಿದೆ.

ಮಧ್ಯಪ್ರಾಚ್ಯ ಸಂಘರ್ಷ 15ನೇ ದಿನಕ್ಕೆ ಕಾಲಿಟ್ಟಿದ್ದು, ಉದ್ವಿಗ್ನತೆ ದಿನದಿಂದ ದಿನಕ್ಕೆ ಹೆಚ್ಚುತ್ತಲೇ ಇದೆ. ಇದರ ಪರಿಣಾಮ ಜಾಗತಿಕ ಬಿಕ್ಕಟ್ಟು ಸೃಷ್ಟಿಯಾಗಿದ್ದು, ಹಲವು ದೇಶಗಳು ಗಂಭೀರ ಸಮಸ್ಯೆಗಳನ್ನು ಎದುರಿಸುತ್ತಿವೆ. ಈ ನಡುವೆ ಇರಾನ್ ಮಾತುಕತೆಗೆ ಮುಂದಾಗಿದೆ ಎಂಬ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿಕೆಯನ್ನು ಇರಾನ್ ದೇಶದ ಸರ್ವೋಚ್ಚ ನಾಯಕನ ಭಾರತದ ಪ್ರತಿನಿಧಿ ಅಬ್ದುಲ್ ಮಜೀದ್ ಹಕೀಂ ಇಲಾಹಿ ಸ್ಪಷ್ಟವಾಗಿ ತಳ್ಳಿಹಾಕುವುದರ ಜೊತೆಗೆ ಅಗತ್ಯವಿದ್ದರೆ ಇರಾನ್ ಐದು ವರ್ಷಗಳ ಕಾಲ ಯುದ್ಧ ಮುಂದುವರಿಸಲು ಸಿದ್ಧವಿದೆ ಎಂದು ತಿಳಿಸಿದ್ದಾರೆ.

ಶನಿವಾರ ಸುದ್ದಿ ಸಂಸ್ಥೆಗೆ ನೀಡಿದ ಸಂದರ್ಶನದಲ್ಲಿ ಇಲಾಹಿ ಮಾತನಾಡಿ, ಅಮೆರಿಕದೊಂದಿಗೆ ಮಾತುಕತೆ ನಡೆಸಲು ಇರಾನ್ ಯಾವುದೇ ಆಸಕ್ತಿ ಹೊಂದಿಲ್ಲ. ಮಾತುಕತೆಗಳು ನಡೆಯುತ್ತಿದ್ದಾಗ ಅಮೆರಿಕ ಇರಾನ್ ಮೇಲೆ ದಾಳಿ ಮಾಡಿತು. ನಮಗೆ ಯುದ್ಧ ಬೇಕಿರಲಿಲ್ಲ ಅವರೇ ಯುದ್ಧವನ್ನು ಆರಂಭಿಸಿದರು. ಈ ಯುದ್ಧ ಯಾವಾಗ ಮುಕ್ತಾಯವಾಗಲಿದೆ ಎಂಬುದು ನನಗೆ ತಿಳಿದಿಲ್ಲ, ಇರಾನ್ ಎಂದಿಗೂ ಶರಣಾಗುವುದಿಲ್ಲ, ಕೊನೆಯವರೆಗೂ ಹೋರಾಡಲು ಸಿದ್ಧವಿದೆ ಎಂದಿದ್ದಾರೆ.

ಈ ಹಿಂದೆ ಇರಾನ್ ಮತ್ತು ಇರಾಕ್ ನಡುವೆ ಎಂಟು ವರ್ಷಗಳ ಕಾಲಯುದ್ಧ ನಡೆದಿತ್ತು. ಅದನ್ನು ನಾವು ಸಮರ್ಥವಾಗಿ ಎದುರಿಸಿದ್ದೇವೆ. ಇರಾನ್ ಬೀದಿಗಳಿಗೆ ಹೋದರೆ ಜನರು ಪ್ರತೀಕಾರದ ಘೋಷಣೆ ಕೂಗುವುದನ್ನು ಕಾಣಬಹುದು. ನಾವು ರಕ್ತ ಕೊಡಲು ಸಿದ್ಧ, ಆದರೆ ನಮ್ಮ ನೆಲವನ್ನು ಬಿಟ್ಟು ಕೊಡುವುದಿಲ್ಲ. ಪಶ್ಚಿಮ ಏಷ್ಯಾದಲ್ಲಿ ಯುದ್ಧ ತಪ್ಪಿಸಲು ಇರಾನ್ ಹಲವು ಬಾರಿ ಪ್ರಯತ್ನಿಸಿತ್ತು, ನೆರೆಯ ದೇಶಗಳಿಗೂ ಯುದ್ಧ ವ್ಯಾಪಿಸದಂತೆ ಪ್ರಯತ್ನಿಸಲಾಯಿತು ಆದರೆ ಅದು ಫಲಕೊಡಲಿಲ್ಲ ಎಂದು ಹೇಳಿದ್ದಾರೆ.

ಈ ಸಂಘರ್ಷ ಕೇವಲ ಇರಾನ್‌ಗೆ ಸೀಮಿತವಾಗಿಲ್ಲ, ಜಾಗತಿಕ ಮಟ್ಟದಲ್ಲೂ ಪರಿಣಾಮ ಬೀರುತ್ತಿದೆ. ಇಲ್ಲಿ ಉಂಟಾದ ಅಸ್ಥಿರತೆ ತೈಲ ಮಾರುಕಟ್ಟೆಗಳ ಮೇಲೆ ಪರಿಣಾಮ ಬೀರಿದ್ದು, ಇಂಧನ ಕೊರತೆ ಅಥವಾ ಬೆಲೆ ಏರಿಕೆಗೆ ಕಾರಣವಾಗಿದೆ. ತೈಲ ಕೊರತೆಯಿಂದ ಜನರು ಕಷ್ಟಪಡುವುದು ಇರಾನ್‌ಗೆ ಇಷ್ಟವಿಲ್ಲ. ಆದರೆ ನಮ್ಮನ್ನು ರಕ್ಷಿಸಿಕೊಳ್ಳಲು ಬೇರೆ ಆಯ್ಕೆ ಇಲ್ಲ. ಈ ಸಂಘರ್ಷವನ್ನು ಅಂತ್ಯಗೊಳಿಸಲು ಅಮೆರಿಕದ ಮೇಲೆ ಒತ್ತಡ ಹೇರಲು ಜಾಗತಿಕ ನಾಯಕರು ಮುಂದಾಗಬೇಕು ಎಂದು ಮನವಿ ಮಾಡಿದ್ದಾರೆ.

ತೈಲ ಉತ್ಪಾದನಾ ಘಟಕಗಳು ಬಂದ್: ಗಲ್ಫ್ ರಾಷ್ಟ್ರಗಳಲ್ಲಿನ ತೈಲ ಮತ್ತು ಇತರ ಮೂಲಸೌಕರ್ಯಗಳನ್ನು ಗುರಿಯಾಗಿಸಿ ಇರಾನ್ ಸೇನೆ ಶನಿವಾರ ಕೂಡ ದಾಳಿ ಮುಂದುವರೆಸಿದೆ. ಪರಿಣಾಮ ಗಲ್ಫ್ ರಾಷ್ಟ್ರಗಳಾದ ಯುಎಇ, ಕತಾರ್, ಕುವೈತ್ ಬಹರೇನ್ ದೇಶಗಳು ಕೆಲವು ತೈಲ ಉತ್ಪಾದನಾ ಘಟಕಗಳನ್ನು ಬಂದ್ ಮಾಡಿವೆ ಎಂದು ಮಾಧ್ಯಮಗಳು ವರದಿ ಮಾಡಿವೆ. ಇದರಿಂದ ಮುಂದಿನ ದಿನಗಳಲ್ಲಿ ತೈಲ ಬಿಕ್ಕಟ್ಟು ಮತ್ತಷ್ಟು ಬಿಗಡಾಯಿಸಬಹುದು ಎಂದು ಹೇಳಲಾಗುತ್ತಿದೆ. ಯುಎಇಯಲ್ಲಿರುವ ಫುಜೈರಾದಲ್ಲಿ ತೈಲ ಉತ್ಪಾದನಾ ಘಟಕಗಳನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ. ಅದೇ ರೀತಿ ಬಹರೇನ್, ಕತಾರ್, ಕುವೈತ್‌ನಲ್ಲಿರುವ ಕೆಲವು ಘಟಕಗಳನ್ನು ಮುಚ್ಚಲಾಗಿದೆ. ▶ 10ನೇ ಪುಟಕ್ಕೆ

25 ಕೋಟಿ ಸಾಲದ ಆಸೆ ತೋರಿ 25 ಲಕ್ಷ ವಂಚನೆ!

ಮೈಸೂರು: ಬರೋಬ್ಬರಿ 25 ಕೋಟಿ ರೂ. ಕೈಸಾಲ ನೀಡುವುದಾಗಿ ನಂಬಿಸಿ, ವ್ಯಕ್ತಿಯೊಬ್ಬರಿಂದ 25 ಲಕ್ಷ ಪಡೆದು, ಕಡೆಗೆ ಅವರಿಗೆ 10 ರೂ. ಅರ್ಧ ನೋಟು ನೀಡಿ ವಂಚಿಸಿರುವ ಪ್ರಕರಣ ಮೈಸೂರಿನಲ್ಲಿ ಬೆಳಕಿಗೆ ಬಂದಿದೆ. ಹುಬ್ಬಳ್ಳಿಯ ವಾಣಿಜ್ಯೋದ್ಯಮಿ ಹರ್ಷ ವಂಚನೆಗೊಳಗಾಗಿದ್ದು, ಇವರು ನಾರಾಯಣಶೆಟ್ಟಿ, ಕಾರ್ತಿಕ್, ಯಶವಂತಶೆಟ್ಟಿ, ಪ್ರವೀಣ್, ದೀಪಕ್ ವಿಶ್ವಕರ್ಮ ಹಾಗೂ ಶ್ರುತಿ ವಿರುದ್ಧ ಮೈಸೂರು ದಕ್ಷಿಣ ಠಾಣೆಯಲ್ಲಿ ಮಾ.9ರಂದು ಪ್ರಕರಣ ದಾಖಲಿಸಿದ್ದಾರೆ. ▶ ಪೂರ್ಣ ವರದಿ 10ನೇ ಪುಟದಲ್ಲಿ



ಮಂಡ್ಯದ ವಿ.ಸಿ.ಫಾರಂನ ಕೃಷಿ ವಿಶ್ವವಿದ್ಯಾನಿಲಯದ ಆವರಣದ 1.5 ಎಕರೆ ಜಾಗದಲ್ಲಿ ಖೇಲೋ ಇಂಡಿಯಾ ವೈಬ್ರೆಂಟ್ ಯೋಜನೆಯಡಿ 14 ಕೋಟಿ ರೂ. ವೆಚ್ಚದ ಸುಸಜ್ಜಿತ ಬಹುಪಯೋಗಿ ನೂತನ ಕ್ರೀಡಾಂಗಣ ಕಾಮಗಾರಿಗೆ ಕೇಂದ್ರದ ಯುವಜನ ಸೇವೆ, ಕ್ರೀಡೆ, ಉದ್ಯೋಗ ಹಾಗೂ ಕಾರ್ಮಿಕ ಸಚಿವ ಮನ್ಸುಖ್ ಮಾಂಡವೀಯ ಶನಿವಾರ ಚಾಲನೆ ನೀಡಿದರು. ಕೇಂದ್ರದ ಉಕ್ಕು ಹಾಗೂ ಬೃಹತ್ ಕೈಗಾರಿಕಾ ಸಚಿವ ಹೆಚ್.ಡಿ.ಕುಮಾರಸ್ವಾಮಿ, ಶಾಸಕರಾದ ಹೆಚ್.ಟಿ.ಮಂಜು, ದರ್ಶನ್ ಪುಟ್ಟಣ್ಣಯ್ಯ, ಮಾಜಿ ಸಚಿವರಾದ ಸಿ.ಎಸ್.ಪುಟ್ಟರಾಜು, ಡಿ.ಸಿ.ತಮ್ಮಣ್ಣ, ಸಾ.ರಾ. ಮಹೇಶ್ ಇನ್ನಿತರರು ಈ ವೇಳೆ ಉಪಸ್ಥಿತರಿದ್ದರು.

ಕೇಂದ್ರದ ಖೇಲೋ ಇಂಡಿಯಾ ವೈಬ್ರೆಂಟ್ ಯೋಜನೆಯಡಿ ಮಂಡ್ಯದಲ್ಲಿ ಬಹುಪಯೋಗಿ ಕ್ರೀಡಾಂಗಣಕ್ಕೆ ಶಂಕುಸ್ಥಾಪನೆ

- ಕೇಂದ್ರ ಸಚಿವ ಮನ್ಸುಖ್ ಮಾಂಡವೀಯರಿಂದ ಕಾಮಗಾರಿಗೆ ಚಾಲನೆ
- 1.5 ಎಕರೆಯಲ್ಲಿ 14 ಕೋಟಿ ರೂ. ವೆಚ್ಚದಲ್ಲಿ ನಿರ್ಮಾಣ

ಮಂಡ್ಯ, ಮಾ.14– ಪ್ರಧಾನಮಂತ್ರಿ ನರೇಂದ್ರ ಮೋದಿ ನಾಯಕತ್ವದಲ್ಲಿ ದೇಶದ ಕ್ರೀಡಾ ಕ್ಷೇತ್ರದ ಬೆಳವಣಿಗೆಗೆ ಕೇಂದ್ರ ಸರ್ಕಾರ ಐತಿಹಾಸಿಕ ಸಹಕಾರ ನೀಡಿದೆ ಎಂದು ಕೇಂದ್ರದ ಯುವಜನ ಸೇವೆ, ಕ್ರೀಡೆ, ಉದ್ಯೋಗ ಹಾಗೂ ಕಾರ್ಮಿಕ ಸಚಿವ ಮನ್ಸುಖ್ ಮಾಂಡವೀಯ ಇಂದಿಲ್ಲಿ ಹೇಳಿದ್ದಾರೆ.

ಖೇಲೋ ಇಂಡಿಯಾ ವೈಬ್ರೆಂಟ್ ಯೋಜನೆಯ ವಿ.ಸಿ. ಫಾರಂನ ಕೃಷಿ ವಿಶ್ವವಿದ್ಯಾನಿಲಯದ ಆವರಣದ 1.5 ಎಕರೆ ಜಾಗದಲ್ಲಿ 14 ಕೋಟಿ ವೆಚ್ಚದ ಸುಸಜ್ಜಿತ ಬಹುಪಯೋಗಿ ನೂತನ ಕ್ರೀಡಾಂಗಣ ಕಾಮಗಾರಿಗೆ ಚಾಲನೆ ನೀಡಿ ಮಾತನಾಡಿದ ಅವರು, ಖೇಲೋ ಇಂಡಿಯಾ ಯೋಜನೆಯಡಿ ಅಥ್ಲೆಟಿಕ್, ಬ್ಯಾಡ್ಮಿಂಟನ್ ಸೇರಿದಂತೆ ದೇಶದ ಎಲ್ಲಾ ಕ್ರೀಡೆಗಳಿಗೂ ಕೇಂದ್ರ ಸರ್ಕಾರ ಪ್ರೋತ್ಸಾಹ ನೀಡಿದೆ. ವಿಶೇಷ ಚೇತನ ಕ್ರೀಡಾಪಟುಗಳಿಗೂ ನಮ್ಮ ಸರ್ಕಾರ ಬೆಂಬಲವಾಗಿ ನಿಂತಿದೆ ಎಂದರು.

ಕ್ರೀಡಾ ಕ್ಷೇತ್ರವನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಖೇಲೋ ಇಂಡಿಯಾ ಯೋಜನೆಯಡಿ ದೇಶದ ಪ್ರತಿ ಗ್ರಾಮ, ಪಟ್ಟಣ, ಶಾಲೆಗೂ ಕ್ರೀಡಾ ಕ್ಷೇತ್ರವನ್ನು ವಿಸ್ತರಿಸಲಾಗಿದೆ. ಯುವ ಕ್ರೀಡಾಪಟುಗಳಿಗೆ ಕೇಂದ್ರ ಸರ್ಕಾರ ಪ್ರೋತ್ಸಾಹ ▶ 10ನೇ ಪುಟಕ್ಕೆ

ಶೀಘ್ರದಲ್ಲೇ ಮಂಡ್ಯದಲ್ಲಿ ಸಾವಿರ ಕೋಟಿಯ ಎಲೆಕ್ಟ್ರಿಕ್ ವಾಹನಗಳ ಟೆಸ್ಟಿಂಗ್ ಸೆಂಟರ್ ಆರಂಭ

ಕೇಂದ್ರ ಸಚಿವ ಕುಮಾರಸ್ವಾಮಿ ಘೋಷಣೆ

ಮಂಡ್ಯ: ಪ್ರಸ್ತುತ ದೇಶದಲ್ಲಿ ಎಲೆಕ್ಟ್ರಾನಿಕ್ ವಾಹನಗಳಿಗೆ ಹೆಚ್ಚಿನ ಬೇಡಿಕೆ ಇದ್ದು, ಶೀಘ್ರದಲ್ಲೇ ಮಂಡ್ಯದಲ್ಲಿ ಸಾವಿರ ಕೋಟಿ ವೆಚ್ಚದಲ್ಲಿ ವಾಹನಗಳ ಟೆಸ್ಟಿಂಗ್ ಸೆಂಟರ್ ಆರಂಭಿಸಲಾಗುವುದು ಎಂದು ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ತಿಳಿಸಿದ್ದಾರೆ.

ಈ ವಾಹನಗಳ ಟೆಸ್ಟಿಂಗ್‌ಗಾಗಿ ದೂರದ ಪುಣೆ, ಮುಂಬೈಗೆ ಹೋಗಬೇಕಿದೆ. ನಮ್ಮ ರಾಜ್ಯದಲ್ಲೂ ಈ ಟೆಸ್ಟಿಂಗ್ ಸೆಂಟರ್ ಅವಶ್ಯಕತೆ ಇದ್ದು, ಶೀಘ್ರದಲ್ಲೇ ಸಾವಿರ ಕೋಟಿ ವೆಚ್ಚದಲ್ಲಿ ಮಂಡ್ಯದಲ್ಲಿ ಟೆಸ್ಟಿಂಗ್ ಸೆಂಟರ್ ಸ್ಥಾಪನೆ ಮಾಡಲಾಗುವುದು ಎಂದು ವಿ.ಸಿ.ಫಾರಂನಲ್ಲಿ ಕ್ರೀಡಾಂಗಣ ಕಾಮಗಾರಿಗೆ ಚಾಲನೆ ನೀಡಿ ಮಾತನಾಡಿದ ಅವರು, ಮುಂದಿನ ಯುಗಾದಿ ವೇಳೆಗೆ ಬರೀ ಮಂಡ್ಯ ಮಾತ್ರವಲ್ಲದೆ ಅಕ್ಕಪಕ್ಕದ ಜಿಲ್ಲೆಯ ಯುವಕರಿಗೂ ಉದ್ಯೋಗ ನೀಡುವ ದೃಷ್ಟಿಯಿಂದ ಅಟೋಮೊಬೈಲ್ ಇಂಡಸ್ಟ್ರೀ ಶೀಘ್ರದಲ್ಲೇ ಬರಲಿದೆ. 200ರಿಂದ 300 ಕೋಟಿ ವೆಚ್ಚದ ಸ್ಟಾರ್ಟ್ ಅಪ್ ಕಂಪನಿಯ ಮೂಲಕ ಉದ್ಯಮಗಳ ತರುತ್ತೇವೆ. ಪರಿಸರಕ್ಕೆ ಹಾನಿಯಾಗದಂತೆ ಈ ಯೋಜನೆ ಕಾರ್ಯಗತವಾಗಲಿದೆ ಎಂದರು.

ನಕ್ಕರೆ ಅದೇ ಸ್ವರ್ಗ

ಮಗ : ಅಪ್ಪ ನಾನು 10ನೇ ತರಗತಿ ಪಾಸ್ ಆಗಿದ್ದೀನಿ. ಮುಂದೆ ಡಾಕ್ಟರ್ ಆಗಿ ಕೊರೊನಾಗೆ ಔಷಧಿ ಕಂಡು ಹಿಡಿತಿನಿ.

ಅಪ್ಪ : ಹೊಡಿತಿನಿ ಮಗನೆ, ಕೊರೊನಾ ಕೃಪೆಯಿಂದ 10ನೇ ತರಗತಿ ಪಾಸಾಗಿದ್ದೀಯಾ, ಅಷ್ಟು ಕೃತಜ್ಞತೆ ಇಲ್ಲ ಅಂದ್ರೆ ಹೇಗೆ. ನೀನು ಇನ್ಯಾವುದಾದರೂ ರೋಗಕ್ಕೆ ಔಷಧಿ ಕಂಡು ಹಿಡಿ.

ಮೈಸೂರು ಮಿತ್ರ

ಭಾನುವಾರ, ಮಾರ್ಚ್ 15, 2026

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ..........

ಸಂತೋಷವಾಗಿರುವುದು ತುಂಬಾ ಸರಳ. ಆದರೆ, ಸರಳವಾಗಿರುವುದು ಮಾತ್ರ ತುಂಬಾ ಕಷ್ಟ – ರವೀಂದ್ರನಾಥ ಟಾಗೋರ್

ವೇದ ಸುಳ್ಳಾದರೂ { ಊರು ಸುಟ್ಟರೂ
ಗಾದೆ ಸುಳ್ಳಾಗದು { ಹನುಮಂತರಾಯ ಹೊರಗೆ

ನಿಮ್ಮ ಪತ್ರಗಳು

ಮೈಸೂರಿನಿಂದ ಹೊರನಾಡಿಗೆ ನೇರ ಬಸ್ ಸಂಪರ್ಕ ಕಲ್ಪಿಸಿ

ಮಾನ್ಯರೆ,

ಪ್ರಸಿದ್ಧ ಯಾತ್ರಾಸ್ಥಳ ಹೊರನಾಡು ಶ್ರೀ ಅನ್ನಪೂರ್ಣೇಶ್ವರಿ ಕ್ಷೇತ್ರಕ್ಕೆ ಮೈಸೂರಿನಿಂದ ರಾಜ್ಯ ಸಾರಿಗೆ ಬಸ್‌ಗಳು ಸಂಚರಿಸದೆ ಯಾತ್ರಿಕರಿಗೆ ತೀವ್ರ ಅನಾನುಕೂಲವಾಗಿದೆ. ರಾಜ್ಯದ ಮೂಲೆ–ಮೂಲೆಗಳಿಂದ ಶ್ರೀಕ್ಷೇತ್ರ ಹೊರನಾಡಿಗೆ ಕೆ.ಎಸ್.ಆರ್.ಟಿ.ಸಿ ಬಸ್‌ಗಳ ಸೌಲಭ್ಯವಿದ್ದು, ಮೈಸೂರಿನಂತಹ ಪ್ರಮುಖ ನಗರದಿಂದ ಬಸ್ ಸಂಪರ್ಕ ಇಲ್ಲದೇ ಇರುವುದು ನಿಜಕ್ಕೂ ದುರಾದೃಷ್ಟಕರ.

ಈ ಹಿಂದೆ ಗುಂಡ್ಲುಪೇಟೆ ಡಿಪೋದಿಂದ ಬೆಳಿಗ್ಗೆ 7ಕ್ಕೆ ಹೊರಟು ಮೈಸೂರು ಬಸ್ ನಿಲ್ದಾಣಕ್ಕೆ 9 ಗಂಟೆಗೆ ಬರುತ್ತಿದ್ದ ಗುಂಡ್ಲುಪೇಟೆ – ಹೊರನಾಡು ಬಸ್ ಸಂಚಾರವನ್ನು ಕಾರಣವಿಲ್ಲದೆ ರದ್ದುಪಡಿಸಲಾಗಿದೆ. ಈ ಬಸ್ ಹಾಸನ, ಚಿಕ್ಕಮಗಳೂರು ಮೂಲಕ ಸಂಜೆ 5 ಗಂಟೆಗೆ ಹೊರನಾಡು ತಲುಪುತ್ತಿತ್ತು. ಇದರಿಂದ ಅಪಾರ ಪ್ರಯಾಣಿಕರಿಗೆ ಅನುಕೂಲವಾಗುತ್ತಿತ್ತು ಆದರೆ ಈ ಬಸ್ ಸಂಚಾರವನ್ನು ಯಾವ ಕಾರಣಕ್ಕೆ ನಿಲುಗಡೆಗೊಳಿಸಲಾಗಿದೆ ಎಂಬುದು ತಿಳಿಯದಾಗಿದೆ.

ಇದೇ ರೀತಿ ಪ್ರತಿ ದಿನ ಸಂಜೆ 7 ಗಂಟೆಗೆ ಹೊರಡುತ್ತಿದ್ದ ಮೈಸೂರು ಕುದುರೆಮುಖ ಮಾರ್ಗದ ಬಸ್ ಅನ್ನು ಏಕಾಏಕಿ ನಿಲ್ಲಿಸಲಾಗಿದೆ. ಈ ಬಸ್ ಸಂಜೆ 7ಕ್ಕೆ ಹೊರಟು ಮರುದಿನ ಬೆಳಿಗ್ಗೆ 4 ಗಂಟೆಗೆ ಕಳಸ ತಲುಪುತ್ತಿತ್ತು ಇಲ್ಲಿಂದ ಪ್ರಯಾಣಿಕರು ಹೊರನಾಡಿಗೆ ತೆರಳಲು ಸಹಾಯಕವಾಗುತ್ತಿತ್ತು ಆದರೆ ಈ ಬಸ್ ಸಂಚಾರವನ್ನೂ ರದ್ದುಪಡಿಸಲಾಗಿದೆ. ಈ ಎರಡು ಬಸ್‌ಗಳ ನಿಲುಗಡೆಯಿಂದಾಗಿ ಮೈಸೂರಿನಿಂದ ಹೊರನಾಡಿಗೆ ಹೋಗುವ ಪ್ರಯಾಣಿಕರು ಹಾಸನ ಅಥವಾ ಚಿಕ್ಕಮಗಳೂರಿಗೆ ತೆರಳಿ ಅಲ್ಲಿಂದ ಹೊರನಾಡು ಕ್ಷೇತ್ರಕ್ಕೆ ಹೋಗಬೇಕಾದ ಪರಿಸ್ಥಿತಿ ಒದಗಿ ಬಂದಿದೆ. ದಯವಿಟ್ಟು ಸಾರಿಗೆ ಇಲಾಖೆ ಅಧಿಕಾರಿಗಳು ಮೈಸೂರಿನಿಂದ ಹೊರ ನಾಡಿಗೆ ನೇರ ಬಸ್ ಸಂಪರ್ಕ ಕಲ್ಪಿಸಬೇಕಾಗಿ ವಿನಂತಿ.

– ಹೆಚ್. ಆರ್. ಪ್ರಸಾದ್, ವಿವೇಕಾನಂದ ನಗರ, ಮೈಸೂರು,

ಮೈಸೂರಿಗೆ ಬೇಕಿದೆ ಸುಸಜ್ಜಿತ 'ಫುಡ್ ಸ್ಟ್ರೀಟ್'

ಮಾನ್ಯರೆ,

ಸಾಂಸ್ಕೃತಿಕ ನಗರಿ ಮೈಸೂರು ಎಂದರೆ ಕೇವಲ ಅರಮನೆ, ದೇವಾಲಯಗಳಲ್ಲ. ಅದು ಆಹಾರ ಪ್ರಿಯರ ಸ್ವರ್ಗವೂ ಹೌದು. ಮೈಸೂರು ಪಾಕ್‌ನಿಂದ ಹಿಡಿದು ಮೈಲಾರಿ ದೋಸೆಯವರೆಗೆ ಇಲ್ಲಿನ ರುಚಿ ಜಗತ್ಪ್ರಸಿದ್ಧ. ಆದರೆ, ಬೆಂಗಳೂರಿನ ವಿ.ವಿ. ಪುರಂ ಮಾದರಿಯಲ್ಲಿ ಮೈಸೂರಿನಲ್ಲಿ ಒಂದು ಸುಸಜ್ಜಿತ, ಅಧಿಕೃತ 'ಫುಡ್ ಸ್ಟ್ರೀಟ್' ಇಲ್ಲದಿರುವುದು ದೊಡ್ಡ ಕೊರತೆಯಾಗಿದೆ.

ಪ್ರಸ್ತುತ ನಗರದ ವಿವಿಧೆಡೆ ಚದುರಿ ಹೋಗಿರುವ ಆಹಾರದ ಗಾಡಿಗಳನ್ನು ಒಂದೇ ಸೂರಿನಡಿ ತರುವುದು ಇಂದಿನ ಅಗತ್ಯ. ಇದರಿಂದ ಪ್ರವಾಸಿಗರಿಗೆ ಸ್ಥಳೀಯ ಖಾದ್ಯಗಳನ್ನು ಸವಿಯಲು ಸುಲಭವಾಗುತ್ತದೆ. ಒಂದು ನಿಗದಿತ ಜಾಗದಲ್ಲಿ ಶುದ್ಧ ಕುಡಿಯುವ ನೀರು, ವೈಜ್ಞಾನಿಕ ಕಸ ವಿಲೇವಾರಿ ಮತ್ತು ಪಾರ್ಕಿಂಗ್ ವ್ಯವಸ್ಥೆಯೊಂದಿಗೆ ಈ ಆಹಾರದ ಬೀದಿಯನ್ನು ಅಭಿವೃದ್ಧಿಪಡಿಸಬೇಕು.

ಇದು ಕೇವಲ ರುಚಿಯ ತಾಣವಾಗದೆ, ನೂರಾರು ಸಣ್ಣ ವ್ಯಾಪಾರಿಗಳಿಗೆ ಉದ್ಯೋಗ ನೀಡುವ ಆರ್ಥಿಕ ಕೇಂದ್ರವಾಗಬಲ್ಲದು. ಮೈಸೂರಿನ ಪಾರಂಪರಿಕ ಸೊಗಡಿಗೆ ಧಕ್ಕೆಯಾಗದಂತೆ ಒಂದು ಹೈಟೆಕ್ 'ಫುಡ್ ಸ್ಟ್ರೀಟ್' ನಿರ್ಮಾಣವಾದರೆ, ಅದು ಪ್ರವಾಸೋದ್ಯಮಕ್ಕೆ ಹೊಸ ಕಳೆ ತರುವುದರಲ್ಲಿ ಸಂಶಯವಿಲ್ಲ. ಆಡಳಿತ ಮಂಡಳಿ ಈ ನಿಟ್ಟಿನಲ್ಲಿ ಶೀಘ್ರ ಗಮನಹರಿಸಬೇಕಿದೆ.

–ತೇಜಸ್. ಜಿ.ಎಂ, ಪತ್ರಿಕೋದ್ಯಮ ವಿದ್ಯಾರ್ಥಿ, ಮಹಾರಾಜ ಕಾಲೇಜು, ಮೈಸೂರು

ರಸ್ತೆಗೆ ಡಾಂಬರ್ ಹಾಕಿಸಲು ಮನವಿ



ಮಾನ್ಯರೆ,

ಸರಗೂರು ತಾಲೂಕಿನಲ್ಲಿರುವ ಕಾಳಿಹುಂಡಿ ಗ್ರಾಮ ಡಾಂಬರ್ ಕಾಣದೆ ಹಲವು ವರ್ಷಗಳೇ ಆಗಿವೆ. ವಿಪರೀತ ಹಳ್ಳ–ಕೊಳ್ಳಗಳಿಂದ ಈ ರಸ್ತೆಯು ಕೂಡಿದೆ ಈ ರಸ್ತೆ ಹೊಮ್ಮರಗಳ್ಳಿ ಹಾಗೂ ಹೆಗ್ಗಡದೇವನ ಕೋಟೆಗೆ ಸಂಪರ್ಕ ಕಲ್ಪಿಸುತ್ತದೆ. ಇಂತಹ ರಸ್ತೆಯಲ್ಲಿ ಯಾವುದಾದರೂ ಒಂದು ವಾಹನ ಬಂದರೆ ಅದರ ಹಿಂದೆ ವಿಪರೀತ ಧೂಳು ಬರತೊಡಗುತ್ತದೆ. ಅದು ಎಷ್ಟರ ಮಟ್ಟಿಗೆ ಎಂದರೆ ರಸ್ತೆಯೇ ಕಾಣದಂತೆ ಧೂಳು ಅಕ್ಕಪಕ್ಕ ದಟ್ಟವಾಗಿ ಆವರಿಸಿಕೊಳ್ಳುತ್ತದೆ. ಇಂತಹ ಧೂಳಿನಿಂದ ಪರಿಸರ ಕಲುಷಿತವಾಗುವುದಲ್ಲದೆ, ಪ್ರತಿಯೊಬ್ಬ ಮನುಷ್ಯನಿಗೂ ನಾನಾ ರೀತಿ ಆರೋಗ್ಯ ಸಮಸ್ಯೆ ಎದುರಿಸುವಂತೆ ಮಾಡುತ್ತದೆ. ಅಲ್ಲದೆ ಈ ರಸ್ತೆಯು ಹಳ್ಳ ಕೊಳ್ಳಗಳಿಂದ ಕೂಡಿರುವುದರಿಂದ ದ್ವಿಚಕ್ರ ವಾಹನ ಸವಾರರು ಈ ರಸ್ತೆಯಲ್ಲಿ ಹಲವು ಬಾರಿ ಬಿದ್ದು ಕೈ, ಕಾಲು ಮುರಿದು ಕೊಂಡಿರುವ ಉದಾಹರಣೆಗಳು ಜೊತೆಗೆ ಆಗಾಗ ಅಪಘಾತಗಳು ಎದುರಾಗುತ್ತಿವೆ. ಮಳೆಗಾಲದಲ್ಲಂತೂ ಪಾದಚಾರಿಗಳಿಗೆ ಹಾಗೂ ವಾಹನ ಸವಾರರಿಗೆ ಈ ರಸ್ತೆಯಲ್ಲಿ ಓಡಾಡುವುದು ಒಂದು ರೀತಿಯ ಸವಾಲಿನ ಸಂಗತಿಯಾಗಿದೆ. ಆದ್ದರಿಂದ ಸಂಬಂಧಪಟ್ಟ ಜನಪ್ರತಿನಿಧಿಗಳು ಮತ್ತು ಅಧಿಕಾರಿಗಳು ಈ ರಸ್ತೆಗೆ ಡಾಂಬರು ಹಾಕಿಸಲು ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಮನವಿ.

–ಸಾಯಿ ಸಂದೇಶ್ ಬಿ.ಎಸ್., ಮೈಸೂರು

ವಯೋಮಿತಿ ಸಡಿಲಿಕೆ ಪರಿಷ್ಕರಣೆ ಅಗತ್ಯ

ಮಾನ್ಯರೆ,

ಸರ್ಕಾರಿ ಹುದ್ದೆಗಳಿಗೆ ನೇರ ನೇಮಕಾತಿಗೆ ಸಂಬಂಧಿಸಿದಂತೆ ಗರಿಷ್ಠ ವಯೋಮಿತಿಯನ್ನು ಒಂದು ಬಾರಿಗೆ ಐದು ವರ್ಷ ವಿಸ್ತರಿಸಿರುವುದು ಸ್ವಾಗತಾರ್ಹ. ಈ ಆದೇಶವು 2026ರ ಜನವರಿ 29ರಿಂದ ಅನುಮೋದನೆ ಆಗಿ 2027ರ ಡಿಸೆಂಬರ್ 31ರವರೆಗೆ ಜಾರಿಯಲ್ಲಿ ಇರಲಿದೆ. ಇದು ಸಾವಿರಾರು ಉದ್ಯೋಗಾಕಾಂಕ್ಷಿಗಳಿಗೆ ಸಂತಸ ತಂದಿದೆ. ಆದರೆ, ಜನವರಿ 1ರಿಂದ 28ರ ವರೆಗೆ ಜನಿಸಿದವರ ಪಾಲಿಗೆ ಮರಣಶಾಸನವಾಗಿದೆ. ನಾಲ್ಕೈದು ವರ್ಷಗಳಿಂದ ಹೊಸದಾಗಿ ನೇಮಕಾತಿಯೇ ನಡೆದಿಲ್ಲ. ಹಾಗಾಗಿ, ವಯೋಮಿತಿ ವಿಸ್ತರಣೆ ಆದೇಶದಿಂದ ಈ ಅವಧಿಯಲ್ಲಿ ಜನಿಸಿದವರಿಗೆ ಅನ್ಯಾಯವಾಗಲಿದೆ. ಜನವರಿ 1ರಿಂದ ಅನ್ವಯಿಸುವಂತೆ ಆದೇಶ ಪರಿಷ್ಕರಿಸಿ ಹೊರಡಿಸಿದರೆ ಅನುಕೂಲವಾಗಲಿದೆ.

–ಆನಂದ ಎಸ್. ಟಿ, ಹೆಮ್ಮಿಗೆ ಕಾಲೋನಿ, ಮಹಾರಾಜ ಕಾಲೇಜು, ಮೈಸೂರು



ಡಾ.ರಮಾ ವಿ. ಬೆಣ್ಣೂರ್
ಸಂಗೀತ ವಿಮರ್ಶಕರು
ಮೊ: 99452 82346

ನಾದಲಹರಿ

ಹೆಣ್ಣಿನ ಎರಡು ಮುಖ....

ಉತ್ತರ ಕರ್ನಾಟಕದ ಒಂದು ಚಿಕ್ಕ ಊರಿನಲ್ಲಿ ಅದೊಂದು ಬಡ ಬ್ರಾಹ್ಮಣರ ಮನೆ. ಮನೆ ತುಂಬ ಮಕ್ಕಳು. ಒಪ್ಪತ್ತಿಗಿದ್ದರೆ, ಒಪ್ಪತ್ತಿಗಿಲ್ಲ. ಮನೆಯ ಮರ್ಯಾದೆಗಿಂತ ದೊಡ್ಡದು ಯಾವುದೂ ಇಲ್ಲ ಎಂಬುದನ್ನೇ ನಂಬಿಕೊಂಡು ಬಂದಂತಹ ಕುಟುಂಬ.

ಮಕ್ಕಳನ್ನು ಶಾಲೆಗೆ ಕಳುಹಿಸದೆ ಮನೆಯಲ್ಲೇ ಕಲಿಸಿದರೆ, ಸ್ವಲ್ಪ ರೊಕ್ಕವಾದರೂ ಉಳಿಯುತ್ತದೆ ಎಂಬಂತಹ ಪರಿಸ್ಥಿತಿ. ತಂದೆ ಎನಿಸಿಕೊಂಡವನು ದುಡಿಮೆಗಿಂತ ಅವರಿವರೊಡನೆ ಹರಟೆ ಕೊಚ್ಚುತ್ತಾ, ಗುಡಿಗಳಲ್ಲಿ, ಮದುವೆ, ಮುಂತಾದ ಸಮಾರಂಭಗಳಲ್ಲಿ ಬ್ರಾಹ್ಮಣರ ಪಂಜ್ತೆಯಲ್ಲಿ ಊಟ ಗಿಟ್ಟಿಸುತ್ತಾ ಕಾಲಯಾಪನೆ ಮಾಡುತ್ತಿದ್ದವನು.

ಮಕ್ಕಳನ್ನು ಹುಟ್ಟಿಸಿದರೆ ತನ್ನ ಜವಾಬ್ದಾರಿ ಮುಗಿಯಿತೆಂದು ಗಟ್ಟಿಯಾಗಿ ನಂಬಿದವನು. ಅವಳು ಅಂತಹ ಕುಟುಂಬದ ಹಿರಿಯ ಹೆಣ್ಣು ಮಗಳು. ವಯಸ್ಸಿಗೆ ಬರುವವರೆಗೂ ತಾಯಿ ಅವರಿವರ ಮನೆಯಲ್ಲಿ ಅಡುಗೆ ಮಾಡಲೋ ಮತ್ತೇನಾದರೂ ವಿಶೇಷ ಸಂದರ್ಭಗಳಲ್ಲಿ ಸಹಾಯ ಮಾಡಲೋ ಹೋಗುತ್ತಿದ್ದಾಗ, ಆಸೆಯ ಕಣ್ಣುಗಳಿಂದ ಅಲ್ಲಿ ನಡೆಯುತ್ತಿದ್ದುದೆಲ್ಲವನ್ನೂ ನೋಡುತ್ತಾ, ತನ್ನದೇ ಒಂದು ಸುಂದರ ಕನಸನ್ನು ಕಟ್ಟಿಕೊಂಡು, ಅದರಲ್ಲಿ ರಾಣಿಯಂತೆ ಸುಖಿಸುತ್ತಿದ್ದ ಎಳೆಯ ಜೀವ.

ಇದ್ದಕಿದ್ದಂತೆ ಒಂದು ದಿನ ಆ ತಂದೆ ಅನಿಸಿಕೊಂಡವನು ರಸ್ತೆಯಲ್ಲಿ ಎಡವಿ ಬಿದ್ದುದೇ ನೆವವಾಗಿ ತೀರಿಕೊಂಡ. ಇಡೀ ಕುಟುಂಬದ ಜವಾಬ್ದಾರಿಯನ್ನು ಮೊದಲೇ ಹೊತ್ತಿದ್ದ ಆ ಮನೆಯಾಕೆ ತನ್ನ ಸೆರಗನ್ನು ಮತ್ತಷ್ಟು ಗಟ್ಟಿಯಾಗಿ ಬಿಗಿದು, ಹೆಚ್ಚಿನ ದುಡಿಮೆಗೆ ತೊಡಗಿಕೊಂಡಳು. ಅವರಿವರ ನೆರವಿನಿಂದ ಮಕ್ಕಳ ವಿದ್ಯಾಭ್ಯಾಸ ನಿಲ್ಲದಂತೆ ನೋಡಿಕೊಂಡಳು.

ದೂರದ ಊರಿನಿಂದ ಬಂದ ಒಂದು ಸಂಬಂಧಕ್ಕೆ ಮಗಳನ್ನು ಕೊಟ್ಟು ಅದು ಹೇಗೋ ಲಗ್ನವನ್ನೂ ಮಾಡಿ ಮುಗಿಸಿದಳು. ಗಂಡನ ಮನೆಗೆ ಹೋದಳು ಈ ಹುಡುಗಿ. ಹೊಸ ಜಾಗ, ಹೊಸ ಮಂದಿ, ಎಲ್ಲವೂ ಹೊಸಹೊಸತು. ಸಂಭ್ರಮದಿಂದಲೇ ತನ್ನ ಹೊಸ ಬದುಕನ್ನು ಆರಂಭಿಸಿದಳು. ತಾಯಿ ಮನೆಗೆಲಸವನ್ನೆಲ್ಲಾ ಕಲಿಸಿದುದರಿಂದ ಕೆಲಸ ಮಾಡುವುದು ಅವಳಿಗೆ ಕಷ್ಟ ಎಂದು ಅನಿಸಲಿಲ್ಲ. ಜೊತೆಗೆ ಪ್ರೀತಿಯಿಂದ ನೋಡಿಕೊಳ್ಳುತ್ತಿದ್ದ ಗಂಡ. ಇಷ್ಟು ಸಾಕು ನನಗೆ ಎಂದು ಆ ಕಾಣದ ದೇವನಿಗೆ ಕೈಮುಗಿದಳು. ಮನೆಯಲ್ಲಿ ವಯಸ್ಸಾದ ಮಾವ ಇದ್ದರು. ಸಾಕಷ್ಟು ಹೊಲ ಇದ್ದಿತು. ಜೋಳ, ಶೇಂಗಾ, ಹೆಸರು ಬೆಳೆಯುತ್ತಿದ್ದರು. ರೈತ ಮಕ್ಕಳಿಗೂ ಅಡುಗೆ ಮಾಡಿ ಬಡಿಸುತ್ತಾ ಎಲ್ಲರಿಂದ ಒಳ್ಳೆಯವಳೆಂಬ ಹೆಸರು ಪಡೆದಳು ಆ ಹುಡುಗಿ.

ಅದು ಬೇಸಗೆಯ ದಿನಗಳು. ಹೊಲದಲ್ಲಿ ಸಾಕಷ್ಟು ನೀರಿರದೆ, ದನಕರುಗಳಿಗೂ ನೀರಿಲ್ಲದೆ ಪಡಬಾರದ ಕಷ್ಟಪಡುವಂತಹ ಪರಿಸ್ಥಿತಿ ಎದುರಾಗಿತ್ತು. ಆ ವೇಳೆಗೆ ಅವಳ ಕೈಯಲ್ಲೊಂದು ಕೂಸು, ಹೊಟ್ಟೆಯೊಳಗೊಂದು ಕೂಸು. ಕುಡಿಯುವ ನೀರಿಗೆ ದೂರದ ಬಾವಿಯನ್ನು ಹುಡುಕಿಕೊಂಡು ಹೋಗಬೇಕಾಗಿತ್ತು. ಗಂಡ ತಮ್ಮ ಹೊಲದಲ್ಲಿ ಬೋರ್ ತೆಗೆಸಲು ನಿರ್ಧರಿಸಿದ. ಪ್ರತಿ ದಿನ ಅದರ ಕೆಲಸ ಜೋರಾಗಿ



ನಡೆಯುತ್ತಿತ್ತು. ಎಷ್ಟು ಆಳ ಕೊರೆದರೂ ನೀರಿನ ಪಸೆ ಕಾಣಲೊಲ್ಲದು. ಅಂದು ಆತ ಬೇಗನೇ ಎದ್ದು ಹೊಲಕ್ಕೆ ಹೋಗಿದ್ದ. ಬೋರಿನಿಂದ ತೆಗೆದ ಮಣ್ಣಿನ ರಾಶಿ ಪಕ್ಕದಲ್ಲಿಯೇ ಬಿದ್ದಿತ್ತು. ಅದರ ಮೇಲೆ ನಿಂತು ಆಳುಗಳು ಕೆಲಸ ಮಾಡುವುದನ್ನೇ ನೋಡುತ್ತಿದ್ದ. ತಲೆಯಲ್ಲಿ ನೀರಿನದೇ ಚಿಂತಿ ಕಾಡುತ್ತಿತ್ತು. ಇದ್ದಕ್ಕಿದ್ದಂತೆ ಆತ ನಿಂತ ಮಣ್ಣಿನ ಗುಡ್ಡ ಧಡಕ್ಕನೆ ಕುಸಿಯಿತು. ಕುಸಿದು ಆಳಕ್ಕೆ ಇಳಿಯಿತು. ಎಲ್ಲರೂ ಹೋ ಹೋ ಧಣ್ಯಾರು ಬಿದ್ರು ಎಂದು ಕೂಗುತ್ತಾ ಬರುವಷ್ಟರಲ್ಲಿ ಆತನ ದೇಹ ಮಾಯವಾಗಿತ್ತು. ಸುತ್ತಮುತ್ತಲಿನ ಹೊಲದಲ್ಲಿಯ ಜನ ಎಲ್ಲರೂ ಓಡಿ ಬಂದರು. ಪೋಲೀಸರೂ ಬಂದರು. ಎಷ್ಟು ಹುಡುಕಾಡಿದರೂ ಆತನ ದೇಹ ಮಾತ್ರ ಭೂದೇವಿಯ ಮಡಿಲಿನಿಂದ ಹೊರ ಬರಲೇ ಇಲ್ಲ. ಆಕೆಯ ಮೇಲೆ ಆಕಾಶವೇ ಕಳಚಿ ಬಿದ್ದಂತಹ ಅನುಭವ. ಏನು ಮಾಡಬೇಕೆಂಬುದನ್ನು ಅರಿಯದೇ ಕುಸಿದು ಕುಳಿತಳು.

ಕೆಲವೇ ದಿನಗಳಲ್ಲಿ ಹೆಣ್ಣುಕೂಸು ಹುಟ್ಟಿತು. ಹಿರಿಯ ಮಗ ಮತ್ತು ಮಗಳನ್ನು ಬೆಳೆಸುವ ಹೊಣೆ ಇದೀಗ ಅವಳ ಮೇಲೆ. ಹೊಟ್ಟೆ ಬಟ್ಟೆಗೆ ಕೊರತೆ ಇರಲಿಲ್ಲ. ಹಲ್ಲು ಕಚ್ಚಿ ಮುಂದಿನ ಜೀವನಕ್ಕೆ ಅವಳ ಮನಸ್ಸು ತಯಾರಾಯಿತು. ಮಕ್ಕಳನ್ನು ಓದಿಸಿ, ಅವರನ್ನು ತಮ್ಮ ಕಾಲ ಮೇಲೆ ನಿಲ್ಲುವಂತೆ ತಯಾರು ಮಾಡುವುದೇ ಅವಳ ಬದುಕಿನ ಗುರಿ ಆಯಿತು. ಅದರಲ್ಲಿ ಅವಳು ಯಶಸ್ಸನ್ನೂ ಪಡೆದಳು.

ಈಕೆ ಒಂದು ಶಾಲೆಯಲ್ಲಿ ಉಪಾಧ್ಯಾಯಿನಿ. ಓದುವ ಹಂಬಲವನ್ನು ಇಟ್ಟುಕೊಂಡಿದ್ದಾಕೆ. ಹೀಗಾಗಿ ನೌಕರಿ ಮಾಡುತ್ತಲೇ ಸಾಹಿತ್ಯದಲ್ಲಿ ಎಂ.ಎ. ಪದವಿಯನ್ನೂ ಮಾಡಿಕೊಂಡಳು. ಗಂಡ ಒಂದು ಪ್ರೈವೇಟ್ ಕಂಪನಿಯಲ್ಲಿ ಕೆಲಸ ಮಾಡಿ ನಿವೃತ್ತಿ ಹೊಂದಿದ್ದಾತ. ಒಳ್ಳೆಯ ಸ್ವಭಾವದವ. ನಾಕು ಜನ ಸೇರಿದಾಗ, ಹೇಗೆ ಮಾತನಾಡಬೇಕೆಂಬ ಶಿಷ್ಟಾಚಾರವನ್ನು ಅರಿಯದವ. ಮನಸ್ಸಿಗೆ ಬಂದದ್ದನ್ನು ನೇರವಾಗಿ ಹೇಳಿಬಿಡುವಾತ. ಹೀಗಾಗಿ ಓದಿದ ಆಕೆಗೆ ಅದು ತುಂಬಾ ಇರುಸು ಮುರುಸಾಗುತ್ತಿತ್ತು. ಆಕೆ ಇಂಗ್ಲೀಷ್, ಕನ್ನಡ ಕಾದಂಬರಿಗಳನ್ನು ಓದುತ್ತಿದ್ದಂತೆ ಆಕೆಯಲ್ಲಿ ಗಂಡನಿಗಿಂತ ತಾನು ಬಹಳ ಮಾಡರ್ನ್ ಎಂಬ ಅಹಂ ಬೆಳೆಯತೊಡಗಿತು. ಆತ ಮಾಡುವದೆಲ್ಲದರಲ್ಲಿಯೂ ಆಕೆಗೆ ತಪ್ಪೇ ಕಾಣಿಸತೊಡಗಿತು. ಹೀಗಾಗಿ, ರೀ, ಸ್ವಲ್ಪ ಸುಮ್ಮನಿರುತ್ತೀರಾ ಎಂದು ಹೇಳುವುದು ಆಕೆಯ ದಿನನಿತ್ಯದ ಮಾತಾಯಿತು. ಕ್ರಮೇಣ, ಈ ಮಾತು ಬಂದವರ ಎದುರಿಗೂ ಜೋರಾಗಿಯೇ ಕೇಳತೊಡಗಿದಂತೆ ಆತನಲ್ಲಿ ಕೀಳರಿಮೆ ಹೆಚ್ಚಾಗತೊಡಗಿತು. ಅದೇಕೋ ಹಾಗೆ ಮಾತನಾಡಬೇಡ ಎಂದು ಅವಳಿಗೆ ಗದರಿ ಹೇಳಲಾರದವನಾಗಿದ್ದ. ಆತ್ಮೀಯರಲ್ಲಿ ತನ್ನ ನೋವನ್ನು ಹೇಳಿಕೊಳ್ಳದಿದ್ದರೂ ಅವನಲ್ಲಿ ದಿನೇ ದಿನೇ ಕುಗ್ಗುತ್ತಿದ್ದ ಆತ್ಮವಿಶ್ವಾಸವನ್ನು ಗುರುತಿಸಿದ್ದ ಅವರಿಗೆ ಅದು ಅರ್ಥವಾಗುತ್ತಿತ್ತು.

ಗಂಡನಿಗೆ ಕಂಪ್ಯೂಟರ್ ತಲೆಬುಡ ಅರ್ಥವಾಗುತ್ತಿರಲಿಲ್ಲ. ಅದೆಲ್ಲವೂ ಏನಿದ್ದರೂ ಓದಿದ ಹೆಂಡತಿಯ ಇಲಾಖೆಗೆ ಸೇರಿದುದು. ಅದರಲ್ಲಿ ಅವಳು ದಿನೇ ದಿನೇ ಆಸಕ್ತಿಯನ್ನು ಹೆಚ್ಚು ಮಾಡಿಕೊಳ್ಳುತ್ತಾ ತನ್ನ ಶಿಷ್ಯರ ಸಹಾಯವನ್ನೂ ತೆಗೆದುಕೊಳ್ಳುತ್ತಾ ಮುಂದುವರೆಯುತ್ತಿದ್ದಳು. ಇದ್ಯಾವುದನ್ನೂ ತಲೆಗೆ ಹಚ್ಚಿಕೊಳ್ಳದ ಆತ, ತನ್ನ ಗೆಳೆಯರೊಡನೆ ಆ ಊರು, ಈ ಊರು ಎಂದು ಆರಾಮವಾಗಿ ಸುತ್ತಾಡಿಕೊಂಡಿದ್ದ. ಅಪ್ಪಿತಪ್ಪಿಯೂ ನೀನೂ ಬರುತ್ತೀಯಾ? ಎಂದು ಕೇಳುತ್ತಿರಲಿಲ್ಲ. ಅವಳು ಬರುವುದಿಲ್ಲ ಎಂದೂ ಗೊತ್ತಿತ್ತು. ಅವಳು ಒಮ್ಮೆಯಾದರೂ ನನ್ನನ್ನು ಬಾ ಎಂದು ಕರೆಯುತ್ತಾರಾ ನೋಡು? ಎಂದು ಮನಸ್ಸಿನಲ್ಲಿಯೇ ಸಿಟ್ಟು ಮಾಡಿಕೊಳ್ಳುತ್ತಿದ್ದಳು. ದುಡ್ಡಿನ ವ್ಯವಹಾರದಲ್ಲಿ ಆತ ಬುದ್ಧಿವಂತ. ಎರಡು ಮೂರು ಮನೆಯ ಬಾಡಿಗೆ ಬರುವಂತೆ ಮಾಡಿಕೊಂಡಿದ್ದ. ಹೆಂಡತಿಗೆ ಯಾವುದೇ ರೀತಿಯಲ್ಲಿ ತೊಂದರೆ ಆಗದಂತೆ ಆಸ್ತಿ ಪಾಸ್ತಿ ಮಾಡಿಕೊಂಡಿದ್ದ. ಆಕೆ ಅವನನ್ನು ಎಷ್ಟೇ ಕೀಳಾಗಿ ನೋಡಿದರೂ ಅವನಿಗೆ ತನ್ನ ಹೆಂಡತಿಯ ಮೇಲೆ ಪ್ರೀತಿ, ಅಭಿಮಾನ ಇದ್ದಿತು. ಅದನ್ನು ಗುರುತಿಸಲಾರದವಳಾಗಿದ್ದಳು ಆಕೆ. ಏನಿದ್ದರೂ ಖರ್ಚು ಮಾಡುವುದು ತನ್ನ ಹಕ್ಕು ಎಂಬಂತೆ ಇದ್ದಳು ಅಷ್ಟೆ. ಶಿಷ್ಯರೊಡನೆ, ಸ್ನೇಹಿತರೊಡನೆ ಆಕೆ ಇಂಗ್ಲೀಷಿನಲ್ಲಿಯೇ ಮಾತನಾಡುತ್ತಿದ್ದುದು.

ಆಕೆ ತನ್ನ ಎಜುಕೇಟೆಡ್ ಗೆಳತಿಯರೊಡನೆ ಒಮ್ಮೆ ರೆಸ್ಟೋರೆಂಟಿಗೆ ಊಟಕ್ಕೆ ಹೋಗಿದ್ದಳು. ಊಟ ಮುಗಿಸಿ ಹಿಂದಿರುಗುತ್ತಿದ್ದಾಗ ಜಾರಿಬಿದ್ದಳು. ಅವಳ ಕಾಲಿನ ಮೂಳೆ ಮುರಿದಿತ್ತು. ಗೆಳತಿಯರು ಕೂಡಲೇ ಅವಳ ಗಂಡನಿಗೆ ಫೋನ್ ಮಾಡಿದರು. ಗಾಬರಿಯಿಂದ ಓಡಿಬಂದ. ನೋವಿನಿಂದ ನರಳುತ್ತಿದ್ದ ಅವಳನ್ನು ನೋಡಿ ಅವನ ಕಣ್ಣಿನಲ್ಲಿ ನೀರು ತುಂಬತೊಡಗಿತು. ಕೂಡಲೇ ಅವಳನ್ನು ಆಸ್ಪತ್ರೆಗೆ ಸೇರಿಸಿದ. ಕೂಡಲೇ ಅವಳ ಮುರಿದ ಮೂಳೆಯ ಶಸ್ತ್ರ ಚಿಕಿತ್ಸೆ ಆಗಬೇಕೆಂದ ವೈದ್ಯರ ಹೇಳಿಕೆಯಂತೆ ಅವಳನ್ನು ಅಡ್ಮಿಟ್ ಮಾಡಿ, ಹತ್ತು ದಿನಗಳ ಕಾಲ ಕಣ್ಣಲ್ಲಿ ಕಣ್ಣಿಟ್ಟು ಅವಳನ್ನು ನೋಡಿಕೊಂಡ. ಅವಳ ಒಳಗಣ್ಣಿಗೆ ಅವನ ಪ್ರೀತಿ ಅರ್ಥವಾಗತೊಡಗಿತ್ತು.


ಆರ್ಷಸಾಹಿತ್ಯಕ್ಕೆ ಹೊಸ ಸ್ಪರ್ಶ ನೀಡಿದ 'ಬನ್ನಂಜೆ'

ಸಂಸ್ಕೃತ ವಾಙ್ಮಯದಲ್ಲಿ ಭರತ ಭೂಮಿಯ ಕೀರ್ತಿ ಎರಡು ಮಹಾ ಕಾವ್ಯಗಳಿಂದ ಅಮರವಾಗಿದೆ. ಅವುಗಳಲ್ಲಿ ಒಂದು–ಶ್ರೀಮದ್ವಾಲ್ಮೀಕಿ ರಾಮಾಯಣ, ಇನ್ನೊಂದು ವ್ಯಾಸರಚಿತ ಶ್ರೀಮನ್ಮಹಾಭಾರತ. ವೇದಗಳ ನಂತರ ಈ ಮಹಾ ಕಾವ್ಯಗಳು ಜೀವನಾದರ್ಶ ಗ್ರಂಥಗಳಾಗಿ ಕೋಟಿ ಕೋಟಿ ಭಾರತೀಯರ ಹೃದಯದಲ್ಲಿ ನೆಲೆಗೊಂಡಿವೆ.

ಈ ಎರಡರಿಂದ ಆಗಬಹುದಾದ ಜೀವನ ಶೋಧನೆಯು ಪ್ರಪಂಚದ ಮತ್ತಾವ ಕಾವ್ಯಗಳಿಂದಲೂ ಆಗಲಾರವು ಎಂದರೆ ಅದು ಅತಿಶಯೋಕ್ತಿಯಾಗಲಾರದು. ಮನುಷ್ಯ ಜೀವನದ ಅರ್ಥವೇನು, ಧರ್ಮವೇನು, ಸಾರಭೂತವಾದ ಗುಣಗಳೇನು ಎಂಬಿತ್ಯಾದಿ ಪ್ರಶ್ನೆಗಳಿಗೆ ರಾಮಾಯಣ, ಮಹಾಭಾರತಗಳಿಂದ ಸಾಕಷ್ಟು ಉತ್ತರಗಳನ್ನು ಕಂಡುಕೊಳ್ಳಬಹುದು.

ಆದರೂ ಅವು ಒಮ್ಮೊಮ್ಮೆ ನಮಗೆ ಎಟುಕುವುದಿಲ್ಲ. ಅದರ ಒಳಮರ್ಮವನ್ನು, ಸಾಂಕೇತಿಕತೆಯನ್ನು, ಸಂದೇಶ– ಆದರ್ಶಗಳನ್ನು, ಅವುಗಳಲ್ಲಿ ಕಂಡುಬರುವ ಗುಣಾವಗುಣಗಳನ್ನು, ಧರ್ಮಾಧರ್ಮಗಳನ್ನು, ಒಳಿತು–ಕೆಡುಕುಗಳನ್ನು ತೋರಿಸಿ ಕೊಡುವುದಕ್ಕೆ ಖಂಡಿತವಾಗಿಯು ಒಬ್ಬ ಗುರು ಬೇಕಾಗುತ್ತಾನೆ. ಅಂತಹ ಗುರುಗಳಲ್ಲಿ ಒಬ್ಬರು ವಿದ್ಯಾವಾಚಸ್ಪತಿ **ಡಾ॥ ಬನ್ನಂಜೆ ಗೋವಿಂದಾಚಾರ್ಯರು**, ಇನ್ನೊಬ್ಬರು **ವಾಲ್ಮೀಕಿ–ವ್ಯಾಸ ಹೃದಯಜ್ಞ ಎಂದೇ ಖ್ಯಾತರಾದ ಡಾ॥ ಕೆ.ಎಸ್. ನಾರಾಯಣಾಚಾರ್ಯರು**. ಇವರಿಬ್ಬರೂ ಇಂದು ನಮ್ಮೊಂದಿಗೆ ಇಲ್ಲ. ಆದರೆ ಅವರು ರಚಿಸಿದ ಕೃತಿಗಳು, ಅವರ ಪ್ರವಚನಗಳು (ಕ್ಯಾಸೆಟ್ ಹಾಗೂ ಸಿ.ಡಿ. ರೂಪಗಳಲ್ಲಿ) ನಮ್ಮೊಂದಿಗೆ ಇವೆ. ರಾಮಾಯಣ–ಭಾರತದ ಒಳಬಗೆ–ಗುಟ್ಟು–ಸ್ವಾರಸ್ಯಗಳನ್ನು ಅರಿಯುವ ಸಲುವಾಗಿ ಇಬ್ಬರೂ ಒಂದೊಂದು ಮಾರ್ಗವನ್ನು ಅನುಸರಿಸಿದರು.

ಕೆ.ಎಸ್.ನಾರಾಯಣಾಚಾರ್ಯರು ಐರೋಪ್ಯ ಸಾಹಿತ್ಯ ಕೃಷಿಯ ವಿಮರ್ಶಾಮಾನದಂಡವನ್ನೂ, ಭಾರತೀಯ ವ್ಯಾಖ್ಯಾನ ಪರಂಪರೆಯನ್ನೂ, ಇಲ್ಲಿಯ ಕಾವ್ಯಮೀಮಾಂಸೆಯ ಅಳತೆಗೋಲನ್ನೂ ಇಟ್ಟುಕೊಂಡು ಈ ಮಹಾಕಾವ್ಯಗಳ ಅಂತರಂಗವನ್ನು ಮೊಗೆದು ಮೊಗೆದು ಕೊಟ್ಟರು. ಬನ್ನಂಜೆಯವರು ಇಲ್ಲಿಯ ಮಹಾಕಾವ್ಯಗಳ ಉಪಕ್ರಮ–ಉಪಸಂಹಾರಗಳಿಂದಲೇ, ಅದರ ಪೂರ್ವೋತ್ತರ ಸಮನ್ವಯದಿಂದಲೇ ಅವುಗಳ ಅಂತರಂಗವನ್ನು



ಬನ್ನಂಜೆ ಗೋವಿಂದಾಚಾರ್ಯರು

ಯಥೇಚ್ಛವಾಗಿ ಕಾವ್ಯರಸಿಕರಿಗೆ ಉಣಬಡಿಸಿದರು.

**ಪೂರ್ವೋತ್ತರಾವಿರೋಧೇನ
ಕೋತ್ರಾರ್ಥೋಭಿಮತೋ ಭವೇತ್ ।
ಇತ್ಯಾದ್ಯಮೂಹನಂ ತರ್ಕಃ ಶುಷ್ಕತರ್ಕಂ ತು
ವರ್ಜಯೇತ್ ॥**

ಈ ಮಾನದಂಡವನ್ನಿಟ್ಟುಕೊಂಡು ಮಹಾಕಾವ್ಯಗಳ ಅಂತರಂಗಕ್ಕೆ ಹೊಸ ಸ್ಪರ್ಶವನ್ನು ನೀಡಿದರು. ಮುಕ್ತ ಚರ್ಚೆಗೂ ಅವಕಾಶ ಕಲ್ಪಿಸಿದರು. ಈ ಇಬ್ಬರು ರಚಿಸಿದ ಕೃತಿಗಳು, ನೀಡಿದ ಪ್ರವಚನಗಳು ಕನ್ನಡ ಜನತೆಗೆ, ಪ್ರಾಚೀನ ಸಾಹಿತ್ಯಾಸಕ್ತರಿಗೆ ಎಣೆಯಿಲ್ಲದ ಉಪಕಾರವಾದವು.

ಪ್ರಕೃತ ಬನ್ನಂಜೆ ಗೋವಿಂದಾಚಾರ್ಯರು ಈ ನಾಡಿನ ಭಾಗ್ಯ; ವಿಶೇಷ ಚೇತನರು. ಎಲ್ಲಿ ಬೇಕೆಂದರೆ ಅಲ್ಲಿ, ಯಾವಾಗ ಬೇಕೆಂದರೆ ಆವಾಗ ಕಾಣಸಿಗುವ ವ್ಯಕ್ತಿತ್ವವಲ್ಲ ಅವರದು. ಪ್ರಾಚೀನ ಸಾಹಿತ್ಯಗಳಿಗೆ ಭಾಷ್ಯಕಾರರಾಗಿ, ವ್ಯಾಖ್ಯಾನಕಾರರಾಗಿ, ಮಹಾವಾಗ್ಮಿಯಾಗಿ, ಕವಿಯಾಗಿ, ಕಥನಕಾರರಾಗಿ, ಗ್ರಂಥಸಂಪಾದಕರಾಗಿ, ಅನುವಾದಕರಾಗಿ, ಪತ್ರಕರ್ತರಾಗಿ, ದಾರ್ಶನಿಕರಾಗಿ, ವೇದಾಂತಿಯಾಗಿ, ಸಂಶೋಧಕರಾಗಿ, ನೂರೈವತ್ತಕ್ಕೂ ಹೆಚ್ಚು ಕೃತಿರಚಿತರಾಗಿ, ಮುಖ್ಯವಾಗಿ ಪ್ರವಚನಕಾರರಾಗಿ ಅವರು ಕನ್ನಡ ಮತ್ತು ಸಂಸ್ಕೃತ ಸಾಹಿತ್ಯ ಪ್ರಪಂಚಕ್ಕೆ ನೀಡಿದ ಕೊಡುಗೆ ಅನನ್ಯವಾದುದು.

ಅವರ ವ್ಯಕ್ತಿತ್ವದಲ್ಲಿ ಸುಂದರ ಭಾವುಕತೆಯೂ ಪ್ರೌಢ ವೈಚಾರಿಕತೆಯೂ ಮೇಳೈಸಿದ್ದವು. ಸಂಪ್ರದಾಯದೊಟ್ಟಿಗೆ ಆಧುನಿಕತೆಯೂ ಅಷ್ಟೇ ಪ್ರಮಾಣದಲ್ಲಿ ಬೆರೆತಿದ್ದವು. ಸರಳತೆ–ಸಂಕೀರ್ಣತೆಯೊಂದಿಗೆ ಸರಸತೆ–ವಿನೋದ, ಸ್ನೇಹ–ಸಾಹಸ–ಇವೆಲ್ಲವೂ ಮುಪ್ಪುರಿಗೊಂಡಿದ್ದವು. ವಿಕ್ಷಿಪ್ತತೆ ಅವರ ವಿಶೇಷ ಗುಣವಾಗಿತ್ತು. ನನ್ನದು ವಿಕ್ಷಿಪ್ತವಾದ ಅಧ್ಯಯನ, ವಿಕ್ಷಿಪ್ತವಾದ ಓದುವಿಕೆ, ವಿಕ್ಷಿಪ್ತವಾದ ಬದುಕು. ಆದರೂ ಅದೊಂದು ತನ್ನಷ್ಟಕ್ಕೆ ಒದಗಿ ಬಂದ ವೇದಿಕೆ ಎಂದು ಅವರೇ ಹೇಳಿಕೊಂಡಿದ್ದಾರೆ. (ಆತ್ಮನಿವೇದನೆ–28)

ಅವರು ಬಾಲ್ಯದಿಂದಲೂ ಜಿಜ್ಞಾಸು ಪ್ರವೃತ್ತಿಯನ್ನು ಹೊಂದಿದ್ದರು. ಪ್ರಶ್ನೆ ಕೇಳುವುದು ಅವರ ಜಾಯಮಾನವಾಗಿತ್ತು. ಪಾಠ–ಪ್ರವಚನ ಕಾಲದಲ್ಲಿ ಅವರಿಗೆ ಮತ್ತೆ ಮತ್ತೆ ಸಂದೇಹ ಹುಟ್ಟುತ್ತಿತ್ತು. ಸಾಂಪ್ರದಾಯಿಕ ಪಂಡಿತರಿಂದ ಅವರಿಗೆ ಸರಿಯಾದ ಉತ್ತರ ಸಿಗುತ್ತಿರಲಿಲ್ಲ. ಅದರಿಂದ ಅವರು ತುಂಬಾ ಅತೃಪ್ತರಾದರು. ಇದಕ್ಕೆ ಪರಿಹಾರ ಏನು ಎಂದು ಅವರು ತಮ್ಮ ತಂದೆಯವರ ಬಳಿ ಕೇಳಿದಾಗ ಪ್ರಶ್ನೆ ನಿನಗೆ ಬಂತಲ್ಲ, ಆ ಪ್ರಶ್ನೆ ಎಲ್ಲಿಂದ ಬಂತು ಅಲ್ಲೇ ಉತ್ತರ ಹುಡುಕು ಎಂದು ಹೇಳಿದರು. ತಪಸಾ ಬ್ರಹ್ಮ ವಿಜಿಜ್ಞಾಸಸ್ವ ಎಂಬ ಉಪನಿಷದ್ವಾಣಿ ಅವರನ್ನು ಪ್ರೇರಿಸಿ, ಮುನ್ನಡೆಸಿತು. ತಂದೆಯವರ ಮಾತು ನಿಜವಾಗಿ ನನ್ನನ್ನು ಚಿಂತನೆಗೆ ಹಚ್ಚಿತು. ನನ್ನ ಜೀವನಕ್ಕೆ ಹೊಸ ರೂಪರೇಖೆ ನೀಡಿತು ಎಂದಿದ್ದಾರೆ ಬನ್ನಂಜೆ.

ಅವರ ದೊಡ್ಡಪ್ಪ ಪಡುಮುನ್ನೂರು ಶ್ರೀನಿವಾಸಾಚಾರ್ಯರು, ಪೇಜಾವರ ಶ್ರೀಗಳು ಮತ್ತು ಭಂಡಾರಕೆರೆ ಶ್ರೀ ವಿದ್ಯಾಮಾನ್ಯ ತೀರ್ಥರು ಇವರುಗಳಿಂದ ಒಂದಿಷ್ಟು ಪಾಠ ಹೇಳಿಸಿಕೊಂಡಿದ್ದನ್ನು ಬಿಟ್ಟರೆ ಬನ್ನಂಜೆಯವರದ್ದು ಸ್ವಾಧ್ಯಾಯ– ಸೆಲ್ಫ್ ಸ್ಟಡಿ ಮಾಡಿದ್ದೇ ಹೆಚ್ಚು ಇದರ ಜೊತೆಗೆ ಗುರೋರಭಾವೇ ಯೋಗ್ಯಸ್ಯ ಸ್ವಯಮೇವಾಭ್ಯಸೇತ್ ಶ್ರುತೀಃ ಎಂಬ ಮಧ್ವಾಚಾರ್ಯರ ಒಂದು ಮಾತು ಅವರ ಸ್ವಾಧ್ಯಾಯವನ್ನು ಪೋಷಿಸಿತು. ಹೀಗೆ ಬಾಲ್ಯದಿಂದಲೇ ಸ್ವಾಧ್ಯಾಯ ಮತ್ತು ಪ್ರವಚನದ ಮೂಲಕ ಅವರು ಬೆಳೆದ ಪರಿ ವಿಸ್ಮಯವಾದುದು.


ಬನ್ನಂಜೆಯವರು ತಮ್ಮ ಓದಿನ ಬಲದಿಂದ, ಜಿಜ್ಞಾಸು ಮತ್ತು ಪ್ರಶ್ನೋತ್ಥಾಪಕ ಪ್ರವೃತ್ತಿಯಿಂದ ತಥಾಕಥಿತ ಸಾಹಿತ್ಯ ಮತ್ತು ಚರ್ವಿತಚರ್ವಣ ಹಳಸಲು ಮಾತುಗಳಿಂದ ಬಹುಬೇಗನೆ ಹೊರ ಬಂದುಬಿಟ್ಟರು. ಅದರ ಫಲವಾಗಿ ಅವರು ನೀಡಿದ ಒಂದೊಂದೂ ನವೋನವೀನ ಹೇಳಿಕೆಯೂ ಸಂಪ್ರದಾಯಶರಣರಿಗೆ, ಮಡಿವಂತರಿಗೆ ವ್ಯತಿರಿಕ್ತವಾಗಿ, ವಿರುದ್ಧವಾಗಿ ಕಾಣಿಸಿಕೊಂಡವು. ವಸ್ತುತಃ ಅವು ವಿರುದ್ಧವಾಗಿಯೂ, ವ್ಯತಿರಿಕ್ತವಾಗಿಯೂ ಇರಲಿಲ್ಲ. ಚಿಂತನ–ಮಂಥನದಿಂದ ಬಂದ ನವನೀತವಾಗಿತ್ತು.

“

ಬನ್ನಂಜೆ ಗೋವಿಂದಾಚಾರ್ಯರನ್ನು ಕುರಿತು ಪರಂಪರೆ, ಮೈಸೂರು ಮತ್ತು ಬನ್ನಂಜೆ ಗೋವಿಂದಾಚಾರ್ಯ ಪ್ರತಿಷ್ಠಾನ, ಬೆಂಗಳೂರು ಇವರ ಸಂಯುಕ್ತ ಆಶ್ರಯದಲ್ಲಿ, ಇದೇ ಮಾರ್ಚ್ 15 ರ ಭಾನುವಾರ ಸಂಜೆ 5–30ಕ್ಕೆ ಮೈಸೂರಿನಲ್ಲಿ ರಮಾಗೋವಿಂದ್ ಕಲಾವೇದಿಕೆಯಲ್ಲಿ (ಗಾನ ಭಾರತೀ ವೀಣೆ ಶೇಷಣ್ಣ ಭವನದ ಆವರಣ) ಬನ್ನಂಜೆ 90 ವಿಶ್ವನಮನ ಕಾರ್ಯಕ್ರಮ ಜರುಗಲಿದೆ. ಇದೊಂದು ಸರಣಿ ಕಾರ್ಯಕ್ರಮ. ಇಷ್ಟರಲ್ಲೇ 14 ಜಿಲ್ಲೆಗಳಲ್ಲಿ ಈ ಕಾರ್ಯಕ್ರಮ ಸಂಪನ್ನಗೊಂಡಿದೆ. ಅಂದು ಖ್ಯಾತ ಸಂಸ್ಕೃತ ವಿದ್ವಾಂಸ ಡಾ॥ ಹೆಚ್.ವಿ.ನಾಗರಾಜ್ ರಾವ್ ಅಧ್ಯಕ್ಷತೆ ವಹಿಸಲಿದ್ದಾರೆ. ಸಂಸ್ಕೃತ ವಿಶ್ವವಿದ್ಯಾಲಯದ ಮಾಜಿ ಕುಲಪತಿ ಪ್ರೊ॥ ಮಲ್ಲೇಪುರಂ ಜಿ. ವೆಂಕಟೇಶ ಅವರು ಪ್ರಾಸ್ತವಿಕ ನುಡಿಯನ್ನು ಬಿತ್ತರಿಸಲಿದ್ದಾರೆ. ಚಿತ್ರಕಲಾವಿದ ಗಂಜೀಫಾ ರಘುಪತಿ ಭಟ್, ಆಕಾಶವಾಣಿ ನಿವೃತ್ತ ನಿರ್ದೇಶಕಿ ಶ್ರೀಮತಿ ಜಯಶ್ರೀ ಶಾನ್‌ಭಾಗ್ ಅವರುಗಳು ಬನ್ನಂಜೆಯವರ ಒಡನಾಟದ ಸವಿಯನ್ನು ಹಂಚಿಕೊಳ್ಳಲಿದ್ದಾರೆ.

ಸಂಸ್ಕೃತ ವಿದ್ವಾಂಸ ಗ.ನಾ.ಭಟ್ಟ, ಬನ್ನಂಜೆಯವರ ಸಾಹಿತ್ಯ ಕೃಷಿಯ ಪ್ರಸ್ತುತತೆಯನ್ನು ಕುರಿತು ಮಾತನಾಡಲಿದ್ದಾರೆ. ಪರಂಪರೆಯ ಅಧ್ಯಕ್ಷ ಶ್ರೀ ಕೃಷ್ಣಕುಮಾರ್ ಮತ್ತು ಖ್ಯಾತ ಪ್ರವಚನಕಾರ್ತಿ ಬನ್ನಂಜೆ ವೀಣಾ ಅವರು ಉಪಸ್ಥಿತರಿರುವರು.

ಅದು ಅವರಿಗೆ ಅರ್ಥವಾಗಲಿಲ್ಲ. ಅಂತಹವರ ಬಗ್ಗೆ ಅವರೇ ಹೇಳಿದ ಒಂದು ಮಾತು–ಕುರುಡರಿಗೆ ಕಂಬ ಕಾಣದೇ ಇದ್ದರೆ ಅದು ಕಂಬದ ತಪ್ಪಲ್ಲ ಎಂದು. ಇದರಿಂದಾಗಿಯೇ ಬನ್ನಂಜೆ ತಥಾಕಥಿತ ಆಸ್ತಿಕರಿಗೆ ಮೈಲಿಗೆಯಾದರು; ತಥಾಕಥಿತ ನಾಸ್ತಿಕರಿಗೆ ಮಡಿವಂತರಾದರು.



ಗ.ನಾ.ಭಟ್ಟ
ಸಂಸ್ಕೃತ ವಿದ್ವಾಂಸರು
ಮೊ.9019376365

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ಮಿತ್ರ

ಮೈಸೂರು ಟ್ರಾವೆಲ್ ಮಾರ್ಟ್ ಉದ್ಘಾಟನೆಗೆ ಕೇಂದ್ರ ಪ್ರವಾಸೋದ್ಯಮ ಸಚಿವರಿಗೆ ಆಹ್ವಾನ



ಮೈಸೂರು ಟ್ರಾವೆಲ್ ಮಾರ್ಟ್-2026 ಉದ್ಘಾಟನೆಗೆ ಕೇಂದ್ರ ಪ್ರವಾಸೋದ್ಯಮ ಸಚಿವ ಗಜೇಂದ್ರ ಸಿಂಗ್ ಶೇಖಾವತ್ ಅವರನ್ನು ಆಹ್ವಾನಿಸಲಾಯಿತು.

ಮೈಸೂರು,ಮಾ.14(ಪಿಎಂ)- ಮೈಸೂರು-ಕೊಡಗು ಸಂಸದ ಯದುವೀರ ಒಡೆಯರ್, ಮೈಸೂರು ಟ್ರಾವೆಲ್ಸ್ ಅಸೋಸಿಯೇಷನ್ ಅಧ್ಯಕ್ಷ ಬಿ.ಎಸ್.ಪ್ರಶಾಂತ್ ಮತ್ತು ಸ್ಕಲ್ ಇಂಟರ್‌ನ್ಯಾಷನಲ್ ಅಧ್ಯಕ್ಷ ಸಿ.ಎ.ಜಯ ಕುಮಾರ್ ಇತ್ತೀಚೆಗೆ ನವದೆಹಲಿಯಲ್ಲಿ ಕೇಂದ್ರ ಪ್ರವಾಸೋದ್ಯಮ ಸಚಿವ ಗಜೇಂದ್ರ ಸಿಂಗ್ ಶೇಖಾವತ್ ಅವರನ್ನು ಭೇಟಿ ಮಾಡಿ ಮೈಸೂರು ಟ್ರಾವೆಲ್ ಮಾರ್ಟ್-2026 ಉದ್ಘಾಟನೆಗೆ ಆಹ್ವಾನಿಸಿದರು.

ಈ ಕಾರ್ಯಕ್ರಮವು ಮೈಸೂರು ಮತ್ತು ಒಟ್ಟಾರೆ ಕರ್ನಾಟಕದ ಪ್ರವಾಸೋದ್ಯಮ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರ ವಹಿಸುವ ಬಗ್ಗೆ ಕೇಂದ್ರ ಸಚಿವರಿಗೆ ವಿವರಿಸಲಾಯಿತು. ಕಾರ್ಯಕ್ರಮದ ವಿವರಗಳನ್ನು ಪಡೆದ ನಂತರ, ಕೇಂದ್ರ ಸಚಿವರು ಇಂತಹ ಉಪಯುಕ್ತ ಕಾರ್ಯಕ್ರಮಕ್ಕೆ ತಮ್ಮ ಪೂರ್ಣ ಸಹಕಾರ ಯಾವಾಗಲೂ ಇದೆ ಎಂದು ಹೇಳಿದರು. ಇದಕ್ಕೂ ಮುನ್ನ ರಾಜ್ಯ ಪ್ರವಾಸೋದ್ಯಮ ಸಚಿವ ಎಚ್.ಕೆ. ಪಾಟೀಲ್ ಅವರನ್ನು ಭೇಟಿ ಮಾಡಿ ಕಾರ್ಯಕ್ರಮಕ್ಕೆ ಆಹ್ವಾನಿಸಲಾಯಿತು. ಕಾರ್ಯಕ್ರಮಕ್ಕೆ ತಮ್ಮ ಸಂಪೂರ್ಣ ಸಹಕಾರವನ್ನು ನೀಡುವುದಾಗಿ ಅವರೂ ಭರವಸೆ ನೀಡಿದ್ದಾರೆ.

ಮೈಸೂರು ಟ್ರಾವೆಲ್ ಮಾರ್ಟ್‌ನ 5ನೇ ಆವೃತ್ತಿಯನ್ನು ಜೂ.5, 6, 7ರಂದು ಮೈಸೂರಿನ ಜಗನ್ನಾಥ ಸೆಂಟರ್ ಫಾರ್ ಆರ್ಟ್ ಅಂಡ್ ಕಲ್ಚರ್ (ಜೆಸಿಎಸಿ)ನಲ್ಲಿ ಆಯೋಜಿಸಲಾಗಿದೆ. ಕರ್ನಾಟಕ ಪ್ರವಾಸೋದ್ಯಮ ಇಲಾಖೆ, ಹೋಟೆಲ್ ಮಾಲೀಕರ ಸಂಘ ಮತ್ತು ಇತರ ಸಂಸ್ಥೆಗಳ ಸಹಯೋಗದೊಂದಿಗೆ ಮೈಸೂರು ಟ್ರಾವೆಲ್ಸ್ ಅಸೋಸಿಯೇಷನ್‌ನಿಂದ ಆಯೋಜಿಸಲಾಗಿದೆ.

10 ಸಾವಿರಕ್ಕೂ ಹೆಚ್ಚು ಜನರು ಮತ್ತು ಸಾವಿರಕ್ಕೂ ಹೆಚ್ಚು ಪ್ರವಾಸೋದ್ಯಮ ವೃತ್ತಿಪರರು ಈ ಕಾರ್ಯಕ್ರಮದಲ್ಲಿ ಭಾಗವಹಿಸುವ ನಿರೀಕ್ಷೆಯಿದೆ. ಈ ಕಾರ್ಯಕ್ರಮವು ಮೈಸೂರಿನಲ್ಲಿ ನಡೆಯುವುದರಿಂದ ದೇಶಾದ್ಯಂತದ ಎಲ್ಲಾ ಪ್ರವಾಸಿಗರು ಮತ್ತು ಪ್ರವಾಸೋದ್ಯಮ ಪಾಲುದಾರರು ಮೈಸೂರನ್ನು ತಿಳಿದುಕೊಳ್ಳುತ್ತಾರೆ. ಪರಿಣಾಮವಾಗಿ ಪ್ರವಾಸೋದ್ಯಮ ಮತ್ತು ಮೈಸೂರಿನ ಆರ್ಥಿಕತೆ ಬೆಳೆಯುತ್ತದೆ. ಈ ಕಾರ್ಯಕ್ರಮವು 100ಕ್ಕೂ ಹೆಚ್ಚು ಮಳಿಗೆಗಳು, ವಿವಿಧ ಅಗತ್ಯ ವಿಷಯಗಳ ಕುರಿತು ಚರ್ಚೆಗಳು, ವಿಚಾರ ಸಂಕಿರಣಗಳು, ಪ್ರವಾಸೋದ್ಯಮ ಮತ್ತು ಆತಿಥ್ಯ ಪ್ರಶಸ್ತಿ ಪ್ರದಾನ ಸಮಾರಂಭ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಒಳಗೊಂಡಿರುತ್ತದೆ. ಮೈಸೂರು ಟ್ರಾವೆಲ್ ಮಾರ್ಟ್‌ನ ಹಿಂದಿನ 4 ಆವೃತ್ತಿಗಳು ದೇಶಾದ್ಯಂತದ ಪ್ರವಾಸಿಗರನ್ನು ಒಂದೇ ಸೂರಿನಡಿ ತರುವಲ್ಲಿ ಯಶಸ್ವಿಯಾಗಿವೆ ಎಂದು ಪ್ರಕಟಣೆ ತಿಳಿಸಿದೆ.

ಸಾರ್ವಜನಿಕ ಪ್ರಕಟಣೆ

ನಮ್ಮ ಕಕ್ಷೀದಾರರು, ಇದೇ ಕೆಳಕಂಡ ಷೆಡ್ಯೂಲ್ ನಲ್ಲಿ ನಮೂದಿಸಿರುವ ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ತಳೂರು ಗ್ರಾಮಕ್ಕೆ ಸೇರಿದ ಸರ್ವೇ ನಂ. 29/2 ರಲ್ಲಿರುವ 01 ಎಕರೆ 09 ಗುಂಟೆ ವಿಸ್ತೀರ್ಣವುಳ್ಳ ಜಮೀನನ್ನು, ಅದರ ಮಾಲಿಕರಾದ ಮೈಸೂರು ಸಿಟಿ, ದಟ್ಟಗಳ್ಳಿ ಬಡಾವಣೆ, BEML ಬಡಾವಣೆ (ವಾಟರ್ ಟ್ಯಾಂಕ್ ಹತ್ತಿರ) ಮನೆ ನಂ. 41 ರಲ್ಲಿ, ವಾಸವಿರುವ - ಶ್ರೀ. ನಾಗರಾಜು, ಬಿ., ಬಿನ್. ಬಸಪ್ಪ ರವರು ಕ್ರಯಕ್ಕೆ ಕೊಡುವುದು ತಿಳಿದು ಬಂದು ನಮ್ಮ ಕಕ್ಷಿದಾರರು ಅದನ್ನು ಕ್ರಯಕ್ಕೆ ಪಡೆಯಲು ಒಪ್ಪಿ ಶುದ್ಧ ಕ್ರಯದ ಒಪ್ಪಂದ ಕರಾರು ಪತ್ರವನ್ನು ಮಾಡಿಕೊಂಡಿರುತ್ತಾರೆ. ಈ ಜಮೀನು ಸಂಬಂಧಪಟ್ಟ ಹಾಗೆ ಯಾರಿಗಾದರು ಹಕ್ಕು, ಅಧಿಕಾರ, ಸ್ವಾಧೀನಾನುಭವ ಸಂಬಂಧಪಟ್ಟ ಹಾಗೆ ಆಸಕ್ತಿ ಇದ್ದಲ್ಲಿ ಅಥವಾ ಆ ಬಗ್ಗೆ ಯಾವುದೇ ತಕರಾರು ಇದ್ದಲ್ಲಿ ಅದನ್ನು ಈ ಪ್ರಕಟಣೆ ಆದ ದಿನದಿಂದ ಹತ್ತು (10) ದಿನದೊಳಗೆ ಈ ಕೆಳಗೆ ಕೊಟ್ಟಿರುವ ನಮ್ಮ ಕಛೇರಿ ವಿಳಾಸಕ್ಕೆ ಸೂಕ್ತ ಅಸಲು ದಾಖಲೆಗಳ ಸಮೇತ [ಕಛೇರಿ ವೇಳೆಯಾದ ಸೋಮವಾರದಿಂದ ಶನಿವಾರದ ತನಕ ಸಂಜೆ 6:00 ರಿಂದ 8:30 ಯೊಳಗೆ] ಬರತಕ್ಕದ್ದು. ಇಲ್ಲದೆ ಹೋದಲ್ಲಿ ಷೆಡ್ಯೂಲ್ ಸ್ವತ್ತಿನ ಮಾರಾಟದಲ್ಲಿ ಯಾರಿಗೂ ಯಾವುದೇ ತಕರಾರಿಲ್ಲವೆಂದು ಪರಿಗಣಿಸಿ ನಮ್ಮ ಕಕ್ಷೀದಾರರು ಶುದ್ಧ ಕ್ರಯಪತ್ರವನ್ನು ನೊಂದಣಿ ಮಾಡಿಕೊಳ್ಳುತ್ತಾರೆ. ಮೇಲೆ ಕಾಣಿಸಿದ ಕಾಲಾವಧಿಯೊಳಗೆ ಯಾವುದೇ ತಕರಾರು ಬರದೆ ಇದ್ದು ನಮ್ಮ ಕಕ್ಷೀದಾರರು ನೋಂದಾಯಿತ ಕ್ರಯ ಪತ್ರವನ್ನು ಮಾಡಿಕೊಳ್ಳುವುದನ್ನು ಪ್ರಶ್ನಿಸಿ ಯಾವುದೇ ತಕರಾರು ಬಂದಲ್ಲಿ ಅದಕ್ಕೆ ನಮ್ಮ ಕಕ್ಷೀದಾರರು ಯಾವುದೇ ರೀತಿಯಲ್ಲೂ ಹೊಣೆಯಾಗುವುದಿಲ್ಲ ಎಂದು ಈ ಮೂಲಕ ತಿಳಿಸಲಾಗಿದೆ.

ಷೆಡ್ಯೂಲ್

ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ತಳೂರು ಗ್ರಾಮಕ್ಕೆ ಸೇರಿದ ಸರ್ವೇ ನಂ. 29/2 ರಲ್ಲಿರುವ 1 ಎಕರೆ 09 ಗುಂಟೆ (ಒಂದು ಏಕರೆ ಒಂಬತ್ತು ಗುಂಟೆ) ವಿಸ್ತೀರ್ಣವುಳ್ಳ ಜಮೀನು, ಇದಕ್ಕೆ ಚೆಕ್ಕುಭಂದಿ: ಪೂರ್ವ : ಸರ್ಕಾರಿ ವಾಟರ್ ಟ್ಯಾಂಕ್ & ಸಣ್ಣಪ್ಪನ ಜಮೀನು, ಪಶ್ಚಿಮ : ಖಾಸಗಿ ವಸತಿ ಬಡಾವಣೆ, ಉತ್ತರ : ಮಾದಯ್ಯನ ಜಮೀನು ಮತ್ತು ದಕ್ಷಿಣ : ರಸ್ತೆ.


Sd/- N. Gowri Shankar
Advocate,
#46, 4th Cross, J.T.K Layout,
5th Stage, Kuvempunargar
Mysuru - 570023
Email:ngsoffice@yahoo.com
Ph: 0821-4252028
Mob.9886994255
Date: 13.3.2026

ಒಂದು ರೂಪಾಯಿಗೆ ಒಂದು ಲೀಟರ್ ಹಾಲು!

ಬಮುಲ್ ಅಧ್ಯಕ್ಷ ಡಿ.ಕೆ.ಸುರೇಶ್ ಆಕ್ರೋಶ

ಬೆಂಗಳೂರು, ಮಾ.14- ಒಂದು ರೂಪಾಯಿಗೆ ಒಂದು ಲೀಟರ್ ಹಾಲು ಮಾರಲು ಮುಂದಾಗಿರುವ ಫ್ಲಿಪ್ ಕಾರ್ಟ್ ಸಂಸ್ಥೆಯ ವಿರುದ್ಧ ಕಾಂಪಿಟೇಷನ್ ಕಮಿಷನ್ ಆಫ್ ಇಂಡಿಯಾ, ನವದೆಹಲಿ ಇವರಿಗೆ ಸೆಕ್ಷನ್ 19/1 ಎ ಅಡಿ ಕ್ರಮ ತೆಗೆದುಕೊಳ್ಳಬೇಕು ಎಂದು ದೂರು ನೀಡಲಾಗುತ್ತಿದೆ. ಜೊತೆಗೆ ಈ ವಿಚಾರವನ್ನು ಪ್ರಧಾನಿ ಮೋದಿಯವರಿಗೆ ಇ ಮೇಲ್ ಮುಖಾಂತರ ಕಳಿಸುತ್ತಿದ್ದೇನೆ' ಎಂದು ಬಮುಲ್ ಅಧ್ಯಕ್ಷರಾದ ಡಿ.ಕೆ.ಸುರೇಶ್ ತಿಳಿಸಿದ್ದಾರೆ.

ಸದಾಶಿವನಗರದ ನಿವಾಸದಲ್ಲಿ ಮಾಧ್ಯಮಗಳನ್ನು ಉದ್ದೇಶಿಸಿ ಸುರೇಶ್ ಅವರು ಶನಿವಾರ ಮಾತನಾಡಿದರು. ಹಣ ಮಾಡುವ ಭರದಲ್ಲಿ ಫ್ಲಿಪ್ ಕಾರ್ಟ್ ಎನ್ನುವ ಸಂಸ್ಥೆ ಒಂದು ರೂಪಾಯಿಗೆ ಒಂದು ಲೀಟರ್ ಹಾಲು ನೀಡಲು ಮುಂದಾಗಿದೆ. ಆ ಮೂಲಕ ರೈತ ಸಮುದಾಯವನ್ನ ಧ್ವಂಸ ಮಾಡುವಂತಹ ಕೃತ್ಯಕ್ಕೆ ಕೈ ಹಾಕಿದೆ. ಕೇಂದ್ರ ಹಾಗೂ ರಾಜ್ಯ ಸರ್ಕಾರ ಕೂಡಲೇ ಕ್ರಮ ತೆಗೆದುಕೊಳ್ಳಬೇಕು. ಇಲ್ಲದಿದ್ದರೆ ಇಡೀ ದೇಶದಾದ್ಯಂತ ದಂಗೆ ಮಾಡಬೇಕಾದ ಪರಿಸ್ಥಿತಿ ಉಂಟಾಗಲಿದೆ ಎಂದರು.



ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ವಿವರಿಸಿರುವ ಷೆಡ್ಯೂಲ್ ಸ್ವತ್ತಿನ ನಿರುಪಾಧಿತ ಮಾಲೀಕರಾದ ಶ್ರೀ. ಕೆ.ಎಂ. ವೀರಭದ್ರಯ್ಯ ರವರ ಮಗ, ಶ್ರೀ. ಗ್ರೆಗೊರಿ ವಿ ವಾರೆನ್, ರವರು ಷೆಡ್ಯೂಲ್ ಸ್ವತ್ತನ್ನು ನನ್ನ ಕಕ್ಷಿದಾರರಿಗೆ ಮಾರಾಟ ಮಾಡಲು ಅಪೇಕ್ಷಿಸಿರುತ್ತಾರೆ. ಅದರಂತೆ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಶುದ್ಧಕ್ರಯಕ್ಕೆ ಪಡೆಯಲು ಸಿದ್ಧರಿರುವುದರಿಂದ ಸದರಿ ಸ್ವತ್ತಿನ ಮೇಲೆ ಬ್ಯಾಂಕ್ ಮತ್ತು ಇನ್ನಿತರ ಆರ್ಥಿಕ ಸಂಸ್ಥೆಗಳನ್ನು ಒಳಗೊಂಡಂತೆ, ಯಾರಿಗಾದರೂ ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿ, ಆಕ್ಷೇಪಣೆ, ಸಿವಿಲ್ ವ್ಯಾಜ್ಯ, ತಂಟೆ-ತಕರಾರುಗಳು ಇದ್ದಲ್ಲಿ ಈ ಪ್ರಕಟಣೆ ಪ್ರಕಟವಾದ ದಿನದಿಂದ 10 (ಹತ್ತು) ದಿನಗಳ ಒಳಗಾಗಿ ತಮ್ಮ ಆಕ್ಷೇಪಣೆಗಳನ್ನು ಲಿಖಿತರೂಪದಲ್ಲಿ ಅಥವಾ ಖುದ್ದಾಗಿ ಸೂಕ್ತ ದಾಖಲಾತಿಗಳೊಂದಿಗೆ ಈ ಕೆಳಗೆ ನಮೂದಿಸಿರುವ ಕಛೇರಿ ವಿಳಾಸಕ್ಕೆ ಸಲ್ಲಿಸಬಹುದಾಗಿದೆ. ತಪ್ಪಿದಲ್ಲಿ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಶುದ್ಧಕ್ರಯಕ್ಕೆ ಪಡೆದುಕೊಳ್ಳುತ್ತಾರೆ. ಮೇಲ್ಕಂಡ ಅವಧಿ ನಂತರ ಬರುವ ಆಕ್ಷೇಪಣೆ, ತಂಟೆ-ತಕರಾರುಗಳಿಗೆ ನನ್ನ ಕಕ್ಷಿದಾರರು ಬಾಧ್ಯರಾಗುವುದಿಲ್ಲ ಎಂಬ ಅಂಶವನ್ನು ಈ ಮೂಲಕ ತಿಳಿಯಪಡಿಸಲಾಗಿದೆ.

ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು ಸಿಟಿ, ಕುವೆಂಪುನಗರ, ತೊಣಚಿಕೊಪ್ಪಲು -ಜಯನಗರ 3ನೇ ಹಂತ, ಕೆ. ಹೆಚ್.ಬಿ. ಕಾಲೋನಿ, ನಿವೇಶನ ಸಂಖ್ಯೆ 6, ಹಾಲಿ ಮೈಸೂರು ಮಹಾನಗರ ಪಾಲಿಕೆ ವ್ಯಾಪ್ತಿಗೊಳಪಟ್ಟ ಇ-ಸ್ವತ್ತಿನ ಸಂಖ್ಯೆ: 17-2-560-6, ವಾರ್ಡ್ ನಂ. 17, ಹಳೆಯ & ನಿರ್ಧರಣಾ ಸಂಖ್ಯೆ 6, ಹಾಗೂ ಪಿಐಡಿ ನಂ.49298 & ವಾರ್ಡ್ ನಂ. 57 [ಎಸ್.ಎ.ಎಸ್ ಚಲನ್‌ನಂತೆ] ಹೊಂದಿರುವ ಸ್ವತ್ತಿನ ವಿಸ್ತೀರ್ಣ ಪೂರ್ವ-ಪಶ್ಚಿಮ : 15.00 ಮೀಟರ್ ಉತ್ತರ-ದಕ್ಷಿಣ : 24.00 ಮೀಟರ್, ಒಟ್ಟು ವಿಸ್ತೀರ್ಣ: 360 ಚದರ ಮೀಟರ್ ಉಳ್ಳ ಸ್ವತ್ತಿನ ಚಕ್ಕುಬಂದಿ ಪೂರ್ವಕ್ಕೆ - ರಸ್ತೆ, ಪಶ್ಚಿಮಕ್ಕೆ - ಸ್ವತ್ತಿನ ಸಂಖ್ಯೆ. 5, ಉತ್ತರಕ್ಕೆ - ರಸ್ತೆ ಮತ್ತು ದಕ್ಷಿಣಕ್ಕೆ ಸ್ವತ್ತಿನ ಸಂಖ್ಯೆ. 7 ಮತ್ತು 8.

ಎಸ್ ಎಲ್ ಡಿ ಲಾ ಫಾರ್ಮ
ಸಹಿ/- ಶ್ರೀಲತಾ ದೀಕ್ಷಿತ್,
ವಕೀಲರು, ನಂ 1416, ನಾರಾಯಣ ಶಾಸ್ತ್ರಿ ರಸ್ತೆ,
ಸಪ್ನ ಬುಕ್ ಹೌಸ್ ಹತ್ತಿರ, ಮೈಸೂರು
ಮೊಬೈಲ್ 9844640641
Email: sldlawfirm2021@gmail.com





ಮೈಸೂರು ಮಿತ್ರ

ಭಾನುವಾರ 15 ಮಾರ್ಚ್ 2026

ಚಾಮುಂಡಿ ಬೆಟ್ಟದ ನಂದಿ ಬಳಿ ಪ್ರವಾಸಿಗರನ್ನು ಸ್ವಾಗತಿಸುವ ಕಸದ ರಾಶಿ!



ಮೈಸೂರು, ಮಾ. 14– ಮೈಸೂರಿನ ಪ್ರವಾಸಿ ತಾಣ ಹಾಗೂ ಪ್ರಸಿದ್ಧ ಧಾರ್ಮಿಕ ಕೇಂದ್ರವಾಗಿರುವ ನಾಡಿನ ಅಧಿದೇವತೆ ಶ್ರೀ ಚಾಮುಂಡೇಶ್ವರಿಬೆಟ್ಟದ ನಂದಿ ವಿಗ್ರಹದ ಬಳಿ ಕಸದ ರಾಶಿ ಬಿದ್ದಿದ್ದು ಚಾಮುಂಡಿ ಬೆಟ್ಟದ ಪ್ರಾಧಿಕಾರದ ಗಮನಕ್ಕೆ ತಂದರೂ ಪ್ರಯೋಜನವಾಗಿಲ್ಲ. ಕೂಡಲೇ ಸಂಬಂಧಪಟ್ಟ ಅಧಿಕಾರಿಗಳು ಗಮನಹರಿಸಿ ಸ್ವಚ್ಛತೆಗೆ ಆದ್ಯತೆ ನೀಡಿ ಕಸದ ರಾಶಿಯನ್ನು ತೆರವುಗೊಳಿಸಬೇಕೆಂದು ಕೃಷ್ಣರಾಜ ವಿಧಾನ ಸಭಾ ಕ್ಷೇತ್ರದ ಮಾಜಿ ಶಾಸಕ ಎಂ.ಕೆ ಸೋಮಶೇಖರ್ ಆಗ್ರಹಿಸಿದ್ದಾರೆ. ಈ ವೇಳೆ ಮುಖಂಡರಾದ ವಿಶ್ವನಾಥ್ (ವಿಶ್ವ), ಅರುಣ್ ಗಂಗಾಧರ್ ಉಪಸ್ಥಿತರಿದ್ದರು.

ಮಹಿಳಾ ದಿನಾಚರಣೆ ಸಂದರ್ಭದಲ್ಲಿ ಮಹಿಳೆಯರ ಹೋರಾಟದ ನೆನಪು



ಮೈಸೂರು, ಮಾ.14– ಮಹಿಳಾ ದಿನಾಚರಣೆ ಮಹಿಳೆಯರ ಹೋರಾಟದ ನೆನಪಾಗಿದೆ ಎಂದು ವಕೀಲರಾದ ಶ್ರೀಮತಿ ಜಿ. ನಾಗಶ್ರೀ ಪ್ರತಾಪ್ ತಿಳಿಸಿದರು.

ಜೆಎಸ್‌ಎಸ್ ಶಿಕ್ಷಣ ಮಹಾವಿದ್ಯಾಲಯದಲ್ಲಿ ಹಮ್ಮಿಕೊಂಡಿದ್ದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಪ್ರಪಂಚದ ಇತಿಹಾಸದಲ್ಲಿ ಮಹಿಳೆಯು ತನ್ನ ಹಕ್ಕುಗಳನ್ನು ಹೋರಾಟದಿಂದಲೇ ಪಡೆದುಕೊಂಡಿದ್ದಾಳೆ. ಆಸ್ತಿ, ಮತ ಚಲಾಯಿಸುವ ಹಕ್ಕು ಮುಂತಾದವುಗಳನ್ನು ಪುರುಷ ಪಡೆದ ನಂತರವೇ ಮಹಿಳೆ ಪಡೆದಿದ್ದಾಳೆ. ಮಹಿಳೆಯರು ನಿಯಂತ್ರಿತ ಪರಿಸರದಿಂದ ಹೊರಬಂದು ಸಮಾಜದಲ್ಲಿ ತಮ್ಮ ಸಾಮರ್ಥ್ಯವೇನು ಎಂಬುದನ್ನು ತೋರಿಸಬೇಕು. ಅವಲಂಬನೆ ಜೀವನದಿಂದ ಹೊರಬಂದು ಆರ್ಥಿಕ ಸ್ವಾವಲಂಬನೆ ಹೊಂದಿ ಸತ್ಯ, ನ್ಯಾಯವನ್ನು ಬೆಂಬಲಿಸಬೇಕೆಂದರು ಹಾಗೂ ಮಹಿಳೆಯರಿಗೆ ಅವಶ್ಯವಾದ ವಿವಿಧ ಮೂಲಭೂತ ಕಾನೂನುಗಳ ಬಗ್ಗೆ ಪ್ರಶಿಕ್ಷಣಾರ್ಥಿಗಳಿಗೆ ಅರಿವು ಮೂಡಿಸಿದರು.

ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಂಶುಪಾಲ ಡಾ. ಹೆಚ್.ಎಂ. ಮಹೇಶ್, ಕುಟುಂಬದಲ್ಲಿ ಸಂಬಂಧಗಳನ್ನು ಬೆಸೆಯುವಲ್ಲಿ ಮಹಿಳೆಯ ಪಾತ್ರ ಅಪಾರವಾದದ್ದು, ಸಹಕಾರ ಜೀವನಕ್ಕೆ ಇವರೇ ಆಧಾರವಾಗಿದ್ದು, ತಮ್ಮ ಹಕ್ಕು ಮತ್ತು ಸಾಮರ್ಥ್ಯಗಳನ್ನು ಗುರುತಿಸಿಕೊಂಡು ಸಮಾಜದಲ್ಲಿ ಮೇಲುಗೈ ಸಾಧಿಸಬೇಕು ಎಂದರು.

ಸಹಾಯಕ ಪ್ರಾಧ್ಯಾಪಕರಾದ ಡಿ.ಎಸ್. ವೀಣಾರವರು ಪ್ರಾಸ್ತಾವಿಕ ನುಡಿಗಳನ್ನಾಡಿದರೆ, ಕು॥ ಅನಿತ ಆರ್ ಮತ್ತು ಕು॥ ಸುಚಿತ್ರ ಆರ್ ಪ್ರಾರ್ಥಿಸಿ, ಕು॥ ನಿಹಾರಿಕ ಟಿ.ಎನ್ ಸ್ವಾಗತಿಸಿ, ಕು॥ ಪವಿತ್ರ ಆರ್ ವಂದಿಸಿದರು. ಶ್ರೀಮತಿ ಹಂಸವೇಣಿ ಕಾರ್ಯಕ್ರಮ ನಿರೂಪಿಸಿದರು.

ಇಂದಿನಿಂದ ಇಂಡಿಗೋ ಟಿಕೆಟ್ ದರ ಹೆಚ್ಚಳ

ನವದೆಹಲಿ, ಮಾ.14– ಪಶ್ಚಿಮ ಏಷ್ಯಾ ಪ್ರದೇಶದ ಸಂಘರ್ಷದ ನಡುವೆ ಇಂಡಿಗೋ ವಿಮಾನಗಳು ಇಂಧನದ ಸರ್‌ಚಾರ್ಜ್ ಘೋಷಿಸಿರುವುದರಿಂದ ಇಂದಿನಿಂದ ವಿಮಾನ ಸಂಚಾರ ದುಬಾರಿಯಾಗಲಿದೆ.

ಮಾ.14ರಿಂದ ವಿಮಾನಗಳ ಮೇಲೆ 425 ರೂ.ನಿಂದ 2,300 ರೂ. ಇಂಧನ ಸರ್‌ಚಾರ್ಜ್ ವಿಧಿಸುವುದಾಗಿ ಇಂಡಿಗೋ ಘೋಷಿಸಿದೆ. ಇಂದಿನಿಂದ ಇಂಡಿಗೋ ವಿಮಾನಯಾನ ಸಂಸ್ಥೆ ದೇಶೀಯ ಮತ್ತು ಅಂತಾರಾಷ್ಟ್ರೀಯ ಟಿಕೆಟ್‌ಗಳ ಮೇಲೆ ಇಂಧನ ಸರ್‌ಚಾರ್ಜ್ ಅನ್ನು ಜಾರಿಗೆ ತರುತ್ತಿದೆ.

ವಿಮಾನಯಾನ ಸಂಸ್ಥೆ ಪ್ರಕಟಿಸಿದಂತೆ, ವಾಯುಯಾನ ಟರ್ಬೈನ್ ಇಂಧನ ಬೆಲೆಗಳಲ್ಲಿ ತೀವ್ರ ಏರಿಕೆ ಈ ಹೆಚ್ಚಳಕ್ಕೆ ಕಾರಣವಾಗಿದೆ. ಈ ಸರ್‌ಚಾರ್ಜ್ ಪ್ರಮಾಣವು ಪ್ರಯಾಣದ ಮಾರ್ಗ ಮತ್ತು ದೂರವನ್ನು ಅವಲಂಬಿಸಿ 425 ರೂ. ರಿಂದ 2,300 ರೂ.ವರೆಗೆ ವಿಧಿಸಲಾಗುವುದು. ಈ ಘೋಷಣೆಯೊಂದಿಗೆ, ಏರ್ ಇಂಡಿಯಾ ನಂತರ ಇಂಧನ ಶುಲ್ಕವನ್ನು ಘೋಷಿಸಿದ ಎರಡನೇ ಭಾರತೀಯ ವಿಮಾನಯಾನ ಸಂಸ್ಥೆ ಇಂಡಿಗೋ ಆಗಿದ್ದು, ಈ ಹೆಚ್ಚುವರಿ ಶುಲ್ಕ ಹೀಗಾಗಲೇ ಜಾರಿಗೆ ಬಂದಿದೆ.

ಬಜೆಟ್ ಅಧಿವೇಶನ ಬಳಿಕ ಕ್ರೀಡಾಂಗಣಕ್ಕೆ ನೀಡಿದ್ದ ಭೂಮಿ ಮತ್ತೆ ರೇಷ್ಮೆ ಇಲಾಖೆ ವಶಕ್ಕೆ

ಮೈಸೂರು,ಮಾ.14(ಎಂಟಿವೈ)– ಸಾರ್ವಜನಿಕ ವಲಯದಿಂದ ತೀವ್ರ ವಿರೋಧ ವ್ಯಕ್ತವಾದ ಹಿನ್ನೆಲೆಯಲ್ಲಿ ತಿ.ನರಸೀಪುರದ ರೇಷ್ಮೆ ನೂಲು ತಯಾರಿಕಾ ಘಟಕದ ಆವರಣದಲ್ಲಿ ತಾಲೂಕು ಕ್ರೀಡಾಂಗಣ ನಿರ್ಮಾಣ ಕೈಬಿಟ್ಟ ಹಿನ್ನೆಲೆಯಲ್ಲಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಗೆ ಹಸ್ತಾಂತರ ಮಾಡಿದ್ದ 5 ಎಕರೆ ಭೂಮಿಯನ್ನು ಅಧಿವೇಶನ ಮುಗಿದ ಬಳಿಕ ಮತ್ತೆ ರೇಷ್ಮೆ ಇಲಾಖೆಗೆ ವರ್ಗಾಯಿಸುವ ಪ್ರಕ್ರಿಯೆ ನಡೆಯಲಿದೆ ಎಂದು ಮೂಲಗಳು ತಿಳಿಸಿವೆ.

ಮೈಸೂರು ರೇಷ್ಮೆ ಸೀರೆ ನೇಯ್ಗೆಗೆ ಬೇಕಾದ ರೇಷ್ಮೆ ನೂಲು ತಯಾರಿಸುವ ಘಟಕವನ್ನು ಮೈಸೂರು ಸಂಸ್ಥಾನದ ನಾಲ್ವಡಿ ಕೃಷ್ಣರಾಜ ಒಡೆಯರ್ 1912ರಲ್ಲಿ ತಿ.ನರಸೀಪುರದಲ್ಲಿ ಸ್ಥಾಪಿಸಿದ್ದು, ಯಶಸ್ವಿಯಾಗಿ 114 ವರ್ಷ ಪೂರೈಸಿದೆ. 7 ಎಕರೆಯಲ್ಲಿ ನೂಲು ಬಿಚ್ಚಣಿಕೆ ಘಟಕದ ಕಟ್ಟಡ ಸೇರಿದಂತೆ ಇರುವ 13.11 ಎಕರೆಯಲ್ಲಿ 5.08 ಎಕರೆ ಭೂಮಿಯನ್ನು ತಾಲೂಕು ಕ್ರೀಡಾಂಗಣ ನಿರ್ಮಾಣಕ್ಕೆ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಗೆ ಭೂಮಿ ಮಂಜೂರು ಮಾಡಿ, ಹಸ್ತಾಂತರಿಸಲಾಗಿತ್ತು.

ರೇಷ್ಮೆ ನೂಲು ತಯಾರಿಕಾ ಘಟಕದ ಆವರಣದಲ್ಲಿ ಕ್ರೀಡಾಂಗಣ ನಿರ್ಮಾಣ ವಿರೋಧಿಸಿ 'ಪರಿಸರಕ್ಕಾಗಿ ನಾವು' ಸಂಘಟನೆ, ಪರಿಸರವಾದಿಗಳು, ವಿವಿಧ ಸಂಘಟನೆಗಳು, ಸ್ವಾತಂತ್ರ್ಯ ಹೋರಾಟಗಾರರ ಸಂಘ, ಬಿಜೆಪಿ ಮತ್ತು ಜೆಡಿಎಸ್ ಸರಣಿ ಪ್ರತಿಭಟನೆ ನಡೆಸಿದ್ದವು. ಪ್ರತಿಭಟನೆಯಲ್ಲಿ ನೂಲು ತಯಾರಿಕಾ ಘಟಕದ ನೌಕರರು ಪಾಲ್ಗೊಂಡಿದ್ದರು. ತಾಲೂಕು ಕ್ರೀಡಾಂಗಣ ನಿರ್ಮಾಣ ವಿರೋಧಿಸಿ ಪ್ರತಿಭಟನೆ ಜೋರಾದ ಹಿನ್ನೆಲೆಯಲ್ಲಿ ಮಾ.5ರಂದು ರೇಷ್ಮೆ ಸಚಿವ ಕೆ.ವೆಂಕಟೇಶ್, ವಿಧಾನಸಭೆಯಲ್ಲಿ ರೇಷ್ಮೆ ನೂಲು ತಯಾರಿಕಾ ಘಟಕದ ಆವರಣದಲ್ಲಿ ತಾಲೂಕು ಕ್ರೀಡಾಂಗಣ ನಿರ್ಮಾಣ ಮಾಡುವ ನಿರ್ಧಾರದಿಂದ ಹಿಂದೆ ಸರಿದು, ಪರ್ಯಾಯ ಸ್ಥಳ ಹುಡುಕುವುದಾಗಿ ಘೋಷಿಸಿದ್ದರು. ಇದರಿಂದ ಮಾ.6ರಿಂದ ನೂಲು ತಯಾರಿಕಾ ಘಟಕದ ಸಿಬ್ಬಂದಿ ಪ್ರತಿಭಟನೆಯಿಂದ ಹಿಂದೆ ಸರಿದು ಕರ್ತವ್ಯಕ್ಕೆ ಹಾಜರಾಗಿದ್ದರು.

ಅಧಿವೇಶನ ಮುಗಿದ ನಂತರ ಭೂಮಿ ಹಿಂದಿರುಗಿಸುವ ಪ್ರಕ್ರಿಯೆ ಆರಂಭ: ಅಧಿವೇಶನದಲ್ಲಿ ಸಚಿವರು ಕ್ರೀಡಾಂಗಣ ನಿರ್ಮಾಣ ಬೇರೆ ಸ್ಥಳದಲ್ಲಿ ಮಾಡುವುದಾಗಿ ಘೋಷಿಸಿ 12 ದಿನ ಕಳೆದರೂ ಕ್ರೀಡಾಂಗಣಕ್ಕೆ ಗುರುತಿಸಲ್ಪಟ್ಟ 5.08 ಎಕರೆ ಭೂಮಿ ಆರ್‌ಟಿಸಿಯಲ್ಲಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಹೆಸರಿದೆ. ಮತ್ತೆ ಭೂಮಿಯನ್ನು ಹಿಂದಿರುಗಿಸುವ ಪ್ರಕ್ರಿಯೆಯನ್ನು ಯಾವುದೇ ಕಗ್ಗಂಟಾಗದೆ ಒಂದೇ ವಾರದಲ್ಲಿ ಪೂರ್ಣಗೊಳಿಸಬಹುದಾಗಿದೆ. ಆದರೆ, ಅಧಿವೇಶನ ನಡೆಯುತ್ತಿರುವುದರಿಂದ ಭೂಮಿ ಹಿಂದಿರುಗಿಸುವ ಪ್ರಕ್ರಿಯೆ ಇನ್ನು ಆರಂಭಿಸಿಲ್ಲ ಎಂದು ಮೂಲಗಳು ತಿಳಿಸಿವೆ.

ಪತ್ರ ವ್ಯವಹಾರವಷ್ಟೇ ಸಾಕು: ಮಾ.27 ರಂದು ಬಜೆಟ್ ಅಧಿವೇಶನ ಮುಗಿಯಲಿದ್ದು, ಅದಾದ ಬಳಿಕ ಸರ್ಕಾರ ಅಧಿವೇಶನದಲ್ಲಿ ಕೈಗೊಂಡ ನಿರ್ಣಯದಂತೆ ರೇಷ್ಮೆ ನೂಲು ತಯಾರಿಕಾ ಘಟಕದ ಆವರಣದಿಂದ ತಾಲೂಕು ಕ್ರೀಡಾಂಗಣ ನಿರ್ಮಾಣ ಕೈಬಿಟ್ಟಿರುವ ಪ್ರಕ್ರಿಯೆಯನ್ನು ಸರ್ಕಾರದ ಕಾರ್ಯದರ್ಶಿಗಳು ಕಂದಾಯ ಇಲಾಖೆಗೆ ಪತ್ರ ಮುಖೇನ ತಿಳಿಸಬೇಕಿದೆ. ಕಂದಾಯ ಇಲಾಖೆ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಗೆ ಹಾಗೂ ರೇಷ್ಮೆ ಇಲಾಖೆಗೆ ಪತ್ರದ ಮೂಲಕ ಮಾಹಿತಿ ನೀಡಲಿದೆ. ಇದಾದ ಬಳಿಕ ರೇಷ್ಮೆ ಇಲಾಖೆ ಕಂದಾಯ ಇಲಾಖೆ ಅಥವಾ ಸರ್ಕಾರದ ಕಾರ್ಯದರ್ಶಿಗಳಿಂದ ಬಂದ ಪತ್ರವನ್ನು ತಿ.ನರಸೀಪುರ ತಹಶೀಲ್ದಾರ್‌ಗೆ ಕಳಿಸಿ, ಭೂಮಿ ಮಾಲೀಕತ್ವವನ್ನು ವರ್ಗಾವಣೆ ಮಾಡಿಕೊಡುವಂತೆ ಪತ್ರ ಬರೆದರೆ ಒಂದು ವಾರದೊಳಗೆ ಆರ್‌ಟಿಸಿಯಲ್ಲಿ ನಮೂದಾಗಿರುವ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಹೆಸರನ್ನು ತೆಗೆದು, ಮತ್ತೆ ರೇಷ್ಮೆ ಇಲಾಖೆಯ ಹೆಸರು ಸೇರಿಸುವ ಪ್ರಕ್ರಿಯೆ ನಡೆಸಲಾಗುತ್ತದೆ.

ನಮಗೆ ವಿಶ್ವಾಸವಿದೆ: ನೂಲು ತಯಾರಿಕ ಘಟಕದ ಸಿಬ್ಬಂದಿ 'ಮೈಸೂರು ಮಿತ್ರ' ನೊಂದಿಗೆ ಮಾತನಾಡಿ, ರೇಷ್ಮೆ ನೂಲು ತಯಾರಿಕಾ ಘಟಕದ ಆವರಣದಲ್ಲಿ ಕ್ರೀಡಾಂಗಣ ನಿರ್ಮಾಣಕ್ಕೆ ನಮ್ಮ ವಿರೋಧವಿತ್ತು. ಪರ್ಯಾಯ ಸ್ಥಳ ಹುಡುಕಿ ಕ್ರೀಡಾಂಗಣ ನಿರ್ಮಾಣ ಮಾಡುವಂತೆ ನಾವು ಒತ್ತಾಯಿಸಿದ್ದೆವು. ನಮ್ಮೊಂದಿಗೆ ಹಲವು ಸಂಘಟನೆಗಳು ಹೋರಾಟ ನಡೆಸಿದ ಫಲವಾಗಿ ರೇಷ್ಮೆ ಸಚಿವ ಕೆ.ವೆಂಕಟೇಶ್, ಸದನದಲ್ಲಿಯೇ ರೇಷ್ಮೆ ನೂಲು ತಯಾರಿಕಾ ಘಟಕದ ಆವರಣದಲ್ಲಿ ಕ್ರೀಡಾಂಗಣ ನಿರ್ಮಾಣವನ್ನು ಕೈ ಬಿಟ್ಟಿರುವುದಾಗಿ ಘೋಷಿಸಿದ್ದಾರೆ. ಇದು ದಾಖಲೆಯಾಗಿರುವುದರಿಂದ ಮತ್ತೆ ನಮ್ಮ ಸಂಸ್ಥೆಗೆ ಸೇರಿದ ಜಾಗದಲ್ಲಿ ಕ್ರೀಡಾಂಗಣ ನಿರ್ಮಾಣ ಪ್ರಕ್ರಿಯೆ ನಡೆಸುವುದಿಲ್ಲ ಎಂಬ ವಿಶ್ವಾಸವಿದೆ ಎಂದು ತಿಳಿಸಿದ್ದಾರೆ.

ಆಯುಕ್ತರು ನೋಡಿಕೊಳ್ಳುತ್ತಾರೆ: ಕ್ರೀಡಾ ಇಲಾಖೆಗೆ ಮಂಜೂರು ಮಾಡಿಕೊಟ್ಟಿರುವ 5.08 ಎಕರೆ ಜಾಗವನ್ನು ಮರಳಿ ಪಡೆಯುವ ಸಂಬಂಧ ರೇಷ್ಮೆ ಇಲಾಖೆಯ ಆಯುಕ್ತರು ಹಾಗೂ ಹಿರಿಯ ಅಧಿಕಾರಿಗಳು ನೋಡಿಕೊಳ್ಳುತ್ತಾರೆ. ಮಾ.23 ಅಥವಾ ಅಧಿವೇಶನ ಮುಗಿದ ಬಳಿಕ ಹಸ್ತಾಂತರವಾಗಿರುವ ಭೂಮಿಯನ್ನು ಮರಳಿ ಪಡೆಯುವ ದಾಖಲೆ ಮಾಡಿಕೊಡುವ ಪ್ರಕ್ರಿಯೆ ನಡೆಯಲಿದೆ ಎಂದು ಹಿರಿಯ ಅಧಿಕಾರಿಗಳು ತಿಳಿಸಿದ್ದಾರೆ ಎಂದು ನೌಕರರು ಹೇಳಿದ್ದಾರೆ.

ಕೆಎಸ್‌ಐಸಿ ಸಿಬ್ಬಂದಿ ವಿಶ್ವಾಸ



ಸಂಬಂಧಪಟ್ಟ ಇಲಾಖೆಯಿಂದ ಪತ್ರ ಬರಬೇಕು

ಕ್ರೀಡಾಂಗಣಕ್ಕೆ ಮಂಜೂರು ಮಾಡಿ ಕ್ರೀಡಾ ಇಲಾಖೆಗೆ ಹಸ್ತಾಂತರವಾಗಿದ್ದ ಭೂಮಿಯನ್ನು ಮತ್ತೆ ರೇಷ್ಮೆ ಇಲಾಖೆಗೆ ನೀಡುವ ಸಂಬಂಧ ಸರ್ಕಾರ ನಿರ್ಧರಿಸಲಿದೆ. ಸಂಬಂಧಪಟ್ಟ ಇಲಾಖೆಯಿಂದ ಪತ್ರ ಬಂದರೆ, ಆರ್‌ಟಿಸಿಯಲ್ಲಿ ಕ್ರೀಡಾ ಇಲಾಖೆಯ ಹೆಸರು ತೆಗೆದು ಮತ್ತೆ ರೇಷ್ಮೆ ಇಲಾಖೆಯ ಹೆಸರು ಸೇರಿಸುವ ಪ್ರಕ್ರಿಯೆ ನಡೆಯಲಿದೆ.

– ಸುರೇಶ್ ಆಚಾರ್, ತಹಶೀಲ್ದಾರ್, ತಿ.ನರಸೀಪುರ

ಉಚಿತ ಆರೋಗ್ಯ ತಪಾಸಣಾ ಶಿಬಿರ

ಮೈಸೂರು, ಮಾ. 14–ಕರ್ನಾಟಕ ಅರಣ್ಯ ಇಲಾಖೆ, ಮೈಸೂರು ಪ್ರಾದೇಶಿಕ ವಿಭಾಗ, ಹೆಚ್.ಡಿ. ಕೋಟೆ ಉಪ ವಿಭಾಗ, ಹೆಚ್.ಡಿ.ಕೋಟೆ ವಲಯ ಮತ್ತು ಹಾರ್ಟ್ ಸಂಸ್ಥೆ ಮೈಸೂರು ಹಾಗೂ ಸ್ಥಳೀಯ ಸಂಘ ಸಂಸ್ಥೆಗಳ ಸಹಕಾರದೊಂದಿಗೆ ಉಚಿತ ಜನ ಜಾನುವಾರುಗಳ ಆರೋಗ್ಯ ತಪಾಸಣಾ ಶಿಬಿರವನ್ನು ಮಾ.16 ಸೋಮವಾರದಂದು ಕೆ. ಎಡತೊರೆ ಸಮುದಾಯ ಭವನದ ಹತ್ತಿರ ಬೆಳಿಗ್ಗೆ 10ರಿಂದ ಮಧ್ಯಾಹ್ನ 2 ಗಂಟೆವರೆಗೆ ಆಯೋಜಿಸಲಾಗಿದೆ.



ಶಿಬಿರದಲ್ಲಿ ಕಣ್ಣಿನ ಪರೀಕ್ಷೆ ಮತ್ತು ಸಲಹೆ, ಸಂಧಿವಾತ ಮತ್ತು ಮೂಳೆ ರೋಗ ತಪಾಸಣೆ, ಬಿ.ಪಿ ಪರೀಕ್ಷೆ, ಸಕ್ಕರೆ ಕಾಯಿಲೆ ಪರೀಕ್ಷೆ, ಹೃದಯ ಸಂಬಂಧ ಸಮಸ್ಯೆಗಳ ತಪಾಸಣೆ, ಇ.ಸಿ.ಜಿ ಪರೀಕ್ಷೆ ಹಾಗೂ ಜಾನುವಾರುಗಳಾದ ಹಸು ಆಡು, ಕುರಿ, ಇನ್ನಿತರ ಸಾಕು ಪ್ರಾಣಿಗಳ ತಪಾಸಣೆಯನ್ನು ನಡೆಸಲಾಗುವುದು ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ವಿಶ್ವ ಮಹಿಳಾ ದಿನಾಚರಣೆ ಅಂಗವಾಗಿ ಹುತಾತ್ಮ ಯೋಧರ ತಾಯಂದಿರು, ಮಡದಿಯರಿಗೆ ಸನ್ಮಾನ



ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಹುತಾತ್ಮ ಯೋಧರ ತಾಯಂದಿರು ಮತ್ತು ಮಡದಿಯರನ್ನು ಅಭಿನಂದಿಸಿದರು.

ಮೈಸೂರು, ಮಾ.14(ಜಿಎ)–ಮೈಸೂರಿನ ಟೌನ್‌ಹಾಲ್‌ನಲ್ಲಿ ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ರಕ್ಷಣಾ ಸಮಿತಿ ವತಿಯಿಂದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ವಿಧಾನ ಪರಿಷತ್ ಸದಸ್ಯ ಡಾ.ಯತೀಂದ್ರ ಸಿದ್ದರಾಮಯ್ಯ, ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ನಾಗಲಕ್ಷ್ಮಿ ಚೌದರಿ ಹುತಾತ್ಮ ಯೋಧರ ತಾಯಂದಿರು ಮತ್ತು ಮಡದಿಯರನ್ನು ಅಭಿನಂದಿಸಿದರು.

ನಂತರ ಡಾ.ಯತೀಂದ್ರ ಸಿದ್ದರಾಮಯ್ಯ ಮಾತನಾಡಿ, ಸೃಷ್ಟಿಯಲ್ಲಿ ಗಂಡು, ಹೆಣ್ಣು ಪ್ರಮುಖರು. ಇಬ್ಬರಲ್ಲಿ ಒಬ್ಬರಿಲ್ಲದೇ ಇದ್ದರೇ ಸೃಷ್ಟಿಯೇ ಅಪೂರ್ಣ. ಇಬ್ಬರು ಸಮಾನರಾದರೂ ಸಮಾಜದಲ್ಲಿ ಹಲವಾರು ವಿಷಯದಲ್ಲಿ ಹೆಣ್ಣನ್ನು ಧಮನ ಮಾಡುವ ಕೆಲಸಗಳು ನಡೆಯುತ್ತದೆ ಎಂದರು.

ರಾಜಕೀಯವಾಗಿ ಅಧಿಕಾರ ಪಡೆಯುವ ಸಂದರ್ಭದಲ್ಲಿ ಗಂಡು ಹೆಣ್ಣಿನ ಜಿದ್ದಾಟದಲ್ಲಿ ಮಹಿಳೆಯರಿಗೆ ಅದು ಸಾಧ್ಯವಾಗುವುದಿಲ್ಲ. ಮಹಿಳೆಯರು, ಮಕ್ಕಳು ಮತ್ತು ಮನೆಯನ್ನು ಪೋಷಣೆ ಮಾಡುತ್ತಾರೆ. ಅವರನ್ನು ಕಟುಂಬಕ್ಕೆ ಸೀಮಿತ ಮಾಡಿ ಕೆಲವು ಪುರುಷರು ಈ ರೀತಿ ಕಟ್ಟುಪಾಡು ಮಾಡಿದ್ದಾರೆ. ಅದಕ್ಕೆ ಧರ್ಮದ ತಳುಕು ಹಾಕಿದ್ದಾರೆ ಎಂದು ತಿಳಿಸಿದರು.

ಮಹಿಳೆ ಆಗುವುದಕ್ಕೂ ಮುನ್ನ ಅವರೂ ಮನುಷ್ಯೆ ಎಂಬದನ್ನು ಅರಿತುಕೊಳ್ಳಬೇಕು. ಸಮಾಜಕ್ಕೆ ಏನಾದರೂ ನೀಡಬೇಕು ಎಂಬ ಹಂಬಲಗಳಿವೆ. ಈ ನಿಟ್ಟಿನಲ್ಲಿ ಮಹಿಳೆಯರ ಆಕಾಂಕ್ಷೆಗಳನ್ನು ಹತ್ತಿಕ್ಕುವ ಕೆಲಸ ಮಾಡಬಾರದು ಎಂದರು.

ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ನಾಗಲಕ್ಷ್ಮಿ ಚೌಧರಿ ಮಾತನಾಡಿ, 'ಹಕ್ಕು, ನ್ಯಾಯ, ಕ್ರಮ' ಈ ವರ್ಷದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯ ಮುಖ್ಯ ಸಂದೇಶವಾಗಿದ್ದು, ಹೆಣ್ಣು ತನ್ನ ಹಕ್ಕಿನ ಬಗ್ಗೆ ತಿಳಿದುಕೊಳ್ಳಬೇಕು ಇಲ್ಲದಿದ್ದರೆ ಅದು ಸಾವಿಗೆ ಸಮಾನ ಎಂದರು.

ನಂತರ ಪೋಷಕತ್ವ ಯೋಜನೆ, ಜನನಿ ಶಿಶು ಸುರಕ್ಷ ಯೋಜನೆ ಕುರಿತು ವಿವರಿಸಿದರು. ಕಾರ್ಯಕ್ರಮದಲ್ಲಿ ಮೈಸೂರು ಜಿಲ್ಲಾ ಪತ್ರಕರ್ತರ ಅಧ್ಯಕ್ಷ ಕೆ.ದೀಪಕ್, ಸಮಿತಿ ರಾಜ್ಯಾಧ್ಯಕ್ಷೆ ವಿಪಿ.ಸುಶೀಲಾ, ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ರಾಜೇಶ್, ಎಂ.ಪುಟ್ಟರಾಜು, ಅಮೀನ ಬೇಗಂ, ವೈ.ಬಿ. ಈಶ್ವರ್, ಪರಮೇಶ್, ಎನ್.ಕೆ.ಸುದರ್ಶನ್, ಹೆಚ್.ಟಿ.ಪಾರ್ವತಿ ಉಪಸ್ಥಿತರಿದ್ದರು.

ಮೈಸೂರು ಅರಮನೆ, ಚಾಮುಂಡಿಬೆಟ್ಟಕ್ಕೆ ಒಡಿಸ್ಸಾ ಕಾಂಗ್ರೆಸ್ ಶಾಸಕರು ಭೇಟಿ

ಆಪರೇಷನ್ ಕಮಲದ ಭೀತಿಯ ನಡುವೆಯೂ ಶಾಸಕರ ಜಾಲಿ ಟ್ರಿಪ್



ಒಡಿಸ್ಸಾದ ಕಾಂಗ್ರೆಸ್ ಶಾಸಕರು ಶನಿವಾರ ಮೈಸೂರು ಅರಮನೆ ವೀಕ್ಷಣೆ ಮಾಡಿದರು.

ಮೈಸೂರು, ಮಾ.14(ಬಿಎಲ್‌ಯು)– ರಾಜ್ಯಸಭಾ ಚುನಾವಣೆ ವೇಳೆ ಆಪರೇಷನ್ ಕಮಲದ ಭೀತಿಯಿಂದ ಒಡಿಸ್ಸಾದಿಂದ ಬೆಂಗಳೂರಿಗೆ ಆಗಮಿಸಿರುವ 13 ಕಾಂಗ್ರೆಸ್ ಶಾಸಕರು ಇಂದು ಚಾಮುಂಡಿಬೆಟ್ಟ ಹಾಗೂ ಮೈಸೂರು ಅರಮನೆಗೆ ಭೇಟಿ ನೀಡಿದ್ದರು.

ಬೆಂಗಳೂರಿನ ಬಿಡದಿ ರೆಸಾರ್ಟ್‌ನಿಂದ ಒಂದೇ ಬಸ್‌ನಲ್ಲಿ ಮೈಸೂರಿಗೆ ಆಗಮಿಸಿದ ಕಾಂಗ್ರೆಸ್ ಶಾಸಕರು ಚಾಮುಂಡಿಬೆಟ್ಟಕ್ಕೆ ತೆರಳಿ ನಾಡದೇವತೆ ತಾಯಿ ಚಾಮುಂಡೇಶ್ವರಿ ದರ್ಶನ ಪಡೆದರು.

ತರುವಾಯ ಮೈಸೂರು ಅರಮನೆಗೆ ಕೂಡ ಭೇಟಿ ನೀಡಿದರು. ಶಾಸಕರು ಪ್ರಯಾಣಿಸಿದ ಬಸ್‌ಗೆ ಪೊಲೀಸ್ ಎಸ್ಕಾರ್ಟ್ ನೀಡಿ, ಬಿಗಿ ಭದ್ರತೆ ನೀಡಲಾಗಿತ್ತು.

ಮಾರ್ಚ್ 16 ರಂದು ರಾಜ್ಯಸಭಾ ಚುನಾವಣೆ ನಡೆಯಲಿದ್ದು, ಕಾಂಗ್ರೆಸ್ ಶಾಸಕರಿಗೆ ಆಪರೇಷನ್ ಕಮಲದ ಭೀತಿ ಎದುರಾಗಿದೆ. ಬಿಜೆಪಿ ನಾಯಕರು ಕಾಂಗ್ರೆಸ್ ಶಾಸಕರಿಗೆ ದೊಡ್ಡ ಆಫರ್ ಕೊಟ್ಟು ಅಡ್ಡ ಮತದಾನಕ್ಕೆ ಆಮಿಷವೊಡ್ಡುತ್ತಿದ್ದಾರೆಂಬ ಆತಂಕದಿಂದ ಶಾಸಕರನ್ನೆಲ್ಲಾ ಬೆಂಗಳೂರಿಗೆ ಕರೆತರಲಾಗಿದೆ ಎಂದು ಕಾಂಗ್ರೆಸ್ ನಾಯಕರು ತಿಳಿಸಿದ್ದಾರೆ.

ಬಿಜೆಪಿ ನಾಯಕರ ಸಂಪರ್ಕಕ್ಕೆ ಸಿಗದಂತೆ ಒಡಿಸ್ಸಾ ಶಾಸಕರನ್ನು ಬೆಂಗಳೂರಿಗೆ ಕರೆತಂದಿರುವ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಬಿಡದಿಯ ಖಾಸಗಿ ರೆಸಾರ್ಟ್‌ನಲ್ಲಿ ವಾಸ್ತವ್ಯ ವ್ಯವಸ್ಥೆ ಮಾಡಿದ್ದಾರೆ.

ಸದ್ಯಕ್ಕೆ ಶೇಕಡ 25 ರಷ್ಟು ವಾಣಿಜ್ಯ ಸಿಲಿಂಡರ್ ಪೂರೈಕೆ

ಕೇಂದ್ರ ಪೆಟ್ರೋಲಿಯಂ ಸಚಿವ ಹರ್ದೀಪ್ ಸಿಂಗ್ ಪುರಿ ಭರವಸೆ

ನವದೆಹಲಿ, ಮಾ.14(ಬಿಎಲ್ ಯು)– ಸದ್ಯಕ್ಕೆ ಶೇಕಡ 25 ರಷ್ಟು ವಾಣಿಜ್ಯ ಸಿಲಿಂಡರ್‌ಗಳ ಸರಬರಾಜು ಮಾಡಲಾಗುವುದು ಎಂದು ಕೇಂದ್ರ ಪೆಟ್ರೋಲಿಯಂ ಸಚಿವ ಹರ್ದೀಪ್ ಸಿಂಗ್ ಪುರಿ ಭರವಸೆ ನೀಡಿದ್ದಾರೆ.

ನವದೆಹಲಿಯಲ್ಲಿ ನಿನ್ನೆ ದಕ್ಷಿಣ ಭಾರತ ಹೋಟೆಲ್ ಮತ್ತು ರೆಸ್ಟೋರೆಂಟ್‌ಗಳ ಸಂಘದ ಅಧ್ಯಕ್ಷ ಜಿ.ಕೆ.ಶೆಟ್ಟಿ ಹಾಗೂ ಭಾರತದ ಹೋಟೆಲ್ ಮತ್ತು ರೆಸ್ಟೋರೆಂಟ್ ಸಂಘದ ಮಾಜಿ ಅಧ್ಯಕ್ಷ ಕೆ.ಶ್ಯಾಮರಾಜು ಅವರು ಭೇಟಿ ಮಾಡಿದ ವೇಳೆ ಹರ್ದೀಪ್ ಸಿಂಗ್ ಪುರಿ ಆಶ್ವಾಸನೆ ನೀಡಿದರು.

ಸದ್ಯಕ್ಕೆ ಶೇಕಡ 25 ರಷ್ಟು ವಾಣಿಜ್ಯ ಸಿಲಿಂಡರ್‌ಗಳನ್ನು ಸರಬರಾಜು ಮಾಡುತ್ತೇವೆ. ಇನ್ನೊಂದು ವಾರದೊಳಗೆ ಈ ಸಮಸ್ಯೆ ಪರಿಹಾರವಾಗುತ್ತದೆ ಎಂದು ಸಚಿವರು ವಾಗ್ದಾನ ನೀಡಿದ್ದಾರೆ.

ಇದೇ ವೇಳೆ ಕೇಂದ್ರ ಪ್ರವಾಸೋದ್ಯಮ ಸಚಿವ ಗಜೇಂದ್ರ ಸಿಂಗ್ ಶೇಖಾವತ್ ಹಾಗೂ ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಪ್ರಹ್ಲಾದ್ ಜೋಷಿ ಅವರನ್ನು ಕೂಡ ಭೇಟಿ ಮಾಡಿ ಸಮರ್ಪಕ ವಾಣಿಜ್ಯ ಸಿಲಿಂಡರ್ ಪೂರೈಕೆ ಮಾಡುವಂತೆ ಮನವಿ ಸಲ್ಲಿಸಿದರು.



ನವದೆಹಲಿಯಲ್ಲಿ ಶುಕ್ರವಾರ ದಕ್ಷಿಣ ಭಾರತ ಹೋಟೆಲ್ ಮತ್ತು ರೆಸ್ಟೋರೆಂಟ್‌ಗಳ ಸಂಘದ ಅಧ್ಯಕ್ಷ ಜಿ.ಕೆ.ಶೆಟ್ಟಿ, ಭಾರತದ ಹೋಟೆಲ್ ಮತ್ತು ರೆಸ್ಟೋರೆಂಟ್ ಸಂಘದ ಮಾಜಿ ಅಧ್ಯಕ್ಷ ಕೆ.ಶ್ಯಾಮ ರಾಜು ಅವರು ಕೇಂದ್ರ ಪ್ರವಾಸೋದ್ಯಮ ಸಚಿವ ಗಜೇಂದ್ರ ಸಿಂಗ್ ಶೇಖಾವತ್ ಅವರನ್ನು ಭೇಟಿ ಮಾಡಿ ವಾಣಿಜ್ಯ ಸಿಲಿಂಡರ್ ಪೂರೈಕೆ ಸಮಸ್ಯೆ ಪರಿಹಾರ ಮಾಡುವಂತೆ ಮನವಿ ಮಾಡಿದರು.

ವಾಣಿಜ್ಯ ಸಿಲಿಂಡರ್ ಸರಬರಾಜು ಸ್ಥಗಿತದಿಂದ ಹೋಟೆಲ್ ಉದ್ಯಮಕ್ಕೆ ಭಾರೀ ಹೊಡೆತ

ಕನಿಷ್ಠ ಶೇ.20-25ರಷ್ಟು ಪೂರೈಕೆಗೆ ಹೋಟೆಲ್ ಉದ್ಯಮಿಗಳ ಆಗ್ರಹ

- ಸಿಲಿಂಡರ್ ಸಮಸ್ಯೆಯಿಂದ ಪ್ರವಾಸೋದ್ಯಮ, ರೈತರಿಗೆ ಸಮಸ್ಯೆ
- ಹೋಟೆಲ್ ಉದ್ಯಮದಲ್ಲಿನ ಲಕ್ಷಾಂತರ ಸಿಬ್ಬಂದಿ ಸ್ಥಿತಿಯೂ ಅತಂತ್ರ

ಮೈಸೂರು,ಮಾ.14(ಎಂಟಿವೈ)– ಮೈಸೂರಿಗೆ ಬರುವ ಪ್ರವಾಸಿಗರು, ರೈತರು ಹಾಗೂ ಹೋಟೆಲ್ ಉದ್ಯಮವನ್ನೇ ನಂಬಿಕೊಂಡವರ ಹಿತಕಾಯಲು ಸರ್ಕಾರ ಹೋಟೆಲ್ ಉದ್ಯಮಿಗಳಿಗೆ ಶೇ.20 ರಿಂದ 25ರಷ್ಟಾದರೂ ಕಮರ್ಷಿಯಲ್ ಗ್ಯಾಸ್ ಸಿಲಿಂಡರ್ ಪೂರೈಸಲು ಕ್ರಮ ಕೈಗೊಳ್ಳಬೇಕು ಎಂದು ಮೈಸೂರು ಜಿಲ್ಲಾ ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ ಒತ್ತಾಯಿಸಿದ್ದಾರೆ.

ಮೈಸೂರಿನ ಕೃಷ್ಣಮೂರ್ತಿಪುರಂನಲ್ಲಿರುವ ಹೋಟೆಲ್ ಮಾಲೀಕರ ಸಂಘದ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಳೆದ ಕೆಲ ದಿನಗಳಿಂದ ಕಮರ್ಷಿಯಲ್ ಗ್ಯಾಸ್ ಸಿಲಿಂಡರ್ ಬಳಕೆಯಲ್ಲಿ ವ್ಯತ್ಯಯ ಉಂಟಾಗಿದ್ದು, ಅಡುಗೆ ಅನಿಲ ಸರಬರಾಜು ಕಂಪನಿಗಳಲ್ಲಿ ಕಮರ್ಷಿಯಲ್ ಸಿಲಿಂಡರ್‌ಗೆ ರೀಫಿಲ್ಲಿಂಗ್ ಮಾಡುವ ಪ್ರಕ್ರಿಯೆ ಸ್ಥಗಿತಗೊಳಿಸಲಾಗಿತ್ತು. ಇದರಿಂದ ಹೋಟೆಲ್‌ಗಳಿಗೆ ಪೂರೈಕೆಯಾಗುತ್ತಿದ್ದ ಕಮರ್ಷಿಯಲ್ ಸಿಲಿಂಡರ್ ಲಭ್ಯವಾಗದೆ ಹೋಟೆಲ್ ಉದ್ಯಮ ಸಂಕಷ್ಟಕ್ಕೆ ಸಿಲುಕಿತ್ತು. ಸಿಲಿಂಡರ್ ಸಮಸ್ಯೆ ಕೇವಲ ಮೈಸೂರಿಗೆ ಮಾತ್ರವಲ್ಲದೆ ಎಲ್ಲೆಡೆ ಉಂಟಾಗಿದೆ. ಒಂದು ವಾರ ಕಾಯುವಂತೆ ಆಹಾರ ಇಲಾಖೆ ಸಚಿವ ಕೆ.ಹೆಚ್.ಮುನಿಯಪ್ಪ ಸಲಹೆ ನೀಡಿದ್ದಾರೆ. ಆದರೆ, ವಾರ ಕಾಯುತ್ತಾ ಕುಳಿತರೆ ವ್ಯವಸ್ಥೆ ಅಯೋಮಯವಾಗಲಿದ್ದು ಪ್ರವಾಸಿಗರು ಮಾತ್ರವಲ್ಲದೆ, ಹೋಟೆಲ್ ಅನ್ನೇ ನಂಬಿಕೊಂಡಿರುವ ಜನ, ರೈತರಿಗೂ ತೀವ್ರತರವಾದ ತೊಂದರೆಯಾಗಲಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಮೈಸೂರು ನಗರ ಸೇರಿದಂತೆ ಜಿಲ್ಲೆಯಲ್ಲಿ 1500ಕ್ಕೂ ಹೆಚ್ಚು ಹೋಟೆಲ್‌ಗಳಿದ್ದು, ಸಿಲಿಂಡರ್ ಪೂರೈಕೆಯಲ್ಲಿ ಆದ ವ್ಯತ್ಯಯದಿಂದಾಗಿ ನಾಲ್ಕೈದು ದೊಡ್ಡ ಹೋಟೆಲ್‌ಗಳು ಸೇರಿದಂತೆ 100ಕ್ಕೂ ಹೆಚ್ಚು ಫಾಸ್ಟ್‌ಫುಡ್, ಸಣ್ಣ ಟೀ ಅಂಗಡಿಗಳು ಮುಚ್ಚಲ್ಪಟ್ಟಿವೆ. ಇನ್ನುಳಿದ ಹೋಟೆಲ್‌ಗಳಲ್ಲಿ ಗ್ರಾಹಕರಿಗೆ ತೊಂದರೆಯಾಗಬಾರದೆಂಬ ದೃಷ್ಟಿಯಲ್ಲಿ ಪರ್ಯಾಯ ಮಾರ್ಗ ಅನುಸರಿಸಿ, ಕಷ್ಟವಾದರೂ ಹೋಟೆಲ್ ಉದ್ಯಮ ನಡೆಸಿಕೊಂಡು ಬರಲಾಗುತ್ತಿದೆ ಎಂದರು.



ಮೈಸೂರು ಜಿಲ್ಲಾ ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

ಶೇ.20ರಿಂದ 25ಕ್ಕೆ ಏರಿಸಿ: ಕಳೆದ ಎರಡು ದಿನದಿಂದ ಕಮರ್ಷಿಯಲ್ ಗ್ಯಾಸ್ ಸಿಲಿಂಡರ್ ಪೂರೈಕೆಯಲ್ಲಿ ಶೇ.10ರಷ್ಟು ಸರಬರಾಜು ಮಾಡಲಾಗುತ್ತಿದೆ. 5 ಸಿಲಿಂಡರ್ ಬಳಸುತ್ತಿದ್ದವರಿಗೆ 1,10 ಸಿಲಿಂಡರ್ ಬಳಸುತ್ತಿದ್ದ ಹೋಟೆಲ್‌ಗಳಿಗೆ 2 ಸಿಲಿಂಡರ್ ನೀಡಲಾಗುತ್ತಿದೆ. ಇದರಿಂದ ಹೋಟೆಲ್‌ಗಳಲ್ಲಿ ಮೆನು ಬದಲಾಯಿಸಿ, ಕೆಲವೇ ಕೆಲವು ಆಹಾರ ಪದಾರ್ಥಗಳನ್ನು ತಯಾರಿಸಿ, ಗ್ರಾಹಕರಿಗೆ ನೀಡಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ಸರ್ಕಾರ ಕೂಡಲೇ ಕಮರ್ಷಿಯಲ್ ಸಿಲಿಂಡರ್ ಪೂರೈಕೆಯನ್ನು ಶೇ.20ರಿಂದ 25ರಷ್ಟಾದರೂ ಹೆಚ್ಚಿಸಬೇಕು. ಈ ಸಂಬಂಧ ಸರ್ಕಾರ ಹಾಗೂ ಆಹಾರ ಇಲಾಖೆ ಸಚಿವರಿಗೆ ಪತ್ರ ಬರೆಯಲಾಗಿದೆ ಎಂದು ತಿಳಿಸಿದರು.

ಪ್ರವಾಸೋದ್ಯಮ ಕುಸಿತ: ಸಿಲಿಂಡರ್ ಸಮಸ್ಯೆ ಉದ್ಭವಿಸಿರುವ ಹಿನ್ನೆಲೆಯಲ್ಲಿ ಮೈಸೂರಿನ ಪ್ರವಾಸೋದ್ಯಮಕ್ಕೂ ಹೊಡೆತ ಬಿದ್ದಿದೆ. ಪ್ರತಿದಿನ 50 ಸಾವಿರ ಪ್ರವಾಸಿಗರು, ವಾರಾಂತ್ಯದಲ್ಲಿ 1.5 ಲಕ್ಷ ಪ್ರವಾಸಿಗರು ಮೈಸೂರಿಗೆ ಬರುತ್ತಾರೆ. ಆದರೆ, ಸಿಲಿಂಡರ್ ಸಮಸ್ಯೆಯಿಂದಾಗಿ ಮೈಸೂರಿಗೆ ಬರುವ ಪ್ರವಾಸಿಗರ ಸಂಖ್ಯೆ ಶೇ.50 ಕುಸಿದಿದೆ. ಕಾಯ್ದಿರಿಸಿದ ಕೊಠಡಿಗಳನ್ನು ರದ್ದು ಮಾಡುತ್ತಿದ್ದಾರೆ. ಕೆಲವರು ಊಟ ಸಿಗುತ್ತದಾ ಎಂದು ಪ್ರಶ್ನೆ ಮಾಡುತ್ತಿದ್ದಾರೆ. ವಾರದ ದಿನಗಳಲ್ಲಿ ದಿನವೊಂದಕ್ಕೆ 40ರಿಂದ 5 ಕೊಠಡಿಗಳಷ್ಟೇ ಬುಕ್ ಆಗುತ್ತಿವೆ. ವಾರಾಂತ್ಯದಲ್ಲಿ ಕಡಿಮೆ ಸಂಖ್ಯೆಯ ಪ್ರವಾಸಿಗರು ಮೈಸೂರಿಗೆ ಬರುತ್ತಿದ್ದಾರೆ. ಇದರಿಂದಾಗಿ ಪ್ರವಾಸೋದ್ಯಮಕ್ಕೆ ಚೈತನ್ಯ ತುಂಬುವುದಕ್ಕಾಗಿ ಕಮರ್ಷಿಯಲ್ ಸಿಲಿಂಡರ್ ಪೂರೈಕೆ ಹೆಚ್ಚಿಸಬೇಕು ಎಂದರು.

ಮೈಸೂರಲ್ಲಿ ಹೋಟೆಲ್ ಉದ್ಯಮವನ್ನು ನಂಬಿಕೊಂಡಿರುವ 25 ಸಾವಿರಕ್ಕೂ ಹೆಚ್ಚು ಸಿಬ್ಬಂದಿಗಳಿದ್ದಾರೆ. ಹಾಗೆಯೇ ರಾಜ್ಯದಲ್ಲಿ 13 ಲಕ್ಷ ಹೋಟೆಲ್ ಸಿಬ್ಬಂದಿಗಳಿದ್ದಾರೆ. ಈಗಾಗಲೇ ಹಲವು ಹೋಟೆಲ್‌ಗಳಲ್ಲಿ ಇಂಡಕ್ಷನ್ ಸ್ಟೌ, ಸೌದೆ, ಮರದ ಹೊಟ್ಟು, ಭತ್ತದ ಹೊಟ್ಟಿನ ಒಲೆಯಿಂದ ಆಹಾರ ಪದಾರ್ಥ ತಯಾರಿಸುವ ಮೂಲಕ ಹೋಟೆಲ್‌ಗಳು ಗ್ರಾಹಕರಿಗೆ ಸೇವೆ ಒದಗಿಸುತ್ತಿವೆ. ಆಸ್ಪತ್ರೆಯಂತೆ ಹೋಟೆಲ್ ಉದ್ಯಮವೂ ಮಹತ್ವದ್ದಾಗಿದೆ ಎಂದು ತಿಳಿಸಿದರು.

ರೈತರಿಗೆ ತೊಂದರೆ: ಸಿಲಿಂಡರ್ ಸಮಸ್ಯೆಯಿಂದಾಗಿ ರೈತರಿಗೆ ತೀವ್ರ ತೊಂದರೆಯಾಗುತ್ತಿದೆ. ಬೇಸಿಗೆ ವೇಳೆ ರೈತರು ಬೆಳೆದ ತರಕಾರಿ, ಕಾಯಿಪಲ್ಯಕ್ಕೆ ಹೆಚ್ಚಿನ ಬೇಡಿಕೆ ಇರುತ್ತಿತ್ತು. ಟೊಮೊಟೋ ಹಾಗೂ ತರಕಾರಿಗೆ ಹೆಚ್ಚಿನ ಬೆಲೆ ಸಿಗುತ್ತಿತ್ತು. ಆದರೆ, ಈಗ ಉತ್ತಮ ಟೊಮೊಟೊ ಬೆಲೆ ಕೆಜಿಗೆ 4 ರೂ., 100 ರೂ. ಇರಬೇಕಾಗಿದ್ದ ತರಕಾರಿ 20ರೂ. ಕುಸಿದಿದೆ. ಈ ಕಾರಣದಿಂದ ಹೋಟೆಲ್‌ಗಳಿಗೆ ಕಮರ್ಷಿಯಲ್ ಸಿಲಿಂಡರ್ ಪೂರೈಕೆ ಹೆಚ್ಚಿಸಬೇಕು ಎಂದು ಮನವಿ ಮಾಡಿದರು.

ಗೃಹ ಬಳಕೆ ಸಿಲಿಂಡರ್ ಬಳಕೆಗೆ ನಾವು ಬೆಂಬಲಿಸಲ್ಲ: ಹೋಟೆಲ್ ಹಾಗೂ ಫಾಸ್ಟ್‌ಫುಡ್‌ಗಳಲ್ಲಿ ಗೃಹ ಬಳಕೆಯ ಸಿಲಿಂಡರ್ ಬಳಕೆಯನ್ನು ಹೋಟೆಲ್ ಮಾಲೀಕರ ಸಂಘ ಬೆಂಬಲಿಸುವುದಿಲ್ಲ. ಈಗಾಗಲೇ ಫಾಸ್ಟ್‌ಫುಡ್‌ಗಳಲ್ಲಿ ಗೃಹ ಬಳಕೆ ಸಿಲಿಂಡರ್ ಬಳಸುತ್ತಿರುವುದನ್ನು ಪತ್ತೆ ಮಾಡಿ ಕ್ರಮ ಕೈಗೊಂಡಿದ್ದಾರೆ. ಇದು ಸ್ವಾಗತಾರ್ಹ ಎಂದರು.

ಮೊಟ್ಟೆ ರೇಟ್ ಕುಸಿತ: ಸಿಲಿಂಡರ್ ಪೂರೈಕೆಯಲ್ಲಿನ ವ್ಯತ್ಯಯದಿಂದ ಕೋಳಿ ಮೊಟ್ಟೆ ದರವೂ ಕುಸಿದಿದೆ. 7 ರೂ. ದರ ವಿದ್ದ ಒಂದು ಮೊಟ್ಟೆ ಇದೀಗ 4 ರೂ.ಗೆ ಕುಸಿದಿದೆ. ಕೋಳಿ ಮಾಂಸ ಕೇಳುವವರೇ ಇಲ್ಲದಂತಾಗಿದೆ. ಹೋಟೆಲ್‌ಗಳಲ್ಲಿ ತಯಾರಾಗುತ್ತಿದ್ದ ಆಹಾರ ಪದಾರ್ಥಗಳು ಕಡಿಮೆಯಾಗಿರುವುದರಿಂದ ಎಲ್ಲಾ ತರಕಾರಿಗಳ ದರ ಕಡಿಮೆಯಾಗಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಹೋಟೆಲ್ ಉದ್ಯಮಿಗಳಾದ ಎ.ಆರ್.ರವೀಂದ್ರ ಭಟ್, ಸುಬ್ರಹ್ಮಣ್ಯ, ತಂತ್ರಿ, ಅರುಣ್ ಇದ್ದರು.

ಜಲಸೂರು-ಬೆಂಗಳೂರು ದ್ವಿಪಥ ರಸ್ತೆಗೆ ಜಮೀನು ನೀಡುತ್ತಿಲ್ಲವೆಂದು ಸುಳ್ಳು ಆರೋಪ

ಶಾಸಕ ಡಿ.ರವಿಶಂಕರ್ ವಿರುದ್ಧ ಜಿಪಂ ಮಾಜಿ ಸದಸ್ಯ ಸಾ.ರಾ.ನಂದೀಶ್ ವಾಗ್ದಾಳಿ



ಸಾ.ರಾ.ನಂದೀಶ್

ಮೈಸೂರು,ಮಾ.14(ಜಿಎ)–ಮೈಸೂರು ಜಿಲ್ಲೆ ಸಾಲಿಗ್ರಾಮ ತಾಲೂಕಿನ ಕೆರೆಯ ಕೋಡಿಯಿಂದ ಹಳ್ಳಿ ಮೈಸೂರು ರಸ್ತೆಯ ವರೆಗೆ ನಡೆಯುತ್ತಿರುವ ಜಲಸೂರು–ಬೆಂಗಳೂರು ರಾಜ್ಯ ಹೆದ್ದಾರಿಯನ್ನು ದ್ವಿಪಥ ರಸ್ತೆಯನ್ನಾಗಿ ಮಾಡುವ ಅಭಿವೃದ್ಧಿ ಕಾಮಗಾರಿಗೆ ರೈತರು ಜಮೀನು ನೀಡಲು ಮುಂದಾಗುತ್ತಿಲ್ಲವೆಂದು ಕೆ.ಆರ್.ನಗರ ಶಾಸಕ ಡಿ.ರವಿಶಂಕರ್ ವಿಧಾನಸಭೆಯಲ್ಲಿ ಸುಳ್ಳು ಮಾಹಿತಿ ನೀಡಿದ್ದಾರೆ ಎಂದು ಜಿಪಂ ಮಾಜಿ ಸದಸ್ಯ ಸಾ.ರಾ.ನಂದೀಶ್ ಆರೋಪಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಾಲಿಗ್ರಾಮದ ಮಾರ್ಗದಲ್ಲಿ 165 ಕಿ.ಮೀ. ರಸ್ತೆ ಅಭಿವೃದ್ಧಿಯಾಗಿದೆ. ಆದರೆ, 600 ಮೀಟರ್‌ನಷ್ಟು ಅಭಿವೃದ್ಧಿಯಾಗಿಲ್ಲ. ಆದರೆ, ರೈತರು ಜಮೀನು ನೀಡುತ್ತಿಲ್ಲ. ಟೆಂಪೋ ಮಾಲೀಕರ ಸಂಘದವರು ಸಹಕಾರ ನೀಡುತ್ತಿಲ್ಲ, ಪರಿಹಾರ ಪಡೆದವರು ಜಮೀನು ನೀಡುತ್ತಿಲ್ಲ ಎಂದು ಹೇಳಿದ್ದಾರೆ. ಅಲ್ಲದೇ, ಸಭೆ ನಡೆಸಿ ಮಾಹಿತಿ ನೀಡಿದ್ದೇನೆ ಎಂದು ಹೇಳಿದ್ದಾರೆ. ಯಾವಾಗ ಸಭೆ ನಡೆಸಿದ್ದೀರಾ? ಯಾವ ರೈತರು ಜಮೀನು ನೀಡುತ್ತಿಲ್ಲ ಎಂದು ಹೇಳಲಿ ರವಿಶಂಕರ್ ಅವರಿಗೆ ಸುದ್ದಿಗೋಷ್ಠಿಯಲ್ಲಿ ಪ್ರಶ್ನಿಸಿದರು.

ಕೆ.ಆರ್.ನಗರ ಜನತೆ, ನಿಮ್ಮನ್ನು ನಂಬಿ ಗೆಲ್ಲಿಸಿ ಕಳುಹಿಸಿದ್ದಾರೆ. ಆದರೆ, ಅಭಿವೃದ್ಧಿ ವಿಚಾರದಲ್ಲಿ ದಿಕ್ಕು ತಪ್ಪಿಸುವ ಕೆಲಸ ಮಾಡಬೇಡಿ. ನಿಮ್ಮ ಪಕ್ಷದವರೇ ಪರಿಹಾರ ಪಡೆದು, ಜಮೀನು ನೀಡಲು ಸರ್ಕಾರಕ್ಕೆ ಸತಾಯಿಸುತ್ತಿದ್ದಾರೆ. ಆ ರಸ್ತೆಯಲ್ಲಿರುವ ತಮ್ಮ ತೋಟದಲ್ಲಿ 50 ವರ್ಷಕ್ಕಿಂತ ಹಳೆಯ ತೆಂಗಿನಮರಗಳನ್ನು ಕಡಿದು ಹಾಕಲಾಗಿದೆ. ಫಲ ನೀಡುತ್ತಿದ್ದ ಮರಗಳನ್ನು ಕಡಿಯಲು ಅಧಿಕಾರಿಗಳಿಗೆ ಅನುಮತಿ ನೀಡಿದವರು ಯಾರು? ಎಂದು ಕಿಡಿಕಾರಿದರು.

ಮಾಜಿ ಸಚಿವ ಸಾ.ರಾ.ಮಹೇಶ್ ಅವರು ಸಚಿವರಾಗಿದ್ದಾಗ, ಸಾಲಿಗ್ರಾಮ ರಸ್ತೆಯ ಅಭಿವೃದ್ಧಿ ಕಾಮಗಾರಿಗಳು ನಡೆದಿತ್ತು. ಶೇ.30ರಷ್ಟು ಬಾಕಿ ಇರುವ ಕಾಮಗಾರಿಯ ಬಗ್ಗೆ, ವಿಧಾನಸಭೆಯಲ್ಲಿ ಸುಳ್ಳು ಮಾಹಿತಿ ನೀಡಿ ಕ್ಷೇತ್ರದ ಜನರ ದಿಕ್ಕು ತಪ್ಪಿಸುವ ಕೆಲಸ ಮಾಡುತ್ತಿದ್ದಿರಾ? ಇಂತಹ ಸುಳ್ಳು ಮಾಹಿತಿಯನ್ನು ಹಂಚಿಕೊಳ್ಳಲು ವಿಧಾನಸಭೆಯಲ್ಲಿ ಸ್ಪೀಕರ್ ಅನುಮತಿ ನೀಡಬಾರದು ಎಂದು ಆಕ್ರೋಶ ವ್ಯಕ್ತಪಡಿಸಿದರು.

ವಿಧಾನಸಭಾ ಸ್ಪೀಕರ್ ಇವರು ನೀಡಿರುವ ಸುಳ್ಳು ಮಾಹಿತಿಯನ್ನು ಕಡತದಿಂದ ತೆಗಿಸಬೇಕು. ಆದಷ್ಟು ಬೇಗ ರೈತರೊಟ್ಟಿಗೆ ಮಾತನಾಡಿ ಅಭಿವೃದ್ಧಿ ಕಾರ್ಯ ಆರಂಭಿಸಬೇಕು ಎಂದು ಒತ್ತಾಯಿಸಿದರು. ಸುದ್ದಿಗೋಷ್ಠಿಯಲ್ಲಿ ಎಸ್.ಎಸ್.ಮಂಜುನಾಥ್, ಮಹೇಶ್, ಕರುಣಕರ್, ನಾಗೇಂದ್ರ ಉಪಸ್ಥಿತರಿದ್ದರು.

ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಗುದ್ದಲಿಪೂಜೆ ...



ಮೈಸೂರಿನ ಕೆ.ಆರ್.ಕ್ಷೇತ್ರದ ವಾರ್ಡ್ ನಂ.62ರ ದೇವರಾಜ ಅರಸು ಕಾಲೋನಿಯಲ್ಲಿ 180 ಲಕ್ಷ ರೂ. ವೆಚ್ಚದಲ್ಲಿ ಇಂಟರ್ ಲಾಕ್, ಚರಂಡಿ ಹಾಗೂ ಸಿಸಿ ರಸ್ತೆ ಕಾಮಗಾರಿಗಳಿಗೆ ಶಾಸಕ ಟಿ.ಎಸ್.ಶ್ರೀವತ್ಸ ಗುದ್ದಲಿ ಪೂಜೆ ನೆರವೇರಿಸಿದರು. ಈ ಸಂದರ್ಭದಲ್ಲಿ ವಾರ್ಡ್ ಅಧ್ಯಕ್ಷ ರಾಘವೇಂದ್ರ, ನಗರ ಪಾಲಿಕೆ ಮಾಜಿ ಸದಸ್ಯರಾದ ಶಾಂತಮ್ಮ ವಡಿವೆಲು, ಕೆ ಆರ್ ಕ್ಷೇತ್ರದ ಅಧ್ಯಕ್ಷ ಗೋಪಾಲರಾಜೇ ಅರಸ್, ಪ್ರಧಾನ ಕಾರ್ಯದರ್ಶಿ ಜಯರಾಮ್, ಬಿಜೆಪಿ ಮುಖಂಡರಾದ ವಡಿವೆಲು, ಚಂದ್ರಣ್ಣ, ನಾಗೇಂದ್ರ, ದೀಪಕ್‌ಕುಮಾರ್, ಶೋಭಾ ಹಾಗೂ ಬೂತ್ ಅಧ್ಯಕ್ಷ ಮಹದೇವ ಹಾಗೂ ನಿರ್ಮಿತಿ ಕೇಂದ್ರದ ಅಧಿಕಾರಿಗಳಾದ ಮಹೇಶ್‌ಕುಮಾರ್, ರಮೇಶ್, ಮೇಘರಾಜ್ ಶೆಟ್ಟಿ ಇನ್ನಿತರರು ಉಪಸ್ಥಿತರಿದ್ದರು.

ಉಚಿತ ಆಪ್‌ಗಳ ಡೌನ್‌ಲೋಡ್ ಮಾಡಿದರೆ ವೈಯಕ್ತಿಕ ಡಾಟಾ ಕದಿಯುತ್ತಾರೆ ಹುಷಾರ್....

ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷರಾದ ನ್ಯಾಯಮೂರ್ತಿ ವಿ.ರಾಮಸುಬ್ರಹ್ಮಣಿಯನ್ ಎಚ್ಚರಿಕೆ

ಮೈಸೂರು, ಮಾ.14(ಬಿಎಲ್‌ಯು)–ಉಚಿತವಾಗಿರುವ ಆಪ್‌ಗಳನ್ನು ಡೌನ್‌ಲೋಡ್ ಮಾಡುವಾಗ ಎಚ್ಚರಿಕೆ ವಹಿಸಬೇಕು ಎಂದು ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷ ನ್ಯಾಯಮೂರ್ತಿ ವಿ.ರಾಮಸುಬ್ರಹ್ಮಣಿಯನ್ ಇಂದಿಲ್ಲಿ ಸಲಹೆ ನೀಡಿದ್ದಾರೆ.

ಮೈಸೂರಿನ ಕುವೆಂಪುನಗರದ ಜೆಎಸ್‌ಎಸ್ ಕಾನೂನು ಕಾಲೇಜಿನಲ್ಲಿ ಇಂದು ಆಯೋಜಿಸಿದ್ದ 'ಗೌಪ್ಯತೆ, ತಂತ್ರಜ್ಞಾನ ಮತ್ತು ಕಣ್ಗಾವಲು: ಡಿಜಿಟಲ್ ಯುಗದಲ್ಲಿ ಮಾನವ ಹಕ್ಕುಗಳ ಭವಿಷ್ಯ' ಕುರಿತು ಉಪನ್ಯಾಸ ನೀಡಿದ ಅವರು, ಜನರು, ಉಚಿತವಾಗಿರುವ ಆಪ್‌ಗಳನ್ನು ಡೌನ್‌ಲೋಡ್ ಮಾಡಿದರೆ ಹಣ ನೀಡುವ ಪ್ರಮೇಯವಿಲ್ಲ ಎಂಬ ಭ್ರಮೆಯಲ್ಲಿರುತ್ತಾರೆ. ಆದರೆ ಇಂತಹ ಉಚಿತ ಆಪ್‌ಗಳನ್ನು ಡೌನ್‌ಲೋಡ್ ಮಾಡಿದಾಗ ಸೈಬರ್ ಅಪರಾಧಿಗಳು ವೈಯಕ್ತಿಕ ಡಾಟಾ ಕದಿಯುವ ಸಾಧ್ಯತೆ ಇರುತ್ತದೆ ಎಂದು ಎಚ್ಚರಿಸಿದರು.



ಜೆಎಸ್‌ಎಸ್ ಕಾನೂನು ಕಾಲೇಜಿನಲ್ಲಿ ಶನಿವಾರ ನಡೆದ ಗೌಪ್ಯತೆ, ತಂತ್ರಜ್ಞಾನ ಮತ್ತು ಕಣ್ಗಾವಲು: ಡಿಜಿಟಲ್ ಯುಗದಲ್ಲಿ ಮಾನವ ಹಕ್ಕುಗಳ ಭವಿಷ್ಯ' ಕುರಿತು ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷರಾದ ನ್ಯಾಯಮೂರ್ತಿ ವಿ.ರಾಮಸುಬ್ರಹ್ಮಣಿಯನ್ ಉಪನ್ಯಾಸ ನೀಡಿದರು.

ನಾವೇ ಮನೆ ಬಾಗಿಲನ್ನು ತೆರೆದಿಟ್ಟು ಕಳ್ಳತನ ಮಾಡಲು ಅವಕಾಶ ನೀಡಿದಂತಾಗುತ್ತದೆ. ಎಚ್ಚರಿಕೆ ವಹಿಸದೆ ಬಹಳಷ್ಟು ಜನರು ಮೋಸ ಹೋಗುತ್ತಾರೆ. ತರುವಾಯ ನಮ್ಮ ರಕ್ಷಣೆಗೆ ಸೂಕ್ತ ಕಾನೂನು ಇಲ್ಲ, ಸರ್ಕಾರ ನಮ್ಮ ನೆರವಿಗೆ ಬರುತ್ತಿಲ್ಲ ಎಂದು ಟೀಕಿಸುತ್ತಾರೆ ಎಂದು ನ್ಯಾಯಮೂರ್ತಿ ರಾಮಸುಬ್ರಹ್ಮಣಿಯನ್ ಹೇಳಿದರು.

ಇಂಟರ್‌ನೆಟ್ ಹಾಗೂ ಸೋಷಿಯಲ್ ಮೀಡಿಯಾದಿಂದ ಬಹಳಷ್ಟು ಉಪಯೋಗವಿದೆ. ಆದರೆ ನಾವು ಎಚ್ಚರಿಕೆ ತಪ್ಪಿದರೆ ಅದರಿಂದ ಹಲವು ತೊಂದರೆ ಎದುರಿಸಬೇಕಾಗುತ್ತದೆ ಎಂದು ಎಚ್ಚರಿಸಿದರು.

1680ರಲ್ಲಿ ಅಮೇರಿಕಾದಲ್ಲಿ ಖಾಸಗೀತನದ ಹಕ್ಕುಗಳ ರಕ್ಷಣೆಯ ಕಾನೂನಾತ್ಮಕ ಪ್ರಕ್ರಿಯೆ ಆರಂಭವಾಯಿತು. ದೂರವಾಣಿ ಕದ್ದಾಲಿಕೆ ಪ್ರಕರಣದ ನಂತರ ಖಾಸಗೀತನದ ಹಕ್ಕುಗಳ ರಕ್ಷಣೆಗೆ ಮತ್ತಷ್ಟು ಗಟ್ಟಿತನ ಬಂದಿತು ಎಂದು ರಾಮಸುಬ್ರಹ್ಮಣಿಯನ್ ತಿಳಿಸಿದರು.

ಗೌಪ್ಯತೆ, ತಂತ್ರಜ್ಞಾನ ಮತ್ತು ಕಣ್ಗಾವಲಿನಲ್ಲಿ ಆಗುತ್ತಿರುವ ಕ್ರಾಂತಿ ಹಾಗೂ ಖಾಸಗೀತನದ ಹಕ್ಕುಗಳು ಕಾನೂನಿನಲ್ಲಿ ಯಾವ ರೀತಿ ಅಡಕವಾಯಿತು ಎಂಬ ಬಗ್ಗೆ ರಾಮಸುಬ್ರಹ್ಮಣಿಯನ್ ವಿದ್ಯಾರ್ಥಿಗಳಿಗೆ ಹಲವು ಮಾಹಿತಿ ನೀಡಿದರು.

ಕಾಲೇಜಿನ ಪ್ರಿನ್ಸಿಪಾಲ್ ಡಾ.ಎನ್. ವಾಣಿಶ್ರೀ, ಪರೀಕ್ಷಾಂಗ ವಿಭಾಗದ ಅಧಿಕಾರಿ ಶಿವಾನಂದ ಭಾರತಿ, ಐಕ್ಯೂಎಸಿ ಸಂಚಾಲಕ ಡಾ.ಎ.ಟಿ.ಜಗದೀಶ್ ಅವರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಶಾಸಕ ಟಿ.ಎಸ್.ಶ್ರೀವತ್ಸರಿಗೆ ಅಭಿನಂದನೆ....



ಮೈಸೂರಿನ ಕೆ.ಸಿ.ಬಡಾವಣೆ ವ್ಯಾಪ್ತಿಯಲ್ಲಿ 3 ಎಕರೆ ಕೆರೆ ಜಾಗ ಒತ್ತುವರಿಯಾಗಿದ್ದ ಜಾಗವನ್ನು ರಕ್ಷಿಸಿ, ಕುರುಬಾರಹಳ್ಳಿ ಸರ್ವೆ ನಂ.4ರ ವ್ಯಾಪ್ತಿಯ 24.10 ಎಕರೆ ಭೂ ಹಗರಣದ ಅಕ್ರಮವನ್ನು ಬಯಲು ಮಾಡಿ 24 ಗಂಟೆ ಒಳಗೆ ಸೇಲ್ ಅಗ್ರಿಮೆಂಟ್ ರದ್ದು ಮಾಡಿಸಿ, ಬರೋಬ್ಬರಿ 900 ಕೋಟಿ ರೂ. ಆಸ್ತಿಯನ್ನು ಸರಕಾರಕ್ಕೆ ಉಳಿಸಿಕೊಟ್ಟ ಕೃಷ್ಣರಾಜ ಕ್ಷೇತ್ರದ ಶಾಸಕ ಟಿ.ಎಸ್.ಶ್ರೀವತ್ಸ ಅವರನ್ನು ಮಾಜಿ ಸಂಸದ ಪ್ರತಾಪ್ ಸಿಂಹ ನೇತೃತ್ವದಲ್ಲಿ ಅಭಿನಂದಿಸಲಾಯಿತು. ಈ ವೇಳೆ ಚಾಮರಾಜ ಕ್ಷೇತ್ರದ ಅಧ್ಯಕ್ಷ ದಿನೇಶ್‌ಗೌಡ, ಕೆ.ಆರ್.ಕ್ಷೇತ್ರದ ಅಧ್ಯಕ್ಷ ಗೋಪಾಲ್ ರಾಜೇಅರಸ್, ಪ್ರಧಾನ ಕಾರ್ಯದರ್ಶಿಗಳಾದ ಜಯರಾಮ್, ಜೈ ಶಂಕರ್, ಪಾಲಿಕೆ ಮಾಜಿ ಸದಸ್ಯರಾದ ಜಗದೀಶ್, ಸುಬ್ಬಯ್ಯ, ಕೋ-ಆಪರೇಟಿವ್ ಬ್ಯಾಂಕ್ ನಿರ್ದೇಶಕರಾದ ವಸಂತ ಮನೀಶ್, ಟೆನಿಸ್ ಗೋಪಿ, ಮನೋಜ್, ಜಗದೀಶ್, ರವಿ, ನಾಣಿಗೌಡ, ಮಲ್ಲಿಕಾರ್ಜುನ್, ಮಹೇಶ್, ಸುರೇಶ್, ಪ್ರಕಾಶ್, ಕಾರ್ತಿಕ್, ಕಿಶೋರ್, ಲಕ್ಷ್ಮೀಶ, ಅಭಿಲಾಶ್ ಮುಂತಾದವರು ಉಪಸ್ಥಿತರಿದ್ದರು.

ಮಹಿಳಾ ದಿನಾಚರಣೆ: ಉಚಿತ ಆರೋಗ್ಯ ತಪಾಸಣಾ ಶಿಬಿರ

ಮೈಸೂರು, ಮಾ. 14–ಮೈಸೂರಿನ ಸರಸ್ವತಿಪುರಂನಲ್ಲಿರುವ ಸಿಗ್ಮಾ ಆಸ್ಪತ್ರೆಯಲ್ಲಿ ಮಹಿಳಾ ದಿನಾಚರಣೆ ಪ್ರಯುಕ್ತ ಮಹಿಳೆಯರಿಗೆ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ನಾಳೆ (ಮಾ. 15) ಬೆಳಿಗ್ಗೆ 10ರಿಂದ ಮಧ್ಯಾಹ್ನ 2 ರವರೆಗೆ ಹಮ್ಮಿಕೊಳ್ಳಲಾಗಿದೆ. ಶಿಬಿರದಲ್ಲಿ ಬಿಪಿ, ಶುಗರ್ (ಆರ್‌ಬಿಎಸ್), ಬಿಎಂಐ, ಹೆಚ್‌ಬಿ (ಹಿಮೋಗ್ಲೋಬಿನ್) ಹಾಗೂ ವೈದ್ಯರ ಸಲಹೆ ಮೇರೆಗೆ ಅಲ್ಟ್ರಾಸೌಂಡ್ ಸ್ಕ್ಯಾನಿಂಗ್ ಉಚಿತವಾಗಿ ಮಾಡುತ್ತಿದ್ದು,



ಗರ್ಭಿಣಿಯ ತಪಾಸಣೆ, ಮೂತ್ರದ ತೊಂದರೆ, ಗರ್ಭಕೋಶದಲ್ಲಿ ಗೆಡ್ಡೆಗಳು, ಅಂಡಾಶಯದಲ್ಲಿ ಸಮಸ್ಯೆಗಳು, ಗರ್ಭಕಂಠದ ಕ್ಯಾನ್ಸರ್ ತಪಾಸಣೆ, ಬಂಜೆತನ ತಪಾಸಣೆ, ಆಹಾರ ತಜ್ಞರ ಸಲಹೆ ಹಾಗೂ ಮಹಿಳೆಯರ ಇನ್ನಿತರ ಸಮಸ್ಯೆಗಳಿಗೆ ಪರೀಕ್ಷಿಸಿಕೊಳ್ಳಬಹುದು. ಶಿಬಿರದಲ್ಲಿ ಹಿರಿಯ ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞರಾದ ಡಾ. ಲೀಲಾವತಿ ಮತ್ತು ಡಾ. ತೇಜಸ್ವಿನಿ ಉಚಿತ ಸಮಾಲೋಚನೆಗೆ ಲಭ್ಯವಿರುತ್ತಾರೆ. ಹೆಚ್ಚಿನ ಮಾಹಿತಿಗಾಗಿ 9108028661, 0821-4266661, 7204318707 ಸಂಪರ್ಕಿಸಬಹುದು.

ಮಾ.18, ರಾಗ ಆರೋಗ್ಯ 5ನೇ ಸೀಸನ್ ವಿನೂತನ ಶೈಲಿಯ ಸಂಗೀತ ಕಾರ್ಯಕ್ರಮ

ಮೈಸೂರು, ಮಾ.14(ಜಿಎ)–ಮೈಸೂರಿನ ಉನ್ನತಿ ಸಂಸ್ಥೆ ವತಿಯಿಂದ ರಾಗ ಆರೋಗ್ಯ ಎಂಬ ವಿನೂತನ ಶೈಲಿಯ ಕಾರ್ಯಕ್ರಮಗಳ 5ನೇ ಸೀಸನ್ ಸಂಗೀತ ಕಾರ್ಯಕ್ರಮವನ್ನು ಏ.18ರಂದು ಸಂಜೆ 5 ಗಂಟೆಗೆ, ನಗರದ ಜೆ.ಕೆ.ಮೈದಾನದಲ್ಲಿರುವ ಪ್ಲಾಟಿನಮ್ ಜ್ಯೂಬಿಲಿ ಸಭಾಂಗಣದಲ್ಲಿ ಆಯೋಜಿಸಲಾಗಿದೆ ಎಂದು ನಿರೂಪಕಿ ರೂಪಶ್ರೀ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಇಂತಹ ಕಾರ್ಯಕ್ರಮಗಳ ಮೂಲಕ ಸಂಸ್ಥೆಯು ಸಮಾಜಕ್ಕೆ ಸಂಗೀತದಲ್ಲಿನ ವಿಶಿಷ್ಟ ರಾಗಗಳು ಹಲವಾರು ರೋಗಗಳಲ್ಲಿನ ಒತ್ತಡಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸಲು ಸಹಾಯವಾಗಬಹುದೆಂಬ ಬಗೆಗೆ ಅರಿವನ್ನು ಮೂಡಿಸುವ ಸಾಮಾಜಿಕ ಕಾರ್ಯದಲ್ಲಿ ತೊಡಗಿಕೊಂಡಿದೆ ಎಂದರು.

ಈ ಕಾರ್ಯಕ್ರಮದಲ್ಲಿ ಸರಿಗಮಪ ಖ್ಯಾತಿಯ ಹಿನ್ನೆಲೆ ಗಾಯಕ ಎಂ.ಆರ್. ಶ್ರೀಹರ್ಷ ಅವರು ಹಲವಾರು ರಾಗಗಳಲ್ಲಿ ಒಳಗೊಂಡಿರುವ ಕೆಲವು ಕೃತಿಗಳು, ಕೀರ್ತನೆಗಳು, ದಾಸರಪದಗಳು, ಭಾವಗೀತೆಗಳು, ಜಾನಪದ ಹಾಡುಗಳು, ಆಯ್ದ ರಾಗಾಧಾರಿತ ಚಲನಚಿತ್ರ ಗೀತೆಗಳನ್ನು ವೈಯಕ್ತಿಕ ಆರೋಗ್ಯಕ್ಕೆ ಹೇಗೆ ಅನುಕೂಲವಾಗುವುದೆಂಬ ನಿಟ್ಟಿನಲ್ಲಿ ಆಯಾ ರಾಗದ ವಿಶಿಷ್ಟತೆಯನ್ನು ಪ್ರಸ್ತುತಪಡಿಸಲಿದ್ದಾರೆ. ಇದು ಸುಮಾರು 6 ಭಾಷೆಯ ರಚನೆಗಳನ್ನು ಒಳಗೊಂಡಿರುತ್ತದೆ ಎಂದರು.

ಈ ಬಾರಿಯ ಕಾರ್ಯಕ್ರಮದಲ್ಲಿ ಖ್ಯಾತ ವಾಗ್ಮಿ ಡಾ.ಗುರುರಾಜ ಕರ್ಜಗಿ ರಾಗದಿಂದ ಆರೋಗ್ಯ ಹೇಗೆ ಎಂಬ ಬಗೆಗೆ ವಿಶಿಷ್ಟವಾದ ವಾಕ್ಚಾತುರ್ಯದಿಂದ ಕೂಡಿದ ತಮ್ಮ ಅಪಾರ ಜ್ಞಾನದ ರಸದೌತಣವನ್ನು ಉಣಬಡಿಸಲಿದ್ದಾರೆ. ಈ ಸಹಾಯಾರ್ಥ ಪ್ರದರ್ಶನಕ್ಕೆ 499/– ಮತ್ತು 999/– ರ ಪ್ರತ್ಯೇಕ ದರಗಳನ್ನು ನಿಗದಿಪಡಿಸಲಾಗಿದೆ. ಈ ಕಾರ್ಯಕ್ರಮದಿಂದ ಬರುವ ಆದಾಯದ ಒಂದು ಭಾಗವನ್ನು ಯಾವುದೇ ಆದಾಯ/ಆಸರೆ ಇಲ್ಲದ ಒಂಟಿ ಮಹಿಳೆಯರಿಗೆ ಉಚಿತವಾಗಿ ಊಟ-ವಸತಿ ನೀಡುತ್ತಾ ಸಮಾಜ ಸೇವೆಯಲ್ಲಿ ತೊಡಗಿಕೊಂಡಿರುವ ಮೈಸೂರಿನ ಸರ್ಕಾರೇತರ ಸಂಸ್ಥೆಯಾದ 'ಸೇವಂಯಾನ ಟ್ರಸ್ಟ್"ಗೆ ನೀಡಲು ಉದ್ದೇಶಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಮೊ: 9148495258 ಸಂಪರ್ಕಿಸಿ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಗಾಯಕ ಶ್ರೀಹರ್ಷ, ಪ್ರಭಾಮಣಿ, ಆಶಾ ಮತ್ತಿತರರು ಉಪಸ್ಥಿತರಿದ್ದರು.

ಕಾವಾ ಸಮಗ್ರ ಅಭಿವೃದ್ಧಿಗೆ ನೆರವಾಗುವಂತೆ ಕನ್ನಡ-ಸಂಸ್ಕೃತಿ ಸಚಿವರಿಗೆ ಎಂಎಲ್ಸಿ ವಿವೇಕಾನಂದ ಮನವಿ



ಚಾಮರಾಜೇಂದ್ರ ದೃಶ್ಯಕಲಾ ಕಾಲೇಜು



ಕೆ.ವಿವೇಕಾನಂದ

ಮೈಸೂರು, ಮಾ.14– ತಮ್ಮ ಮನವಿಗೆ ಸ್ಪಂದಿಸಿ, ಮೈಸೂರಿನ ಚಾಮರಾಜೇಂದ್ರ ದೃಶ್ಯಕಲಾ ಸರ್ಕಾರಿ ಕಾಲೇಜು(ಕಾವಾ) ಮೂಲಸೌಕರ್ಯ ಅಭಿವೃದ್ಧಿಗೆ ಬಜೆಟ್‌ನಲ್ಲಿ 2 ಕೋಟಿ ರೂ. ಅನುದಾನ ಕಲ್ಪಿಸಿದ್ದು, ಹಾಗೆಯೇ ಸಂಸ್ಥೆಯ ಸಮಗ್ರ ಅಭಿವೃದ್ಧಿಗೆ ಸರ್ಕಾರ ಮುಂದಾಗಬೇಕು ಎಂದು ದಕ್ಷಿಣ ಶಿಕ್ಷಕರ ಕ್ಷೇತ್ರದ ವಿಧಾನಪರಿಷತ್ ಸದಸ್ಯ ಕೆ.ವಿವೇಕಾನಂದ ಆಗ್ರಹಿಸಿದ್ದಾರೆ.

ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಮೈಸೂರಿನ ಕಲೆ ಮತ್ತು ಸಂಸ್ಕೃತಿಯ ಶ್ರೀಮಂತಿಕೆಯನ್ನು ಜಗತ್ತಿಗೆ ಸಾರುವ ಉದ್ದೇಶದಿಂದ 1906ರಲ್ಲಿ ಆರಂಭಿಸಿದ ಚಾಮರಾಜೇಂದ್ರ ತಾಂತ್ರಿಕ ಸಂಸ್ಥೆ, ನಂತರದಲ್ಲಿ ಚಾಮರಾಜೇಂದ್ರ ದೃಶ್ಯಕಲಾ ಸರ್ಕಾರಿ ಕಾಲೇಜು ಎಂದಾಗಿದೆ. ಈ ಸಂಸ್ಥೆಯಲ್ಲಿ ಸಾಕಷ್ಟು ಸಮಸ್ಯೆಗಳಿದ್ದು, ಕಾಯಕಲ್ಪಕ್ಕೆ ಸೂಕ್ತ ಕ್ರಮ ವಹಿಸಬೇಕು ಎಂದು ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ್ ಎಸ್.ತಂಗಡಗಿ ಅವರಿಗೆ ಕಳೆದ ಆಗಸ್ಟ್‌ನಲ್ಲಿ ಮನವಿ ಸಲ್ಲಿಸಲಾಗಿತ್ತು.

ರಾಜ್ಯದಲ್ಲಿ ಕಲಾ ಶಿಕ್ಷಣ ನೀಡುವ ಏಕೈಕ ಸರ್ಕಾರಿ ಶಿಕ್ಷಣ ಸಂಸ್ಥೆಯಾಗಿರುವ ಕಾವಾದಲ್ಲಿ ಕಲಿತವರು ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಮಟ್ಟದ ಕಲಾವಿದರಾಗಿ ರೂಪುಗೊಂಡಿದ್ದಾರೆ. ಆದರೀಗ ವಿವಿಧ ವಿಷಯಗಳ ಬೋಧಕರ ಹುದ್ದೆಗಳು ಖಾಲಿ ಇದ್ದು, ಅತಿಥಿ ಉಪನ್ಯಾಸಕರ ಮೂಲಕವೇ ಕಾರ್ಯ ನಿರ್ವಹಿಸಲಾಗುತ್ತಿದೆ. ಅತ್ಯಗತ್ಯವಾದ ವ್ಯವಸ್ಥಿತ ಆರ್ಟ್ ಗ್ಯಾಲರಿಯೂ ಇಲ್ಲವಾಗಿದೆ. ಇಲಾಖೆಯ ಯಾವುದಾದರೂ ಅನುದಾನದಲ್ಲಿ ಕಾವಾ ಸಂಸ್ಥೆಯ ಕಾಯಕಲ್ಪ ಕೈಗೆತ್ತಿಕೊಳ್ಳಬೇಕು ಎಂದು ಒತ್ತಾಯಿಸಲಾಗಿತ್ತು.

ಇದಕ್ಕೆ ಸ್ಪಂದಿಸಿದ ಸಚಿವರು, ತಮ್ಮ ಪತ್ರವನ್ನು ಲಗತ್ತಿಸಿ ಇಲಾಖೆ ಕಾರ್ಯದರ್ಶಿಗೆ ಟಿಪ್ಪಣಿ ಕಳುಹಿಸಿದ್ದರು. ಕಾವಾಗೆ ಭೇಟಿ ನೀಡಿ ಈ ಸಂಸ್ಥೆಗೆ ಸಂಬಂಧಿಸಿದಂತೆ ಎಲ್ಲಾ ವಿವರಗಳನ್ನು ಕೂಲಂಕಷವಾಗಿ ಪರಿಶೀಲಿಸಿ, ಸಂಸ್ಥೆಯ ಸಮಸ್ಯೆಗಳನ್ನು ಬಗೆಹರಿಸುವ ನಿಟ್ಟಿನಲ್ಲಿ ಸೂಕ್ತ ಕ್ರಮ ವಹಿಸಲು ಹಾಗೂ ಈ ಸಂಬಂಧ ಕೈಗೊಂಡ ಕ್ರಮದ ಬಗ್ಗೆ ವರದಿ ನೀಡುವಂತೆ ಸೂಚಿಸಿದ್ದರು. ಸದ್ಯ ನನ್ನ ಮನವಿಗೆ ಸ್ಪಂದಿಸಿ ಕಾವಾದ ಮೂಲಭೂತ ಸೌಕರ್ಯ ಅಭಿವೃದ್ಧಿಗೆ ಬಜೆಟ್‌ನಲ್ಲಿ 2 ಕೋಟಿ ಹಂಚಿಕೆ ಮಾಡಲಾಗಿದೆ. ಹೀಗೆಯೇ ಸಂಸ್ಥೆಯ ಸಮಗ್ರ ಅಭಿವೃದ್ಧಿಗೂ ನೆರವು ನೀಡಬೇಕು ಎಂದು ಕೆ.ವಿವೇಕಾನಂದ ಆಗ್ರಹಿಸಿದ್ದಾರೆ.

ಸುಸ್ಥಿರ ಅಭಿವೃದ್ಧಿಗೆ ರಾಸಾಯನ ವಿಜ್ಞಾನದ ಮಹತ್ವ ಅಪಾರ

ಪ್ರೊ.ಕೆ.ಎಸ್.ರಂಗಪ್ಪ ಪ್ರತಿಪಾದನೆ

ಮೈಸೂರು,ಮಾ.14–ವೈಜ್ಞಾನಿಕ ವಿಷಯಗಳ ಮೇಲಿನ ಸಮ್ಮೇಳನಗಳು, ಆವಿಷ್ಕಾರಗಳನ್ನು ಚರ್ಚಿಸಲು ಹಾಗೂ ಹೊಸ ಒಡಂಬಡಿಕೆಗಳಿಗೆ ಪ್ರೇರಣೆ ನೀಡಲು ಮಹತ್ವದ ವೇದಿಕೆ ಒದಗಿಸುತ್ತವೆ. ಇಂತಹ ಅರ್ಥಪೂರ್ಣ ಶೈಕ್ಷಣಿಕ ಕಾರ್ಯಕ್ರಮಗಳನ್ನು ಆಯೋಜಿಸುವಲ್ಲಿ ಜೆಎಸ್‌ಎಸ್ ಸಂಸ್ಥೆಗಳ ಪಾತ್ರ ಶ್ಲಾಘನೀಯ. ರಾಸಾಯನ ವಿಜ್ಞಾನವು ಅಣು ಜೀವಶಾಸ್ತ್ರ, ಪದಾರ್ಥ ವಿಜ್ಞಾನ, ಪರಿಸರ ಅಧ್ಯಯನ, ಔಷಧೀಯ ಆವಿಷ್ಕಾರಗಳು ಹಾಗೂ ಇನ್ನಿತರ ಕ್ಷೇತ್ರಗಳಿಗೆ ಕೇಂದ್ರೀಯ ಸ್ಥಾನ ಮಾನವನ್ನು ಹೊಂದಿದೆ ಎಂದು ಮೈಸೂರು ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ, ಖ್ಯಾತ ವಿಜ್ಞಾನಿ ಪ್ರೊ. ಕೆ.ಎಸ್.ರಂಗಪ್ಪ ಹೇಳಿದರು.



ಮೈಸೂರಿನ ಊಟಿ ರಸ್ತೆಯ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ ಐಕ್ಯೂಎಸಿ ಮತ್ತು ಸ್ನಾತಕೋತ್ತರ ರಸಾಯನಶಾಸ್ತ್ರ ವಿಭಾಗದಿಂದ ಏರ್ಪಡಿಸಿದ್ದ ಎರಡು ದಿನಗಳ ರಾಷ್ಟ್ರೀಯ ಸಮ್ಮೇಳನವನ್ನು ಖ್ಯಾತ ವಿಜ್ಞಾನಿ ಪ್ರೊ. ಕೆ.ಎಸ್.ರಂಗಪ್ಪ ಉದ್ಘಾಟಿಸಿದರು.

ಮೈಸೂರಿನ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ ಐಕ್ಯೂಎಸಿ ಮತ್ತು ಸ್ನಾತಕೋತ್ತರ ರಸಾಯನಶಾಸ್ತ್ರ ವಿಭಾಗದಿಂದ ಕರೆಂಟ್ ಟ್ರೆಂಡ್ಸ್ ಅಂಡ್ ಫ್ಯೂಚರ್ ಅಪರ್ಚುನಿಟೀಸ್ ಇನ್ ಕೆಮಿಕಲ್ ಸೈನ್ಸಸ್ ವಿಷಯದ ಮೇಲೆ ಆಯೋಜಿಸಿದ್ದ ಎರಡು ದಿನಗಳ ರಾಷ್ಟ್ರೀಯ ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡಿದರು.

ಅಣು ಮಟ್ಟದಲ್ಲಿ ರಸಾಯನ ವಿಜ್ಞಾನದ ಜ್ಞಾನ ಬಳಸಿ ನಡೆಸಬಹುದಾದ ಪದಾರ್ಥಗಳ ಅಧ್ಯಯನವು ಔಷಧೀಯ ಆವಿಷ್ಕಾರಗಳು, ವಸ್ತು ವಿಶ್ಲೇಷಣೆ ಹಾಗೂ ವಿವಿಧ ಆಧುನಿಕ ಅನ್ವಯಿಕೆಗಳ ಅಭಿವೃದ್ಧಿಗೆ ಅತ್ಯಂತ ಮೂಲಭೂತವೂ ಹಾಗೂ ಉಪಯುಕ್ತವೂ ಆಗಿದೆ ಎಂದರು. ರಾಸಾಯನಿಕ ವಿಜ್ಞಾನದಲ್ಲಿ ನಡೆಯುತ್ತಿರುವ ಇತ್ತೀಚಿನ ಸಂಶೋಧನೆಗಳು ಶಕ್ತಿ ಸಂಗ್ರಹ ಸಾಧನಗಳು, ಸಂವೇದಕಗಳು (ಸೆನ್ಸರ್‌ಗಳು), ಬಯೋಮಾರ್ಕರ್‌ಗಳು ಹಾಗೂ ಜೈವಿಕ ಅಣುಗಳ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರ ವಹಿಸುತ್ತಿವೆ ಹಾಗೂ ಇವು ವೈಜ್ಞಾನಿಕ ಸಂಶೋಧನೆಗೆ ಉತ್ತಮ ವೇದಿಕೆಗಳನ್ನು ಒದಗಿಸುತ್ತಿವೆ ಎಂದರು.

ವೈಜ್ಞಾನಿಕ ಆವಿಷ್ಕಾರಗಳು ಮತ್ತು ಸುಸ್ಥಿರ ಅಭಿವೃದ್ಧಿಗೆ ರಾಸಾಯನ ವಿಜ್ಞಾನದ ಮಹತ್ವ ಅಪಾರ. ವೈಜ್ಞಾನಿಕ ಕೌತುಕಗಳು ಹಾಗೂ ಕೊಡುಗೆಗಳು ಪ್ರಪಂಚದಲ್ಲಿ ಸುಸ್ಥಿರ ವಾತಾವರಣ ಕಲ್ಪಿಸಲು ಸದಾ ನೇರ ಸಹಕಾರ ನೀಡುತ್ತಿವೆ ಎಂದು ಅವರು ಹಸಿರು ಮತ್ತು ಸ್ಥಿರ ರಸಾಯನಶಾಸ್ತ್ರದ ಮಹತ್ವವನ್ನು ವಿವರಿಸಿದರು.

ಮುಖ್ಯ ಕಾರ್ಯನಿರ್ವಾಹಕ ಪ್ರೊ.ಬಿ.ವಿ.ಸಾಂಬ ಶಿವಯ್ಯ ವಿಶ್ಲೇಷಣಾತ್ಮಕ ಅಭಿವೃದ್ಧಿ, ಔಷಧ ಸಂಶೋಧನೆ ಮತ್ತು ಆವಿಷ್ಕಾರ, ಜೈವಿಕ- ಸಾವಯವ ಮತ್ತು ನಿರವಯವ ರಸಾಯನಶಾಸ್ತ್ರ, ಪಾಲಿಮರ್ ವಿಜ್ಞಾನ ಹಾಗೂ ಪದಾರ್ಥ ವಿಜ್ಞಾನ ಮುಂತಾದ ಅಂತರಶಿಸ್ತೀಯ ಕ್ಷೇತ್ರಗಳಲ್ಲಿ ಲಭ್ಯವಿರುವ ಅವಕಾಶಗಳನ್ನು ಅನುಸರಿಸಿ ಸದುಪಯೋಗಪಡಿಸಿಕೊಂಡರೆ ಉತ್ತಮ ಸಂಶೋಧನಾ ಫಲಿತಾಂಶಗಳನ್ನು ಪಡೆಯಬಹುದು ಎಂದು ಅಭಿಪ್ರಾಯಪಟ್ಟರು.

ಕಾಲೇಜಿನ ಪ್ರಾಂಶುಪಾಲ ಡಾ. ಎಂ ಪ್ರಭು ಸ್ವಾಗತಿಸಿದರು. ವಿದ್ಯಾರ್ಥಿನಿ ಪ್ರೀತಿ ಎಂ. ನಂದೂರು ನಿರೂಪಿಸಿದರು. ಅಂಕಿತಾ ಕುಲಕರ್ಣಿ ವಂದಿಸಿದರು. ಸಂಚಾಲಕ ಡಾ. ಮಲ್ಲೇಶ, ಡಾ ರಾಜೇಂದ್ರಪ್ರಸಾದ್ ಹಾಗೂ ಸಂಘಟನಾ ಕಾರ್ಯದರ್ಶಿಗಳಾದ ಡಾ. ಕಾವ್ಯ ಹಾಗೂ ಡಾ. ಪುಷ್ಪಾಂಜಲಿ ಇನ್ನಿತರರು ಉಪಸ್ಥಿತರಿದ್ದರು.

ದೇಶ - ವಿದೇಶ

ಆಯತೊಲ್ಲಾ ಖಮೇನಿ ಭಾರತವನ್ನು ಪ್ರೀತಿಸುತ್ತಿದ್ದರು

ಇರಾನ್ ಸರ್ವೋಚ್ಚ ನಾಯಕನ ರಾಯಭಾರಿ

ಟೆಹ್ರಾನ್: ಆಯತೊಲ್ಲಾ ಖಮೇನಿ ಭಾರತವನ್ನು ಪ್ರೀತಿಸುತ್ತಿದ್ದರು ಎಂದು ಇರಾನಿನ ಸರ್ವೋಚ್ಚ ನಾಯಕನ ರಾಯಭಾರಿ ಹೇಳಿದ್ದಾರೆ. ಭಾರತ–ಇರಾನ್ ಮಾತುಕತೆಗಳು ವೇಗವನ್ನು ಪಡೆಯುತ್ತಿದ್ದಂತೆ ಈ ಹೇಳಿಕೆ ಬಂದಿದೆ.

ಭಾರತಕ್ಕೆ ಇರಾನ್‌ನ ಸರ್ವೋಚ್ಚ ನಾಯಕನ ಪ್ರತಿನಿಧಿ ಡಾ. ಅಬ್ದುಲ್ ಮಜೀದ್ ಹಕೀಮ್ ಇಲಾಹಿ, ದಿವಂಗತ ಅಯತೊಲ್ಲಾ ಅಲಿ ಖಮೇನಿ ಅವರು ಭಾರತದೊಂದಿಗೆ ಬಲವಾದ ಸಹಕಾರ, ಉತ್ತಮ ಬಾಂಧವ್ಯ ಹೊಂದಿದ್ದರು. ಇತ್ತೀಚಿನ ರಾಜತಾಂತ್ರಿಕ ಸಂಬಂಧವು ವಿಶೇಷವಾಗಿ ಇಂಧನ ಕಾರಿಡಾರ್ ವಿಚಾರದಲ್ಲಿ ಪರಸ್ಪರ ಪ್ರಯೋಜನಕಾರಿಯಾಗಿವೆ ಎಂದರಲ್ಲದೇ, ನಡೆಯುತ್ತಿರುವ ಪ್ರಾದೇಶಿಕ ಸಂಘರ್ಷದಿಂದ ಇರಾನ್ ತನ್ನನ್ನು ತಾನು ರಕ್ಷಿಸಿಕೊಳ್ಳಬೇಕು ಎಂದು ತಿಳಿಸಿದ್ದಾರೆ.

ದಿವಂಗತ ಅಯತೊಲ್ಲಾ ಭಾರತವನ್ನು ಪ್ರೀತಿಸುತ್ತಿದ್ದರು. ಇರಾನ್ ಮತ್ತು ಭಾರತದ ನಡುವೆ ಉತ್ತಮ ಸಹಕಾರಕ್ಕಾಗಿ ಹಲವಾರು ಬಾರಿ ಒತ್ತಾಯಿಸಿದ್ದರು. ಖಮೇನಿಯವರ ಪುತ್ರ ಮೊಜ್ತಾಬಾ ಖಮೇನಿ ಕೂಡ ಭಾರತದೊಂದಿಗೆ ಉತ್ತಮ ಸಹಯೋಗವನ್ನು ಒತ್ತಿ ಹೇಳಿದ್ದಾರೆ. ಭಾರತೀಯ ಜನರನ್ನು ಹೊಗಳುತ್ತಾರೆ ಎಂದು ಹೇಳಿದ್ದಾರೆ.

ಯುದ್ಧದಿಂದ ಪಾಕಿಸ್ತಾನದಲ್ಲಿ ಆರ್ಥಿಕ ಬಿಕ್ಕಟ್ಟು

ಸರ್ಕಾರಿ ನೌಕರರ ಸಂಬಳ ಕಟ್, ಇಂಧನ ಕಟ್...

ಇಸ್ಲಾಮಾಬಾದ್: ಇರಾನ್ ಹಾಗೂ ಇಸ್ರೇಲ್ ಯುದ್ಧದಿಂದ ಹಲವು ದೇಶಗಳು ತತ್ತರಿಸಿದೆ. ಇದಕ್ಕೆ ಪಾಕಿಸ್ತಾನ ಕೂಡ ಹೊರತಾಗಿಲ್ಲ. ಆದರೆ ಪಾಕಿಸ್ತಾನಕ್ಕೆ ಇರಾನ್ ಯುದ್ಧ ಮಾತ್ರವಲ್ಲ, ಪಾಕಿಸ್ತಾನ ತನ್ನ ಪಕ್ಕದ ರಾಷ್ಟ್ರ ಅಫ್ಘಾನಿಸ್ತಾನ ಮೇಲೆ ಯುದ್ಧ ಮಾಡುತ್ತಿದೆ. ತಾಲಿಬಾನ್ ದಾಳಿಗೆ ಪಾಕಿಸ್ತಾನ ತತ್ತರಿಸಿ ಹೋಗಿದೆ.



ಪ್ರಧಾನಿ ಶೆಹಬಾಜ್ ಶರೀಫ್ ಅಧ್ಯಕ್ಷತೆಯಲ್ಲಿ ನಡೆದ ಉನ್ನತ ಮಟ್ಟದ ಸಭೆಯಲ್ಲಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ. ಸರ್ಕಾರಿ ಸ್ವಾಮ್ಯದ ಉದ್ಯಮಗಳು ಮತ್ತು ಸ್ವಾಯತ್ತ ಸಂಸ್ಥೆಗಳಲ್ಲಿ ಕೆಲಸ ಮಾಡುವ ನೌಕರರ ಸಂಬಳದಲ್ಲಿ ಶೇ.5ರಿಂದ 30ರಷ್ಟು ಕಡಿತ ಮಾಡಲು ಸರ್ಕಾರ ಅನುಮೋದನೆ ನೀಡಿದೆ.

ಇದಲ್ಲದೆ, ಸರ್ಕಾರಿ ವಾಹನಗಳಿಗೆ ನೀಡುವ ಇಂಧನ ಕೋಟಾದಲ್ಲಿ ಶೇ.50ರಷ್ಟು ಕಡಿತ ಮಾಡಲಾಗಿದೆ. ಇದನ್ನು ಥರ್ಡ್-ಪಾರ್ಟಿ ಆಡಿಟ್ ಸಂಸ್ಥೆಯೊಂದು ಪರಿಶೀಲಿಸಲಿದೆ. ಮುಂದಿನ ಎರಡು ತಿಂಗಳಲ್ಲಿ ಶೇ.60ರಷ್ಟು ಸರ್ಕಾರಿ ವಾಹನಗಳನ್ನು ರಸ್ತೆಯಿಂದ ಹಿಂಪಡೆಯಲಾಗುವುದು ಎಂದು ಸಭೆಯಲ್ಲಿ ಅಧಿಕಾರಿಗಳಿಗೆ ತಿಳಿಸಲಾಗಿದೆ.

ಪರಿಸರ ಕಾರ್ಯಕರ್ತ ಸೋನಂ ವಾಂಗ್ಚುಕ್ ಬಂಧನಮುಕ್ತ



ನವದೆಹಲಿ: ಲಡಾಖ್‌ನ ಹೆಸರಾಂತ ಪರಿಸರ ಕಾರ್ಯಕರ್ತ ಸೋನಂ ವಾಂಗ್ಚುಕ್ ಅವರ ಮೇಲಿದ್ದ ರಾಷ್ಟ್ರೀಯ ಭದ್ರತಾ ಕಾಯ್ದೆಯಡಿ ಬಂಧನವನ್ನು ಹಿಂತೆಗೆದುಕೊಳ್ಳಲು ಕೇಂದ್ರ ಸರ್ಕಾರ ನಿರ್ಧರಿಸಿದೆ. ಕೇಂದ್ರ ಗೃಹ ಸಚಿವಾಲಯವು ಅಧಿಕೃತ ಪ್ರಕಟಣೆಯಲ್ಲಿ ಈ ಮಾಹಿತಿ ನೀಡಿದೆ. ಲಡಾಖ್‌ನ ಲೇಹ್‌ನಲ್ಲಿ 2025ರ ಸೆಪ್ಟೆಂಬರ್‌ನಲ್ಲಿ ನಡೆದಿದ್ದ ಭೀಕರ ಹಿಂಸಾಚಾರ ಮತ್ತು ಕಾನೂನು ಸುವ್ಯವಸ್ಥೆ ಹದಗೆಟ್ಟಿದ್ದ ಹಿನ್ನೆಲೆಯಲ್ಲಿ ಸಾರ್ವಜನಿಕ ಶಾಂತಿ ಮತ್ತು ಸುವ್ಯವಸ್ಥೆಯನ್ನು ಕಾಪಾಡುವ ದೃಷ್ಟಿಯಿಂದ ಲೇಹ್ ಜಿಲ್ಲಾ ಮ್ಯಾಜಿಸ್ಟ್ರೇಟ್ ಅವರ ಆದೇಶದ ಮೇರೆಗೆ ವಾಂಗ್ಚುಕ್ ಅವರನ್ನು ಬಂಧಿಸಲಾಗಿತ್ತು. ಸರಿಸುಮಾರು 6 ತಿಂಗಳ ಬಂಧನದ ಅವಧಿಯನ್ನು ಪೂರೈಸಿರುವ ಅವರು, ಈಗ ತಕ್ಷಣದಿಂದಲೇ ಬಿಡುಗಡೆಯಾಗಲಿದ್ದಾರೆ.

ಶಾಂತಿಯುತ ನಗರವಾದ ಲೇಹ್‌ನಲ್ಲಿ 2025ರ ಸೆ.24ರಂದು ನಡೆದ ಹಿಂಸಾಚಾರದಲ್ಲಿ ನಾಲ್ವರು ಸಾವನ್ನಪ್ಪಿ, ಹತ್ತಾರು ಜನ ಗಾಯಗೊಂಡಿದ್ದರು. ಈ ಹಿಂಸಾಚಾರದ ಹಿಂದೆ ವಾಂಗ್ಚುಕ್ ಅವರೇ ಮುಖ್ಯ ಪ್ರಚೋದಕ ಎಂದು ಕೇಂದ್ರ ಸರ್ಕಾರ ಈ ಹಿಂದೆ ಸುಪ್ರೀಂ ಕೋರ್ಟ್‌ನಲ್ಲಿ ವಾದಿಸಿತ್ತು. ವಾಂಗ್ಚುಕ್‌ರನ್ನು ಬಂಧಿಸಿದ ನಂತರವಷ್ಟೇ ಲಡಾಖ್‌ನಲ್ಲಿ ಪರಿಸ್ಥಿತಿ ಶಾಂತವಾಗಿದೆ ಎಂದು ಸರ್ಕಾರ ಸಮರ್ಥಿಸಿಕೊಂಡಿತ್ತು. ಲಡಾಖ್‌ನಲ್ಲಿ ಶಾಂತಿ, ಸ್ಥಿರತೆ, ಪರಸ್ಪರ ವಿಶ್ವಾಸದ ವಾತಾವರಣ ಮರಳಿ ತರುವ ನಿಟ್ಟಿನಲ್ಲಿ ವಾಂಗ್ಚುಕ್ ಮೇಲಿನ ಬಂಧನ ರದ್ದುಗೊಳಿಸಿದೆ.

ಉತ್ತರ ಕೊರಿಯಾ ಮಿಲಿಟರಿ ಶಕ್ತಿ ಪ್ರದರ್ಶನ

ಟೋಕಿಯೋ: ಮಧ್ಯಪ್ರಾಚ್ಯ ಸಂಘರ್ಷದ ನಡುವೆ ಪೂರ್ವ ಏಷ್ಯಾದಲ್ಲಿ ಉತ್ತರ ಕೊರಿಯಾ ತನ್ನ ಮಿಲಿಟರಿ ಶಕ್ತಿಯ ಪ್ರದರ್ಶನ ಮಾಡುವ ಮೂಲಕ ವಿಶ್ವದ ಆತಂಕವನ್ನು ಹೆಚ್ಚಿಸಿದೆ.



ಶನಿವಾರ ಬೆಳಿಗ್ಗೆ ಉತ್ತರ ಕೊರಿಯಾವು ಜಪಾನ್ ಸಮುದ್ರದ ದಿಕ್ಕಿನಲ್ಲಿ ಶಂಕಿತ ಬ್ಯಾಲಿಸ್ಟಿಕ್ ಕ್ಷಿಪಣಿಯೊಂದನ್ನು ಉಡಾವಣೆ ಮಾಡಿದ್ದು, ಈ ಪ್ರದೇಶದಲ್ಲಿ ತೀವ್ರ ಉದ್ವಿಗ್ನತೆ ಸೃಷ್ಟಿಯಾಗಿದೆ. ಉತ್ತರ ಕೊರಿಯಾದ ಭೂಭಾಗದಿಂದ ಹಾರಿದ ಈ ಕ್ಷಿಪಣಿಯು ಪೂರ್ವ ಸಮುದ್ರದತ್ತ ಧಾವಿಸಿದೆ. ಆರಂಭದಲ್ಲಿ ಇದನ್ನು ಅಪರಿಚಿತ ಪ್ರಕ್ಷೇಪಕ ಎಂದು ಗುರುತಿಸಲಾಗಿದ್ದರೂ, ಅದರ ವೇಗ ಮತ್ತು ಪಥವನ್ನು ಗಮನಿಸಿದಾಗ ಅದು ಬ್ಯಾಲಿಸ್ಟಿಕ್ ಕ್ಷಿಪಣಿಯೇ ಎಂಬುದು ದೃಢಪಟ್ಟಿದೆ. ಜಪಾನ್ ಮತ್ತು ದಕ್ಷಿಣ ಕೊರಿಯಾದ ರಕ್ಷಣಾ ಪಡೆಗಳು ಈಗ ಈ ಕ್ಷಿಪಣಿಯ ವ್ಯಾಪ್ತಿ ಮತ್ತು ಸಾಮರ್ಥ್ಯದ ಬಗ್ಗೆ ಹೆಚ್ಚಿನ ದತ್ತಾಂಶಗಳನ್ನು ವಿಶ್ಲೇಷಿಸುತ್ತಿವೆ ಎಂದು ದಕ್ಷಿಣ ಕೊರಿಯಾದ ಜಂಟಿ ಮುಖ್ಯಸ್ಥರು ಹೇಳಿದ್ದಾರೆ. ಅಮೆರಿಕಾದಲ್ಲಿ ಡೊನಾಲ್ಡ್ ಟ್ರಂಪ್ ನೇತೃತ್ವದ ಆಡಳಿತವು ಇರಾನ್ ವಿರುದ್ಧ ತೀವ್ರ ಸಂಘರ್ಷದಲ್ಲಿ ತೊಡಗಿರುವಾಗಲೇ ಕಿಮ್ ಜಾಂಗ್ ಉನ್ ಈ ಸಾಹಸಕ್ಕೆ ಕೈಹಾಕಿದ್ದಾರೆ. ಏಷ್ಯಾ ಪೆಸಿಫಿಕ್ ವಲಯದಲ್ಲಿ ತನ್ನ ಅಸ್ತಿತ್ವವನ್ನು ಸಾಬೀತುಪಡಿಸಲು ಉತ್ತರ ಕೊರಿಯಾ ಈ ಮಾರ್ಗವನ್ನು ಆರಿಸಿಕೊಂಡಿದೆ ಎಂದು ರಾಜತಾಂತ್ರಿಕ ತಜ್ಞರು ವಿಶ್ಲೇಷಿಸುತ್ತಿದ್ದಾರೆ.

ಸಿಲಿಂಡರ್‌ಗಾಗಿ ಸರತಿಯಲ್ಲಿ ನಿಂತಿದ್ದ ಇಬ್ಬರು ಸಾವು

ಫರೂಕಾಬಾದ್: ಅಡುಗೆ ಅನಿಲ ಸಿಲಿಂಡರ್ ಪೂರೈಕೆಯಲ್ಲಿ ವ್ಯತ್ಯಯವಾಗಿರುವ ಹಿನ್ನೆಲೆಯಲ್ಲಿ ಸಿಲಿಂಡರ್ ಪಡೆಯಲು ಸರತಿ ಸಾಲಿನಲ್ಲಿ ನಿಂತಿದ್ದ ವೃದ್ಧರಿಬ್ಬರು ಮೃತಪಟ್ಟಿರುವ ಪ್ರತ್ಯೇಕ ಘಟನೆ ವರದಿಯಾಗಿದೆ.



ಗ್ಯಾಸ್ ಸಿಲಿಂಡರ್ ಪಡೆಯಲು ಸರತಿ ಸಾಲಿನಲ್ಲಿ ನಿಂತಿದ್ದ ಉತ್ತರ ಪ್ರದೇಶದ ಫರೂಕಾಬಾದ್‌ನ ಮುಕ್ತಾರ್ ಅನ್ಸಾರಿ(75) ಹಾಗೂ ಪಂಜಾಬ್‌ನ ಭೂಷಣ್‌ಕುಮಾರ್ ಮಿತ್ತಲ್(66) ಸಾವನ್ನಪ್ಪಿದ್ದಾರೆ. ಮುಕ್ತಾರ್ ಅನ್ಸಾರಿ, ಇವರು ಅನಾರೋಗ್ಯದಿಂದ ಬಳಲುತ್ತಿದ್ದರಾದರೂ ಸಿಲಿಂಡರ್‌ಗೆ ಸಮಸ್ಯೆಯಾಗುತ್ತದೆ ಎಂಬ ವದಂತಿಯಿಂದ ಆತಂಕಗೊಂಡಿದ್ದರು. ಪಕ್ಕದ ಮನೆಯವರು ಪದೇ ಪದೆ ಗ್ಯಾಸ್ ಏಜನ್ಸಿಗೆ ಭೇಟಿ ನೀಡುತ್ತಿದ್ದ ಹಿನ್ನಲೆಯಲ್ಲಿ ಇವರು ಸಹ ನಮ್ಮ ಮನೆಗೂ ಸಿಲಿಂಡರ್‌ನ ಅವಶ್ಯಕತೆಯಿದೆ ಎಂದು ಹೇಳಿ ಇಂದು(ಮಾ.14) ಬೆಳಗ್ಗೆ 6 ಗಂಟೆಗೆ ಏಜನ್ಸಿ ಬಳಿ ಹೋಗಿದ್ದರು. ಅಲ್ಲಿ ಗ್ಯಾಸ್ ಸಿಲಿಂಡರ್ ಪಡೆಯಲು ಜನ ಸಾಲುಗಟ್ಟಿ ನಿಂತಿದ್ದರು. ಉದ್ದದ ಸರತಿ ಸಾಲಿನಲ್ಲಿ ನಿಂತಿದ್ದ ಮುಕ್ತಾರ್ ಅನ್ಸಾರಿಯವರು ಇದ್ದಕ್ಕಿದ್ದಂತೆ ಕುಸಿದು ಬಿದ್ದಿದ್ದಾರೆ. ತಕ್ಷಣವೇ ಅವರನ್ನು ಸ್ಥಳೀಯ ಆಸ್ಪತ್ರೆಗೆ ಕರೆದೊಯ್ಯಲಾಯಿತಾದರೂ ಮಾರ್ಗಮಧ್ಯೆ ಅವರು ಮೃತಪಟ್ಟಿದ್ದಾರೆ. ಪಂಜಾಬ್‌ನ ಬರ್ನಾಲಾದಲ್ಲಿ ಗ್ಯಾಸ್ ಸಿಲಿಂಡರ್ ತರಲು ಹೋಗಿದ್ದ ಭೂಷಣ್ ಕುಮಾರ್ ಮಿತ್ತಲ್(66), ಸರತಿ ಸಾಲಿನಲ್ಲಿದ್ದಾಗ ಹೃದಯಾಘಾತದಿಂದ ಸಾವನ್ನಪ್ಪಿದ್ದಾರೆ.

ಪ್ರವಾಸಕ್ಕೆ ಬಂದಿದ್ದ ವಿದ್ಯಾರ್ಥಿ ನೀರಿನಲ್ಲಿ ಮುಳುಗಿ ಸಾವು

ಸುಂಟಿಕೊಪ್ಪ, ಮಾ.14–ಪ್ರವಾಸಾರ್ಥವಾಗಿ ಸ್ನೇಹಿತರೊಂದಿಗೆ ಬಂದಿದ್ದ ವಿದ್ಯಾರ್ಥಿ ನೀರಿನಲ್ಲಿ ಮುಳುಗಿ ಅಸು ನೀಗಿರುವ ಘಟನೆ ಇಲ್ಲಿಗೆ ಸಮೀಪದ ಹೇರೂರು ಗ್ರಾಮದಲ್ಲಿ ಸಂಭವಿಸಿದೆ.

ಮೂಲತಃ ತಮಿಳುನಾಡು ಮೂಲದವನಾಗಿದ್ದು, ಪ್ರಸ್ತುತ ಬೆಂಗಳೂರು ಕಾಲೇಜೊಂದರಲ್ಲಿ ಸ್ನಾತಕೋತ್ತರ ಪದವಿ ವ್ಯಾಸಂಗ ಮಾಡುತ್ತಿದ್ದ ಸುದರ್ಶನ್ (22) ಎಂಬಾತನೇ ಮೃತಪಟ್ಟ ದುರ್ದೈವಿ.

ಶನಿವಾರ ಬೆಳಿಗ್ಗೆ ಬೆಂಗಳೂರಿನಿಂದ ಕಾಲೇಜಿನ ತಂಡವೊಂದು ಕೊಡಗು ಜಿಲ್ಲೆಗೆ ಪ್ರವಾಸಕ್ಕೆಂದು ಬಂದಿತ್ತು. ಶನಿವಾರ ಬೆಳಗ್ಗೆ ಹೇರೂರಿನಲ್ಲಿರುವ ಹಾರಂಗಿ ಜಲಾಶಯದ ಹಿನ್ನೀರಿನ ವೀಕ್ಷಣೆಗೆ ಈ ತಂಡ ತೆರಳಿತ್ತು. ಈ ಪೈಕಿ ಸುದರ್ಶನ್ ಎಂಬಾತ ನೀರಿಗೆ ಇಳಿದಿದ್ದಾನೆ. ಆಳವಿದ್ದ ಕಡೆ ನೀರಿನಲ್ಲಿ ಇಳಿದಿದ್ದರಿಂದ ಸುಳಿಯಲ್ಲಿ ಸಿಲುಕಿ ಮೇಲಕ್ಕೆ ಬರಲಾಗದೆ ಮುಳುಗಿ ಸಾವಿಗೀಡಾಗಿದ್ದಾನೆ.


ರ್‍ಯಾಫ್ಟಿಂಗ್ ಸಿಬ್ಬಂದಿಗಳು ಶೋಧ ಕಾರ್ಯ ನಡೆಸುತ್ತಿರುವುದು.

ಸ್ಥಳಕ್ಕೆ ಠಾಣಾಧಿಕಾರಿ ಮೋಹನ್ ರಾಜ್ ಮತ್ತು ಸಿಬ್ಬಂದಿಗಳು ತೆರಳಿ ಪ್ರಕರಣ ದಾಖಲಿಸಿಕೊಂಡಿದ್ದು, ಸ್ಥಳೀಯ ಮುಳುಗು ತಜ್ಞರು, ಪೊಲೀಸರು, ದುಬಾರೆ ರ್‍ಯಾಫ್ಟಿಂಗ್ ತಂಡ, ಅಗ್ನಿಶಾಮಕ ದಳದ ಸಿಬ್ಬಂದಿಗಳು ಶೋಧ ಕಾರ್ಯ ನಡೆಸಿ ಮೃತದೇಹವನ್ನು ಹೊರ ತೆಗೆದಿದ್ದಾರೆ. ಮೃತ ದೇಹದ ಮರಣೋತ್ತರ ಪರೀಕ್ಷೆಗಾಗಿ ಕುಶಾಲನಗರ ಸರಕಾರಿ ಆಸ್ಪತ್ರೆಗೆ ಸ್ಥಳಾಂತರಿಸಲಾಗಿದ್ದು ಮುಂದಿನ ಕಾನೂನು ಕ್ರಮ ಜರುಗಿಸಲಾಗುತ್ತದೆ ಎಂದು ತಿಳಿದು ಬಂದಿದೆ. ಈಗಾಗಲೇ ವರದಿಯಾಗಿರುವಂತೆ ಆಗಿಂದಾಗ್ಗೆ ಇಲ್ಲಿ ಪ್ರವಾಸಿಗರು ಬಂದಾಗ ಇಲ್ಲಿನ ಪರಿಸ್ಥಿತಿ ತಿಳಿಯದೆ ನೀರಿಗಿಳಿದು ಪ್ರಾಣಕ್ಕೆ ಸಂಚಕಾರ ತಂದುಕೊಳ್ಳುತ್ತಿದ್ದಾರೆ.

ಸೌಂದರ್ಯದ ಹಿಂದಿದೆ ಅಪಾಯ: ಸುಂಟಿಕೊಪ್ಪ ಹೋಬಳಿಯ ಹಾದ್ರೆ ಮತ್ತು ಹೇರೂರು ಗ್ರಾಮಗಳು ಹಾರಂಗಿ ಜಲಾಶಯದ ಹಿನ್ನೀರಿನಿಂದ ಆವೃತವಾಗಿದ್ದು, ಅದ್ಭುತವಾದ ಸೌಂದರ್ಯದೊಂದಿಗೆ ಪ್ರವಾಸಿ ತಾಣವಾಗಿ ಮಾರ್ಪಟ್ಟಿದೆ. ಆದರೆ ಪ್ರವಾಸೋದ್ಯಮ ಇಲಾಖೆ, ಕಾವೇರಿ ನೀರಾವರಿ ನಿಗಮ, ಅರಣ್ಯ ಇಲಾಖೆ ಸೇರಿದಂತೆ ಜಿಲ್ಲಾಡಳಿತ ಈ ಪ್ರದೇಶವನ್ನು ಸೂಕ್ತ ರೀತಿಯಲ್ಲಿ ಗಮನ ಹರಿಸದೆ ಇರುವುದರಿಂದ ಸಾಕಷ್ಟು ಅನಾಹುತ ಹಾಗೂ ಪ್ರವಾಸಿಗರ ಜೀವಕ್ಕೆ ಮೃತ್ಯುಕೂಪವಾಗುತ್ತಿದೆ. ಪ್ರವಾಸಿಗರು ಈ ಪರಿಸರದ ಅಳದ ಪರಿಜ್ಞಾನವಿಲ್ಲದೆ ನೀರಿನಲ್ಲಿ ಸ್ನಾನ ಮತ್ತು ಈಜಲು ತೆರಳಿ ಸುಳಿ ಹಾಗೂ ಕೆಸರಿನಲ್ಲಿ ಸಿಲುಕಿ ಪ್ರಾಣ ಕಳೆದುಕೊಳ್ಳುತ್ತಿದ್ದಾರೆ. ಇಂತಹ ಕಹಿಘಟನೆಗಳು ಸಂಭವಿಸಿದಾಗ ಯಾವುದೇ ಶಾಶ್ವತ ಪರಿಹಾರಕ್ಕೆ ಮುಂದಾಗುತ್ತಿಲ್ಲ ಎಂದು ಸ್ಥಳೀಯ ಗ್ರಾಮಸ್ಥರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಗ್ಯಾಸ್ ದರ ಏರಿಕೆ ವಿರೋಧಿಸಿ ಸಿಪಿಐ(ಎಂ) ಪ್ರತಿಭಟನೆ

ವಿರಾಜಪೇಟೆ, ಮಾ.14– ಕೇಂದ್ರ ಸರ್ಕಾರವು ನಿತ್ಯ ಬಳಕೆಯ ಗ್ಯಾಸ್ ದರ ಏರಿಕೆ ಮಾಡಿರುವುದನ್ನು ಖಂಡಿಸಿ ಭಾರತೀಯ ಕಮ್ಯೂನಿಸ್ಟ್ ಪಕ್ಷ(ಮಾರ್ಕ್ಸವಾದಿ) ಪ್ರತಿಭಟನೆ ನಡೆಸಿದರು.

ನಗರದ ಗಡಿಯಾರ ಕಂಬದ ಬಳಿ ಪಕ್ಷದ ಜಿಲ್ಲಾ ಸಮಿತಿಯ ಸದಸ್ಯೆ ಎ.ಸಿ. ಸಾಬು ನೇತೃತ್ವದಲ್ಲಿ ಗ್ಯಾಸ್ ಬೆಲೆ ಏರಿಕೆ ಖಂಡಿಸಿ ಪ್ರತಿಭಟನೆ ನಡೆಸಿದರು. ಪ್ರತಿಭಟನೆಯನ್ನು ಉದ್ದೇಶಿಸಿ ಜಿಲ್ಲಾ ಸಂಘಟನಾ ಕಾರ್ಯದರ್ಶಿ ಹೆಚ್.ಬಿ.ರಮೇಶ್ ಮಾತನಾಡಿ, ಅವರು ಕೇಂದ್ರ ಸರ್ಕಾರ ನಿತ್ಯ ಬಳಕೆಯಾಗುವ ಗ್ಯಾಸ್ ಬೆಲೆ ಏರಿಕೆ ಮಾಡಿರುವುದು ಖಂಡನೀಯ. ಗ್ಯಾಸ್ ನಂಬಿಕೊಂಡು ಜೀವನ ಸಾಗಿಸುವವರು ಇಂದು ಬೀದಿಗೆ ಬಂದಿದ್ದಾರೆ. ಜನತೆಯ ಹಿತ ಕಾಪಾಡಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಮುಂದಾಗ ಬೇಕು ಎಂದು ಹೇಳಿದರು.



ಗ್ಯಾಸ್ ದರ ಏರಿಕೆ ಮಾಡಿರುವುದನ್ನು ಖಂಡಿಸಿ ಭಾರತೀಯ ಕಮ್ಯೂನಿಸ್ಟ್ ಪಕ್ಷ ಶನಿವಾರ ಪ್ರತಿಭಟನೆ ನಡೆಸಿತು.

ಜಿಲ್ಲಾ ಸಮಿತಿ ಸದಸ್ಯ ಎ.ಸಿ. ಸಾಬು ಮಾತನಾಡಿ, ಕಟ್ಟಿಗೆ ಒಲೆ ಬಿಟ್ಟು ಗ್ಯಾಸ್ ಬಳಸಿ ಹೊಗೆ ರಹಿತ ಜೀವನ ನಿಮ್ಮದಾಗಿಸಿ ಎಂದು ಹೇಳಿಕೊಂಡು ಬಂದ ಕೇಂದ್ರ ಸರ್ಕಾರವು ಮತ್ತೊಮ್ಮೆ ಜನತೆಯನ್ನು ಗ್ಯಾಸ್ ಬೆಲೆ ಏರಿಕೆಗೊಳಿಸಿ ಸಂಕಷ್ಟಕ್ಕೆ ತಳ್ಳಿದೆ ಎಂದು ಆರೋಪಿಸಿದರು.

ಸಿ.ಪಿ.ಐ. ಪಕ್ಷದ ಪ್ರಮುಖರಾದ ವಕೀಲ ಕೆ.ವಿ.ಸುನೀಲ್ ಡಾ.ಇ.ಆರ್.ದುರ್ಗಾ ಪ್ರಸಾದ್ ಮಾತನಾಡಿದರು. ಪತ್ರಿಭಟನೆಯಲ್ಲಿ ಸಿ.ಪಿ.ಐ. ಪಕ್ಷದ ಜಿಲ್ಲಾ ಸಮಿತಿ ಸದಸ್ಯರಾದ ಪಿ.ಆರ್.ಭರತ್, ಡಿಎಸ್ಎಸ್ ಸಮಿತಿ ಸದಸ್ಯರಾದ ಸತೀಶ್, ಕಾರ್ಯದರ್ಶಿ ಗಳಾದ ಕೆ.ಕೆ.ಹರಿದಾಸ್, ಪಿ.ಖಾಲಿದ್, ಕೆ. ಖಾಸಿಂ, ಡಿವೈಎಫ್ಐ ಮುಖಂಡರಾದ ಸಾಧಿಕ್ ಮತ್ತು ಮುಖಂಡರು ಹಾಗೂ ಪಕ್ಷದ ಕಾರ್ಯಕರ್ತರು ಪ್ರತಿಭಟನೆಯಲ್ಲಿ ಹಾಜರಿದ್ದರು.

ಮಾ.18 ರಂದು ಉದ್ಘಾಟನೆ

ಮಡಿಕೇರಿ: ಜಿಲ್ಲಾಡಳಿತ, ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ ಮತ್ತು ಜಿಲ್ಲಾ ನ್ಯಾಯವಾದಿಗಳ ಸಂಘ ಇವರುಗಳ ಸಂಯುಕ್ತಾಶ್ರಯದಲ್ಲಿ ಕೊಡಗು ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ನವೀಕರಣ ಕಟ್ಟಡದ ಉದ್ಘಾಟನಾ ಕಾರ್ಯಕ್ರಮವು ಮಾರ್ಚ್, 18 ರಂದು ಬೆಳಗ್ಗೆ 10.30 ಗಂಟೆಗೆ ನಡೆಯಲಿದೆ.

ಕರ್ನಾಟಕ ರಾಜ್ಯ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಅಧ್ಯಕ್ಷರು ನ್ಯಾಯಮೂರ್ತಿ ಟಿ.ಜಿ.ಶಿವಶಂಕರೇಗೌಡ ಅವರು ಉದ್ಘಾಟಿಸಲಿದ್ದಾರೆ. ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಹೊಸಮನಿ ಪುಂಡಲಿಕ, ಜಿಲ್ಲಾಧಿಕಾರಿ ಎಸ್.ಜೆ.ಸೋಮಶೇಖರ್, ರಾಜ್ಯ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ರಿಜಿಸ್ಟ್ರಾರ್ ಮತ್ತು ಆಡಳಿತಾಧಿಕಾರಿ ಮಲ್ಲಿಕಾರ್ಜುನ ಈಶ್ವರಪ್ಪ ಕಮತಗಿ ಪಾಲ್ಗೊಳ್ಳಲಿದ್ದಾರೆ.

ಪತ್ನಿ, ಮಗು ಕಾಣೆ : ದೂರು

ನಾಪೋಕ್ಲು, ಮಾ.14–ನಾಪೋಕ್ಲುವಿಗೆ ಹೋಗಿ ಬರುತ್ತೇವೆ ಎಂದು ಹೇಳಿ ಹೋದ ತಾಯಿ ಮಗು ನಾಪತ್ತೆಯಾಗಿರುವ ಪ್ರಕರಣವೊಂದು ನಡೆದಿದೆ.



ಕೊಳಕೇರಿ ಗ್ರಾಮದ ಕನ್ನಂಬಿರ ಮನುಬಿದ್ದಪ್ಪ ಎಂಬವರ ಲೈನ್ ಮನೆಯಲ್ಲಿ ವಾಸವಾಗಿರುವ ಕೂಲಿ ಕಾರ್ಮಿಕ ಧನು ಮ್ಯಾನ್ ಎಂಬುವರು ಪೊಲೀಸ್ ಠಾಣೆಗೆ ದೂರು ನೀಡಿ ಕಾಣೆಯಾಗಿರುವ ಪತ್ನಿ ಮತ್ತು ಮಗುವನ್ನು ಹುಡುಕಿ ಕೊಡುವಂತೆ ಕೇಳಿಕೊಂಡಿದ್ದಾರೆ.

ಮೂರುವರೆ ವರ್ಷದ ಹಿಂದೆ ಜಯಶ್ರೀ (ದಿವ್ಯ)ಎಂಬಾಕೆಯನ್ನು ತಾನು ಪ್ರೀತಿಸಿ ವಿವಾಹವಾಗಿದ್ದು, ವಿಕ್ರಂ ಎಂಬ ಎರಡೂವರೆ ವರ್ಷದ ಗಂಡು ಮಗುವಿನ ಜೊತೆಯಲ್ಲಿ ವಾಸವಾಗಿದ್ದು, ಮಾ. 12ರಂದು ನಾಪೋಕ್ಲುಗೆ ಹೋಗುತ್ತೇವೆ ಎಂದು ಖಾಸಗಿ ಬಸ್ ಹತ್ತಿ ತೆರಳಿದವರು ಮನೆಗೆ ಹಿಂತಿರುಗಿರುವುದಿಲ್ಲ. ಸುತ್ತಮುತ್ತ, ಹಾಗೂ ಸ್ನೇಹಿತರ, ನೆಂಟರ ಮನೆಯಲ್ಲಿ ಹುಡುಕಿದರೂ ಪತ್ತೆ ಆಗಿರುವುದಿಲ್ಲ ಎಂದು ಅವರು ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ.

ಕುಶಾಲನಗರ : ಸಂಚಾರಿ ಪೊಲೀಸ್ ಠಾಣೆಗೆ ಶಂಕುಸ್ಥಾಪನೆ

ಕುಶಾಲನಗರ, ಮಾ.14 (ಆರ್.ಹೆಚ್)– ತಾಲೂಕು ಕೇಂದ್ರ ಕುಶಾಲನಗರ ಪಟ್ಟಣದ ಹಳೆ ಮಾರುಕಟ್ಟೆ ರಸ್ತೆಯ ಚಿಕ್ಕಣ್ಣ ಬಡಾವಣೆಯಲ್ಲಿ ರೂ.2.04 ಕೋಟಿ ವೆಚ್ಚದಲ್ಲಿ ನಿರ್ಮಿಸಲು ಉದ್ದೇಶಿಸಿರುವ ಸಂಚಾರಿ ಪೊಲೀಸ್ ಠಾಣೆ ನೂತನ ಕಟ್ಟಡ ಕಾಮಗಾರಿಗೆ ಶಾಸಕ ಡಾ.ಮಂತರ್ ಗೌಡ ಶನಿವಾರ ಭೂಮಿಪೂಜೆ ನೆರವೇರಿಸಿದರು.

ಸಂಚಾರಿ ಸುವ್ಯವಸ್ಥೆಯೊಂದಿಗೆ ಸುರಕ್ಷತೆಗೆ ಅಗತ್ಯ ಕ್ರಮ ಕೈಗೊಳ್ಳಬೇಕು ಠಾಣೆಯ ಆವರಣವನ್ನು ಗುಜರಿಯಂತೆ ಮಾಡದೆ, ಸ್ವಚ್ಛವಾಗಿಟ್ಟುಕೊಳ್ಳಬೇಕು ಎಂದರು.

ಕ್ರೀಡಾ ಪ್ರಾಧಿಕಾರದ ಉಪಾಧ್ಯಕ್ಷ ಅರುಣ್ ಮಾಚಯ್ಯ ಮಾತನಾಡಿ, ನೂತನ ಎಸ್ಪಿ ಅಧಿಕಾರ ವಹಿಸಿಕೊಂಡ ಬಳಿಕ ಜಿಲ್ಲೆಯಲ್ಲಿ ವಿವಿಧ ಅಭಿವೃದ್ಧಿ ಯೋಜನೆಗಳನ್ನು ಕಾರ್ಯಗತಗೊಳಿಸುತ್ತಿರುವುದು ಶ್ಲಾಘನೀಯ ವಿಚಾರ ಎಂದರು. ತಾಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ವಿ.ಪಿ.ಶಶಿಧರ್, ಯೋಜನಾ ಪ್ರಾಧಿಕಾರ ಅಧ್ಯಕ್ಷ ಪ್ರಮೋದ್ ಮುತ್ತಪ್ಪ ಮಾತನಾಡಿದರು.



ಎಸ್ಪಿ ಬಿಂದುಮಣಿ ಮಾತನಾಡಿ, 2 ಕೋಟಿ ಅನುದಾನದಲ್ಲಿ ನೂತನ ಸಂಚಾರಿ ಠಾಣೆ ನಿರ್ಮಾಣವಾಗಲಿದ್ದು, ಇದರಿಂದ ಸಂಚಾರಿ ಪೊಲೀಸ್ ಠಾಣೆ ಪ್ರತ್ಯೇಕ ಕಟ್ಟಡದಲ್ಲಿ ಕಾರ್ಯ ನಿರ್ವಹಿಸಲು ಅನುಕೂಲವಾಗಲಿದೆ ಎಂದರು.

ತಾಲೂಕು ವಕೀಲರ ಸಂಘದ ಅಧ್ಯಕ್ಷ ಆರ್.ಕೆ.ನಾಗೇಂದ್ರ ಬಾಬು ಮಾತನಾಡಿದರು.

ಜಿಲ್ಲಾಧಿಕಾರಿ ಸೋಮಶೇಖರ್, ಕೊಡಗು ಜಿಲ್ಲಾ ಉಪ ಅರಣ್ಯ ಸಂರಕ್ಷಣಾಧಿಕಾರಿ ಅಭಿಷೇಕ್, ತಹಸೀಲ್ದಾರ್ ಕಿರಣ್ ಜಿ ಗೌರಯ್ಯ, ಡಿವೈಎಸ್ಪಿ ಚಂದ್ರಶೇಖರ್, ವೃತ್ತ ನಿರೀಕ್ಷಕ ದಿನೇಶ್ ಕುಮಾರ್, ಪ್ರದೀಪ್ ಕುಮಾರ್, ಕೆಪಿಸಿಸಿ ಕಾರ್ಯದರ್ಶಿ ಕೆ.ಪಿ.ಚಂದ್ರಕಲಾ, ಮಂಜುನಾಥ್ ಗುಂಡುರಾವ್, ಜೋಸೆಫ್ ವಿಕ್ಟರ್ ಸೋನ್ಸ್ ಮತ್ತಿತರರು ಪಾಲ್ಗೊಂಡಿದ್ದರು.

ಸ್ವಾಮೀಜಿಗಳನ್ನು ದೂಷಿಸುವ ಮಟ್ಟಕ್ಕೆ ಬೆಳೆದಿಲ್ಲ

ಶಾಸಕ ರಮೇಶ್ ಗೌಡ ಮಾತಿಗೆ ಹೆಚ್‌ಡಿಕೆ ತಿರುಗೇಟು

ಶ್ರೀರಂಗಪಟ್ಟಣ, ಮಾ.14–ಸ್ವಾಮೀಜಿಗಳನ್ನು ಪ್ರಶ್ನಿಸುವ ಇಲ್ಲವೆ ದೂಷಿಸುವ ಮಟ್ಟಕ್ಕೆ ನಾವ್ಯಾರೂ ಬೆಳೆದಿಲ್ಲ ಹಾಗಾಗಿ ಸ್ವಾಮೀಜಿಗಳ ಬಗ್ಗೆ ಲಘುವಾಗಿ ಮಾತನಾಡುವುದು ಸರಿಯಲ್ಲ ಎಂದು ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.


ಗಣಪತಿ ದೇವಾಲಯವನ್ನು ಸ್ವಾಮೀಜಿ ಮತ್ತು ಕೇಂದ್ರ ಸಚಿವರು ಉದ್ಘಾಟಿಸಿದರು.

ಪಟ್ಟಣದ ಬಿಜಿಎಸ್ ಶಾಲಾ ಆವರಣದಲ್ಲಿ ಶ್ರೀ ಆದಿಚುಂಚನಗಿರಿ ಬಾಲಜಗತ್ ಆಂಗ್ಲ ಮಾಧ್ಯಮ ಪ್ರಾಥಮಿಕ ಮತ್ತು ಪ್ರೌಢ ಶಾಲೆ, ಪದವಿಪೂರ್ವ ಕಾಲೇಜು ಹಾಗೂ ಗಣಪತಿ ದೇವಾಲಯದ ಕಟ್ಟಡ ಲೋಕಾರ್ಪಣಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಸೆಸ್ಕಾಂ ಅಧ್ಯಕ್ಷ ರಮೇಶ ಬಂಡಿಸಿದ್ದೇಗೌಡ ವೇದಿಕೆಯಲ್ಲಿ ಸ್ವಾಮೀಜಿ ದಾರಿ ತಪ್ಪುತ್ತಿದ್ದಾರೆ ಹಾದಿ ತಪ್ಪಿ ಹೋಗುತ್ತಿದ್ದಾರೆ ಎಂದು ಹೇಳಿರುವುದರ ಅರ್ಥವೇನು ಎಂದು ಹೆಚ್‌ಡಿಕೆ ಅಸಮಾಧಾನ ಹೊರಹಾಕಿದರು.

ಇದಕ್ಕೂ ಮುನ್ನ ಮಾತನಾಡಿದ್ದ ರಮೇಶ ಬಂಡಿಸಿದ್ದೇಗೌಡ ಇತ್ತೀಚಿನ ದಿನಗಳಲ್ಲಿ ಸ್ವಾಮೀಜಿ ಎಲ್ಲೆಲ್ಲೋ ದಾರಿ ತಪ್ಪುತ್ತಿದ್ದಾರೆ. ಮಠದ ಹಿರಿಯ ಸ್ವಾಮೀಜಿ ಬಾಲಗಂಗಾಧರನಾಥ ಸ್ವಾಮಿಜಿ ಅವರು ಎಲ್ಲರನ್ನೂ ಒಗ್ಗೂಡಿಸಿ, ಜೊತೆಗೆ ಕರೆದುಕೊಂಡು ಹೋಗುವಂತೆ ಒಳ್ಳೆ ದಾರಿ ಹಾಕಿಕೊಟ್ಟಿದ್ದಾರೆ. ಅವರು ಹಾಕಿಕೊಟ್ಟಿರುವಂತಹ ಹಾದಿ ತಪ್ಪಬಾರದು ಎಂಬ ಉದ್ದೇಶದಿಂದ ಹೇಳಿದ್ದೇನೆ ಎಂದು ಹೇಳಿದರು.

ನೂರು ವರ್ಷಗಳ ಹಿಂದೆ ಈ ಪ್ರಾಂತ್ಯದಲ್ಲಿ 100 ಮಂದಿಗೆ ಕೇವಲ 5 ಮಂದಿ ಮಾತ್ರ ಸಾಕ್ಷರತೆ ಕಲಿಯುತ್ತಿದ್ದರು. ಇದನ್ನ ನೀಗಿಸಲು ಸರ್ಕಾರ ಹಾಗೂ ಇಂಥ ಮಠಗಳು ಭಕ್ತರ ಸಹಕಾರದೊಂದಿಗೆ ಶಿಕ್ಷಣಕ್ಕೆ ಒತ್ತು ಕೊಡುತ್ತಿರುವುದರಿಂದ ಪ್ರಸ್ತುತ ಲಕ್ಷಾಂತರ ಮಂದಿ ವಿದ್ಯಾಭ್ಯಾಸ ಕಲಿಯುತ್ತಿದ್ದಾರೆ. ದಾನಿಗಳು ಮಠಕ್ಕೆ ನೀಡಿದ್ದ ಜಾಗದಲ್ಲಿ ಬಹಳ ಸುಂದರವಾದ ಬೃಹತ್ ಕಟ್ಟಡವನ್ನ ನಿರ್ಮಾಣ ಮಾಡಲಾಗಿದೆ ಎಂದು ಹೇಳಿದರು.

ಈ ವೇಳೆ ಮೈಸೂರು ಶ್ರೀ ಆದಿಚುಂಚನಗಿರಿ ಶಾಖಾ ಮಠದ ಕಾರ್ಯದರ್ಶಿ ಶ್ರೀ ಶ್ರೀ ಸೋಮೇಶ್ವರನಾಥ ಸ್ವಾಮಿಜಿ, ಎಂಎಲ್ಸಿ ಸಿ.ಟಿ.ರವಿ, ಮಾಜಿ ಶಾಸಕ ಸಿ.ಎಸ್.ಪುಟ್ಟರಾಜು, ಬಿಜೆಪಿ ಮುಖಂಡ ಸಚ್ಚಿದಾನಂದ, ವಕೀಲ ಪುಟ್ಟೇಗೌಡ, ಅಪರ ಜಿಲ್ಲಾಧಿಕಾರಿ ಬಿ.ಸಿ ಶಿವಾನಂದ ಮೂರ್ತಿ, ತಹಸೀಲ್ದಾರ್ ಚೇತನಾ ಯಾದವ್ ಸೇರಿದಂತೆ ಇತರರು ಇದ್ದರು.

ಸಿಎಸ್‌ಆರ್ ಫಂಡ್ ಅಭಿವೃದ್ಧಿಗೆ ಬಳಕೆ

ಹೆಚ್‌ಡಿಕೆ ಇಂಗಿತ

ಮಂಡ್ಯ,ಮಾ.14–ಸಿಎಸ್‌ಆರ್ ಫಂಡ್‌ನಲ್ಲಿ ಮಂಡ್ಯ ಜಿಲ್ಲೆಯಲ್ಲಿ ಶಾಲಾ ಕಟ್ಟಡ ನಿರ್ಮಾಣ ಮತ್ತು ದುರಸ್ಥಿ. ಹೈಮಾಸ್ಕ್ ದೀಪ ಅಳವಡಿಕೆ, ರೈತಸಭಾಂಗಣ ನವೀಕರಣ ಮುಂತಾದ ಯೋಜನೆಗಳಿಗೆ ಬಳಸಲಾಗುವುದು ಎಂದು ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ತಿಳಿಸಿದ್ದಾರೆ.

ಕೈಗಾರಿಕೆಗಾಗಿ ನೂರು ಎಕರೆ ಜಾಗ ಬೇಕಿದೆ. ರಾಜ್ಯ ಸರ್ಕಾರ ಬಜೆಟ್‌ನಲ್ಲಿ ಕೊಡುತ್ತೇವೆ ಎಂದಿದೆ ಅದ್ಯಾವಾಗ ಕೊಡುತ್ತಾರೆ ಅನ್ನೋದನ್ನ ಕಾದು ನೋಡಬೇಕಿದೆ ಎಂದು ಕ್ರೀಡಾಂಗಣ ಕಾಮಗಾರಿಗೆ ಚಾಲನೆ ನೀಡಿ ಅವರು ಮಾತನಾಡುತ್ತಿದ್ದರು.

ಜಿಲ್ಲಾಡಳಿತ ಸರ್ಕಾರದ ಸೂಚನೆಯಂತೆ ಜಾಗ ಗುರುತಿಸಲಿ. ಮಂಡ್ಯದ ಜನತೆ ನನ್ನ ಮೇಲೆ ಹಲವು ನಿರೀಕ್ಷೆ ಇಟ್ಟುಕೊಂಡಿದ್ದು, ಅದು ಇನ್ನು ಸಾಕಾರ ಆಗಿಲ್ಲ ಎಂಬುದು ನಮ್ಮ ಮನಸ್ಸಿನಲ್ಲಿದೆ. ಜಿಲ್ಲೆಯ ಜನರನ್ನು ಮರೆಯುವವನಲ್ಲ. ಟೀಕೆ, ಟಿಪ್ಪಣಿಗೂ ಉತ್ತರ ಕೊಡಬೇಕಿಲ್ಲ ಎಂದರು.

ಸಿಎಸ್‌ಆರ್ ಫಂಡ್‌ನ 97 ಕೋಟಿಯಲ್ಲಿ ಹಲವಾರು ಯೋಜನೆ ತರುತ್ತೇನೆ ಎಂದು ತಮ್ಮ ಮನೋ ಇಂಗಿತವನ್ನು ವ್ಯಕ್ತಪಡಿಸಿದರು.

ವಿಶೇಷಚೇತನರು ಮೂರು ಚಕ್ರದ ಎಲೆಕ್ಟ್ರಿಕ್ ವಾಹನಗಳನ್ನು ನೀಡುವಂತೆ ಹಲವು ಬಾರಿ ನನ್ನನ್ನು ಕೋರಿದ್ದರು. ಅದರಂತೆ ಇಂದು ಕ್ರೀಡಾಂಗಣಕ್ಕೆ ಶಂಕುಸ್ಥಾಪನೆ ಜೊತೆಗೆ ಎಲೆಕ್ಟ್ರಿಕ್ ಬೈಕ್ ನೀಡುವ ಕಾರ್ಯಕ್ಕೂ ಚಾಲನೆ ನೀಡಲಾಯಿತು. ಒಂದು ವಾಹನಕ್ಕೆ ಒಂದೂವರೆ ಲಕ್ಷ ಆಗಲಿದ್ದು, 388 ಮಂದಿಗೆ ವಾಹನ ನೀಡಲಾಗಿದೆ. ಇದಕ್ಕೆ ಟಿವಿಎಸ್ ಕಂಪನಿ ನಮ್ಮೊಂದಿಗೆ ಕೈಜೋಡಿಸಿದೆ.

ವಿಕಲಚೇತನರಿಗೆ ಎಲೆಕ್ಟ್ರಿಕ್ ವಾಹನಗಳ ವಿತರಣೆ: 388 ಮಂದಿ ವಿಕಲಚೇತನರಿಗೆ ಟಿವಿಎಸ್ ಕಂಪನಿ ಮತ್ತು ಭಾರತೀಯ ಉಕ್ಕು ಪ್ರಾಧಿಕಾರ ತಮ್ಮ ಸಿಎಸ್‌ಆರ್ ನಿಧಿಯಡಿ ಎಲೆಕ್ಟ್ರಿಕ್ ವಾಹನವನ್ನು ವಿತರಣೆ ಮಾಡಲಾಯಿತು. ಇನ್ಫೋಸಿಸ್ ಕಂಪನಿ ನೀಡಿರುವ 500 ಕಂಪ್ಯೂಟರ್‌ಗಳು, 100 ಲ್ಯಾಪ್‌ಟಾಪ್‌ಗಳನ್ನು ಸರ್ಕಾರಿ ಶಾಲೆಗಳಿಗೆ ಹಸ್ತಾಂತರ ಮಾಡಲಾಯಿತು. ಹಿಂದುಜಾ ಕಂಪನಿ ಸಿಎಸ್‌ಆರ್ ನಿಧಿಯಲ್ಲಿ ನೀಡಿರುವ ಅತ್ಯಾಧುನಿಕ ಆಂಬ್ಯುಲೆನ್ಸ್ ಅನ್ನು ಮಂಡ್ಯದ ಮಿಮ್ಸ್ ಸಂಸ್ಥೆಗೆ ನೀಡಲಾಯಿತು.

ಸಚಿವರಿಗೆ ಬೃಹತ್ ಬೆಲ್ಲದ ಹಾರ ಹಾಕಿ ಸ್ವಾಗತ



ಬೆಲ್ಲದ ಹಾರ ಹಾಕಿ ಸಚಿವರಿಗೆ ಸ್ವಾಗತ : ಕೇಂದ್ರದ ಇಬ್ಬರೂ ಸಚಿವರನ್ನು ವೇದಿಕೆಯ ಕಾರ್ಯಕ್ರಮಕ್ಕೆ ತೆರೆದ ವಾಹನದಲ್ಲಿ ಕರೆತರಲಾಯಿತು. ಈ ಸಂದರ್ಭದಲ್ಲಿ ವಿಸಿ ಫಾರಂ ಗೇಟ್‌ನಲ್ಲಿ ಬೃಹತ್ ಬೆಲ್ಲದ ಹಾರವನ್ನು ಹಾಕಿ ಬರಮಾಡಿಕೊಳ್ಳಲಾಯಿತು. ಇಷ್ಟೊಂದು ದೊಡ್ಡ ಪ್ರಮಾಣದ ಬೆಲ್ಲದ ಹಾರದ ಮೂಲಕ ಸಿಕ್ಕಿದ ಸ್ವಾಗತವನ್ನು ಕಂಡು ಮಾಂಡವೀಯ ಹರ್ಷಚಕಿತರಾದರು. ಮಂಡ್ಯದ ಬೆಲ್ಲದ ಶ್ರೇಷ್ಠತೆಯ ಬಗ್ಗೆ ಕುಮಾರಸ್ವಾಮಿ ಅವರು ಮಾಂಡವೀಯ ಅವರಿಗೆ ವಿವರಣೆ ನೀಡಿದರು.

ಭಾವುಕರಾದ ಹೆಚ್ಡಿಕೆ: ವಿಕಲಚೇತನರಿಗೆ ಎಲೆಕ್ಟ್ರಿಕ್ ವಾಹನಗಳನ್ನು ಹಸ್ತಾಂತರಿಸುವ ಸಂದರ್ಭದಲ್ಲಿ ಸಚಿವ ಕುಮಾರಸ್ವಾಮಿ ಭಾವುಕರಾದರು. ವಾಹನಗಳನ್ನು ಸ್ವೀಕರಿಸುತ್ತಿದ್ದ ವಿಕಲಚೇತನರು ತಮಗೆ ಕೃತಜ್ಞತೆ ಹೇಳುವಾಗ ಕಣ್ಣಲ್ಲಿ ನೀರು ತುಂಬಿಕೊಂಡ ಸಚಿವರು, ಇಷ್ಟು ದೂರ ಬಂದು ವಾಹನಗಳನ್ನು ಸ್ವೀಕರಿಸಿದ್ದಕ್ಕಾಗಿ ಧನ್ಯವಾದಗಳನ್ನು ಸಲ್ಲಿಸಿದರು.

ನಾಳೆಯಿಂದ ವೈರಮುಡಿ ಬ್ರಹ್ಮೋತ್ಸವಕ್ಕೆ ನಾಂದಿ

ಮಂಡ್ಯ, ಮಾ.14– ಮೇಲುಕೋಟೆ ಶ್ರೀ ಚೆಲುವನಾರಾಯಣ ಸ್ವಾಮಿ ವೈರಮುಡಿ ಬ್ರಹ್ಮೋತ್ಸವವು ಮಾ.23ರಿಂದ ಏಪ್ರಿಲ್ 4ರವರೆಗೆ ನಡೆಯಲಿದೆ. ಈ ಉತ್ಸವದ ಪ್ರಮುಖ ಆಕರ್ಷಣೆಯಾದ ವೈರಮುಡಿ ಕಿರೀಟ ಧಾರಣೆಯು ಮಾ.28 ರಂದು ಜರುಗಲಿದ್ದು ವೈರಮುಡಿ ಉತ್ಸವದಲ್ಲಿ ಭಕ್ತಾದಿಗಳಿಗೆ ಯಾವುದೇ ತೊಂದರೆ ಆಗದಂತೆ ಅಗತ್ಯ ಕ್ರಮವಹಿಸುವಂತೆ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಜಿಲ್ಲೆಯ ಮೇಲುಕೋಟೆಯಲ್ಲಿ ನಡೆಯಲಿರುವ ವಿಶ್ವಪ್ರಸಿದ್ಧ ವೈರಮುಡಿ ಬ್ರಹ್ಮೋತ್ಸವದ ಪೂರ್ವಸಿದ್ಧತಾ ಸಭೆಯನ್ನು ಜಿಲ್ಲಾ ಉಸ್ತುವಾರಿ ಸಚಿವ ಎನ್. ಚಲುವರಾಯಸ್ವಾಮಿ ನೇತೃತ್ವದಲ್ಲಿ ನಡೆಸಲಾಯಿತು. ಉತ್ಸವದಲ್ಲಿ ಯಾವುದೇ ಲೋಪದೋಷಗಳಾಗದಂತೆ, ಭಕ್ತರಿಗೆ ಅಗತ್ಯ ಮೂಲಸೌಕರ್ಯಗಳನ್ನು ಕಲ್ಪಿಸಲು ಮತ್ತು ಬಿಗಿ ಭದ್ರತೆ ಒದಗಿಸಲು ನಿರ್ದೇಶಿಸಿದರು.

ವೈರಮುಡಿ ಬ್ರಹ್ಮೋತ್ಸವದಲ್ಲಿ ಕಿರೀಟಧಾರಣಾ ಮೆರವಣಿಗೆಯ ಸಂದರ್ಭದಲ್ಲಿ ಶಾಂತಿಯುತವಾಗಿ ದೇವರನ್ನು ನೋಡುವಂತೆ ಅಗತ್ಯ ವ್ಯವಸ್ಥೆ ಮಾಡಬೇಕು. ಈ ಸಂಬಂಧ ದೇವಸ್ಥಾನದ ಅರ್ಚಕರೊಂದಿಗೆ ಸಭೆ ನಡೆಸಿ ಶಾಂತಿಯುತವಾಗಿ ನಡೆಯಲು ಅಗತ್ಯ ಸಿದ್ಧತೆ ಮಾಡಿಕೊಳ್ಳಿ ಎಂದು ಆದೇಶಿಸಿದರು.

ಸೂಳೆಕೆರೆ ಹೆಸರು ಬದಲಾವಣೆಗೆ ಮಹಿಳಾ ಸಂಘಟನೆಗಳ ಒತ್ತಾಯ

ಮೈಸೂರು, ಮಾ.14(ಎಸ್‌ಪಿಎನ್)– ನಾಗಮಂಗಲ ತಾಲೂಕಿನ ಬಿಂಡಗನವಿಲೆ ರಸ್ತೆಯಲ್ಲಿರುವ ಸೂಳೆಕೆರೆ ಹಾಗೂ ಮದ್ದೂರು ತಾಲೂಕಿನ ಅಂಬರಹಳ್ಳಿ, ಕನ್ನಲಿ ಮಾರ್ಗದಲ್ಲಿರುವ ಸೂಳೆಕೆರೆ ಹೆಸರನ್ನು ಬದಲಾಯಿಸಿ ಇತಿಹಾಸಕ್ಕೆ ಸೂಕ್ತವಾಗಿರುವ ಹೆಸರನ್ನು ಮರುನಾಮಕರಣ ಮಾಡಬೇಕೆಂದು ಒತ್ತಾಯಿಸಿದ್ದಾರೆ.

ಸೂಳೆಕೆರೆ ಎಂಬ ಕೆರೆಗಳ ಹೆಸರನ್ನು ಬದಲಾಯಿಸಿ ಮುಂದಿನ ತಲೆಮಾರಿಗೆ ಕೆರೆಗಳ ಇತಿಹಾಸವನ್ನು ಅಚ್ಚಳಿಯದೇ ಉಳಿಸುವ ನಿಟ್ಟಿನಲ್ಲಿ ಇವುಗಳ ಹೆಸರನ್ನು ಬದಲಾಯಿಸಿ ಹೆಣ್ತನವನ್ನು ಗೌರವಿಸುವಂತೆ ಆಗ್ರಹಿಸಿದ್ದಾರೆ. ಮಹಿಳಾ ದಿನಾಚರಣೆಯ ಮಾಸವಾಗಿರುವ ಕಾರಣ ತಿಂಗಳೊಳಗೆ ಇವೆರಡು ಕೆರೆಗಳ ಹೆಸರನ್ನು ಬದಲಿಸಿ ಅಧಿಕೃತಗೊಳಿಸುವಂತೆ ಎಸ್. ಯಶೋಧರ ಮನವಿ ಮಾಡಿದ್ದಾರೆ.



ಹರವೆ ಭಾಗದ ಗ್ರಾಮ ಸಂಪರ್ಕಗಳ ರಸ್ತೆ ಅಭಿವೃದ್ಧಿ ವಿಶೇಷ ಆದ್ಯತೆ

1.50 ಕೋಟಿ ವೆಚ್ಚದ ರಸ್ತೆ ಅಭಿವೃದ್ಧಿ ಕಾಮಗಾರಿ ಚಾಲನೆ


ಗುದ್ದಲಿ ಪೂಜೆ ನೆರವೇರಿಸಿದ ಶಾಸಕ ಹೆಚ್.ಎಂ.ಗಣೇಶಪ್ರಸಾದ್.

ಚಾಮರಾಜನಗರ: ತಾಲೂಕಿನ ಹರವೆ ಭಾಗದ ಗ್ರಾಮ ಸಂಪರ್ಕಗಳ ರಸ್ತೆಯ ಅಭಿವೃದ್ಧಿಗೆ ವಿಶೇಷ ಆದ್ಯತೆ ನೀಡಲಾಗಿದೆ ಎಂದು ಗುಂಡ್ಲುಪೇಟೆ ಕ್ಷೇತ್ರದ ಶಾಸಕ ಹೆಚ್.ಎಂ.ಗಣೇಶಪ್ರಸಾದ್ ಹೇಳಿದರು.

ಕ್ಷೇತ್ರದ ಮಲೆಯೂರು ಗ್ರಾಮದ ಸೋಮೇಶ್ವರ ದೇವಸ್ಥಾನದ ರಸ್ತೆಯಿಂದ ಹರವೆ ಮಾರ್ಗದ 1 ಕಿ.ಮಿ ರಸ್ತೆ ಅಭಿವೃದ್ಧಿ 1.50 ಕೋಟಿ ವೆಚ್ಚದಲ್ಲಿ ಅಭಿವೃದ್ಧಿ ಪಡಿಸುವ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಿ ಮಾತನಾಡಿದರು.

ಗುಂಡ್ಲುಪೇಟೆ ಕ್ಷೇತ್ರವ್ಯಾಪ್ತಿಗೆ ಹರವೆ ಹೋಬಳಿ 5 ಪಂಚಾಯತಿಗಳು ಸೇರ್ಪಡೆಯಾದ ಬಳಿಕ ನಮ್ಮ ತಂದೆ ಮಾಜಿ ಸಚಿವರಾದ ದಿವಂಗತ ಹೆಚ್.ಎಸ್.ಮಹದೇವ ಪ್ರಸಾದ್ ಅವರು ವಿಶೇಷ ಆಸಕ್ತಿ ವಹಿಸಿ ಈ ಭಾಗದ ಮೂಲಭೂತ ಸೌಲಭ್ಯಗಳಾದ ರಸ್ತೆ, ಕುಡಿಯುವ ನೀರು, ಶಾಲಾ–ಕಾಲೇಜು ಅಭಿವೃದ್ಧಿ, ಸಮುದಾಯ ಭವನಗಳ ನಿರ್ಮಾಣ, ಸಮುದಾಯ ಆಧಾರಿತ ಕಾರ್ಯಕ್ರಮಗಳಿಗೆ ಹೆಚ್ಚು ಒತ್ತು ನೀಡಿದರು ನಂತರ ನಮ್ಮ ತಾಯಿ ಮಾಜಿ ಸಚಿವರಾದ ಗೀತಾಮಹದೇವಪ್ರಸಾದ್ ಈಗ ನಾನು ಶಾಸಕನಾಗಿ ಅವರ ಅಭಿವೃದ್ಧಿ ಕಾರ್ಯಕ್ರಮಗಳನ್ನು ಮುಂದುವರಿಸಿಕೊಂಡು ಹೋಗುತ್ತಿದ್ದೇವೆ.ಕಳೆದ ಎರಡು ವರ್ಷಗಳ ಅವಧಿಯಲ್ಲಿ ಈ ಭಾಗದ ರಸ್ತೆಗಳ ಅಭಿವೃದ್ಧಿ 10 ಕೋಟಿ ವೆಚ್ಚ ಮಾಡಲಾಗಿದೆ ಎಂದರು.

ಮಲೆಯೂರಿನಿಂದ ಹರವೆ ಮಾರ್ಗದ ರಸ್ತೆಯು ಶಿಥಿಲಗೊಂಡಿದ್ದು, ಪಿಡಬ್ಲೂಡಿ ಇಲಾಖೆಯಿಂದ ಮೊದಲ ಹಂತ ಮರೆಯೂರಿನಿಂದ 1 ಕಿ.ಮೀ.ರಸ್ತೆ ಅಭಿವೃದ್ಧಿ ಹಾಗೂ ಎರಡನೇಯ ಹಂತದಲ್ಲಿ 1 ಕೋಟಿ ವೆಚ್ಚದಲ್ಲಿ ಹರವೆ ಗುಂಡ್ಲರಸ್ತೆ ಅಭಿವೃದ್ಧಿ ಪಡಿಸಲಾಗುವುದು ಎಂದರು.

ಈ ಸಂದರ್ಭದಲ್ಲಿ ಜಿ.ಪಂ.ಮಾಜಿ ಸದಸ್ಯ ನವೀನ್ ಕೆರೆಹಳ್ಳಿ, ಮುಖಂಡರಾದ ಮೂಡ್ನಾಕೂಡು ಕುಮಾರ್, ಮಲೆಯೂರು ಅನಂದ್, ರಾಜಪ್ಪ ನಾಗಪ್ಪ, ಎಂ.ಬಿ.ರೇವಣ್ಣ, ಹರವೆ ರಂಗಸ್ವಾಮಿ, ನಾಗೇಶ್, ಮಹಾದೇವಸ್ವಾಮಿ, ಸಿ.ಸಿದ್ದರಾಜು, ಕೆರೆಹಳ್ಳಿ ರೇವಣ್ಣ, ಮಲೆಯೂರು ಗಿರೀಶ್, ಗುರುಸಿದ್ದೇಗೌಡ, ಕೆಬ್ಬೇಪುರ ಹರೀಶ್, ಗುತ್ತಿಗೆದಾರ ಮಂಜುನಾಥ್ ಇತರರು ಹಾಜರಿದ್ದರು.

ನಗರದಲ್ಲಿ ಮಾ.17ರಂದು ಲಿಂಗೈಕ್ಯ ಮಠಾಧೀಶರ ಸಂಸ್ಕರಣೋತ್ಸವ, 'ನುಡಿನಮನ 'ಕಾರ್ಯಕ್ರಮ'

ಚಾಮರಾಜನಗರ, ಮಾ.14– ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭೆ ಚಾಮರಾಜನಗರ ಜಿಲ್ಲಾ ಹಾಗೂ ತಾಲೂಕು ಘಟಕದ ವತಿಯಿಂದ ಜಿಲ್ಲೆಯ ಲಿಂಗೈಕ್ಯ ಮಠಾಧೀಶರ ಸಂಸ್ಕರಣೋತ್ಸವ ಹಾಗೂ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭೆ ರಾಷ್ಟ್ರೀಯ ಅಧ್ಯಕ್ಷ ಮಾಜಿ ಸಚಿವ ದಿ. ಶಾಮನೂರು ಶಿವಶಂಕರಪ್ಪ, ಭೀಮಣ್ಣಖಂಡ್ರೆ, ತಿಪ್ಪಣ್ಣನವರಿಗೆ ನುಡಿನಮನ ಕಾರ್ಯಕ್ರಮವನ್ನು ಮಾ.17 ರಂದು ಬೆಳಗ್ಗೆ 10ಕ್ಕೆ ನಗರದ ಶಿವಕುಮಾರಸ್ವಾಮಿ ಭವನದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭೆ ಜಿಲ್ಲಾ ನಿರ್ದೇಶಕ ಬಿ.ಎಂ. ಪ್ರಭುಸ್ವಾಮಿ ತಿಳಿಸಿದರು.


ಸುದ್ದಿಗೋಷ್ಠಿಯಲ್ಲಿ ನಿರ್ದೇಶಕ ಬಿ.ಎಂ.ಪ್ರಭುಸ್ವಾಮಿ ಮಾತನಾಡಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ನುಡಿನಮನ ಕಾರ್ಯಕ್ರಮದ ಸಾನಿಧ್ಯವನ್ನು ಸುತ್ತೂರುಮಠದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ವಹಿಸುವರು. ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭೆ ಗೌರವಾಧ್ಯಕ್ಷರಾದ ಹರವೆ ವಿರಕ್ತ ಮಠದ ಸರ್ಪಭೂಷಣಸ್ವಾಮೀಜಿ, ಮಲೆ ಮಹದೇಶ್ವರ ಬೆಟ್ಟ ಸಾಲೂರು ಬೃಹನ್ಮಠದ ಶಾಂತಮಲ್ಲಿಕಾರ್ಜುನಸ್ವಾಮೀಜಿ, ಮಲ್ಲನ ಮೂಲೆ ಮಠದ ಇಮ್ಮಡಿಸಿದ್ದಲಿಂಗ ಸ್ವಾಮೀಜಿ, ಚಾಮರಾಜನಗರ ಸಿದ್ದಮಲ್ಲೇಶ್ವರ ವಿರಕ್ತ ಮಠದ ಚನ್ನಬಸವಸ್ವಾಮೀಜಿ, ಮರಿಯಾಲ ಮುರುಘರಾಜೇಂದ್ರಸ್ವಾಮಿ ಮಹಾಸಂಸ್ಥಾನ ಮಠದ ಇಮ್ಮಡಿ ಮುರುಘರಾಜೇಂದ್ರಸ್ವಾಮೀಜಿ ಭಾಗವಹಿಸಲಿದ್ದಾರೆ ಎಂದರು.

ಅರಣ್ಯ ಸಚಿವರು, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭೆ ರಾಷ್ಟ್ರೀಯ ಅಧ್ಯಕ್ಷ ಈಶ್ವರ್ ಖಂಡ್ರೆ ಕಾರ್ಯಕ್ರಮ ಉದ್ಘಾಟಿಸುವರು. ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭೆ ರಾಜ್ಯಾಧ್ಯಕ್ಷ ಶಂಕರ್ ಮಹದೇವ ಬಿದರಿ ಅಧ್ಯಕ್ಷತೆ ವಹಿಸುವರು.

ಗುಂಡ್ಲುಪೇಟೆ ಶಾಸಕ ಎಚ್.ಎಂ. ಗಣೇಶ್ ಪ್ರಸಾದ್, ಮಾಜಿ ಶಾಸಕಿ ಪರಿಮಳಾ ನಾಗಪ್ಪ ಸಿ.ಎಸ್.ನಿರಂಜನ ಕುಮಾರ್, ಕೆ.ಆರ್.ಮಲ್ಲಿಕಾರ್ಜುನಪ್ಪ, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭೆ ರಾಜ್ಯಘಟಕದ ಪದಾಧಿಕಾರಿಗಳು, ಜಿಲ್ಲಾ ಪ್ರಧಾನ ಕಾರ್ಯದರ್ಶಿ ನರಸಮಂಗಲ ನಿರಂಜನಮೂರ್ತಿ, ಚಾಮರಾಜನಗರ ತಾಲೂಕು ಅಧ್ಯಕ್ಷ ಬಾಲಚಂದ್ರ ಮೂರ್ತಿ, ಗುಂಡ್ಲುಪೇಟೆ ತಾಲೂಕು ಅಧ್ಯಕ್ಷ ಕಮರಹಳ್ಳಿ, ರವಿ, ಕೊಳ್ಳೇಗಾಲ ತಾಲೂಕು ಅಧ್ಯಕ್ಷ ಎಂ.ಪುಟ್ಟಣ್ಣ, ಯಳಂದೂರು ತಾಲೂಕು ಅಧ್ಯಕ್ಷ ಜಿ. ಮಹದೇವಪ್ಪ, ಹನೂರು ತಾಲೂಕು ಅಧ್ಯಕ್ಷ ಜಿ. ಸೋಮಶೇಖರ್ ಮೂರ್ತಿ, ಮಹಿಳಾ ಜಿಲ್ಲಾಧ್ಯಕ್ಷೆ ಡಾ.ಶ್ವೇತಾ ಶಶಿಧರ್ ಜಿಲ್ಲಾ ಯುವ ಘಟಕದ ಅಧ್ಯಕ್ಷ ಸೋಮವಾರಪೇಟೆ ಗುರುಪ್ರಸಾದ್ ಭಾಗವಹಿಸುವರು ಎಂದರು.

ವಾಟರ್ ಪ್ಯೂರಿಫೈರ್ ಉಪಕರಣ ಅಳವಡಿಕೆ

ಚಾಮರಾಜನಗರ, ಮಾ.14– ಜಿಲ್ಲೆಯ ತೆರಕಣಾಂಬಿ ತಾಲೂಕಿನ ಹರವೆ ವಲಯದ ಸಾಗಡೆ ಗ್ರಾಮದ ಸರ್ಕಾರಿ ಪ್ರೌಢಶಾಲೆಯಲ್ಲಿ ಶಾಲಾಮಕ್ಕಳಿಗೆ ಶುದ್ಧ ಕುಡಿಯುವ ನೀರು ಪೂರೈಸಲು ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿಸಿ.ಟ್ರಸ್ಟ್ ಮತ್ತು ಮೈಸೂರು ಭಾರತೀಯ ಜೀವ ವಿಮಾ ನಿಗಮ ವತಿಯಿಂದ ವಾಟರ್ ಪ್ಯೂರಿಫೈರ್ ಉಪಕರಣ ಅಳವಡಿಸಲಾಯಿತು.

ಮಕ್ಕಳ ಆರೋಗ್ಯದ ದೃಷ್ಟಿಯಿಂದ ಶುದ್ಧ ಕುಡಿಯುವ ನೀರು ಪೂರೈಕೆ ಮಾಡಬೇಕಿದೆ. ಆ ನಿಟ್ಟಿನಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿಸಿ.ಟ್ರಸ್ಟ್ ಮತ್ತು ಮೈಸೂರು ಭಾರತೀಯ ಜೀವ ವಿಮಾ ನಿಗಮ ಕಾಳಜಿವಹಿಸಿ ಶಾಲೆಗೆ ವಾಟರ್ ಪ್ಯೂರಿಫೈರ್ ಉಪಕರಣ ಅಳವಡಿಸಿವೆ. ಶಾಲಾಮಕ್ಕಳು ಇದರ ಸದ್ಬಳಕೆ ಮಾಡಿಕೊಳ್ಳುವಂತೆ ಕಾರ್ಯಕ್ರಮದಲ್ಲಿ ಹಾಜರಿದ್ದ ಗಣ್ಯರು ಮಕ್ಕಳಿಗೆ ಸಲಹೆ ನೀಡಿದರು.

ಗ್ರಾಪಂ ಪಿಡಿಓ ಸತೀಶ್ ಕುಮಾರ್, ಎಂಜಿನಿಯರ್ ಪುಷ್ಪರಾಜ್, ಜ್ಞಾನವಿಕಾಸ ಯೋಜನಾಧಿಕಾರಿ ಮೂಕಾಂಬಿಕೆ, ಜಿಲ್ಲಾ ಜನ ಜಾಗೃತಿ ಅಧ್ಯಕ್ಷ ಪ್ರಸಾದ್, ಮಲ್ಲಪ್ಪ, ತಾಲೂಕು ಯೋಜನಾಧಿಕಾರಿ ಶಶಿಕುಮಾರ್, ದೀಪು, ಗ್ರಾಪಂ ಸದಸ್ಯರಾದ ಕೃಷ್ಣಶೆಟ್ಟಿ ನಾಗಪ್ಪ, ಮಾದಯ್ಯ ಹಾಜರಿದ್ದರು.

ಬಿ.ರಾಚಯ್ಯ ಜೋಡಿ ರಸ್ತೆ ಅಭಿವೃದ್ಧಿಗೆ 3.80 ಕೋಟಿ ರೂ. ಬಿಡುಗಡೆ

ಅಪಘಾತ ವಲಯ ಅಭಿವೃದ್ಧಿ ಪಡಿಸಲಾಗುತ್ತದೆ: ಸಿ.ಪುಟ್ಟರಂಗಶೆಟ್ಟಿ


ಚಾಮರಾಜನಗರದ ಬಿ.ರಾಚಯ್ಯ ಜೋಡಿರಸ್ತೆ ಅಭಿವೃದ್ಧಿಗಾಗಿ 3.80 ಕೋಟಿ ರೂ.ಬಿಡುಗಡೆಯಾಗಿರುವ ಹಿನ್ನೆಲೆಯಲ್ಲಿ ಎಂಎಸ್ಐಎಲ್ ಅಧ್ಯಕ್ಷರು, ಶಾಸಕ ಸಿ.ಪುಟ್ಟರಂಗಶೆಟ್ಟಿ ಇಂದು ರಸ್ತೆಗೆ ಭೇಟಿ ನೀಡಿ ಪರಿಶೀಲಿಸಿದರು.

ಚಾಮರಾಜನಗರ: ನಗರದ ಬಿ.ರಾಚಯ್ಯ ಜೋಡಿರಸ್ತೆ ಅಭಿವೃದ್ಧಿಗಾಗಿ 3.80 ಕೋಟಿ ರೂ.ಬಿಡುಗಡೆಯಾಗಿರುವ ಹಿನ್ನೆಲೆಯಲ್ಲಿ ಎಂಎಸ್ಐಎಲ್ ಅಧ್ಯಕ್ಷರು, ಶಾಸಕ ಸಿ.ಪುಟ್ಟರಂಗಶೆಟ್ಟಿ ಇಂದು ರಸ್ತೆಗೆ ಭೇಟಿ ನೀಡಿ ಪರಿಶೀಲಿಸಿದರು.

ನಂತರ ಸುದ್ದಿಗಾರರೊಂದಿಗೆ ಮಾತನಾಡಿ, ನಗರದ ಬಿ.ರಾಚಯ್ಯ ಜೋಡಿ ರಸ್ತೆಯ ಭುವನೇಶ್ವರಿ ವೃತ್ತದಿಂದ 1200 ಮೀಟರ್ ಅಪಘಾತ ವಲಯ ರಸ್ತೆ ಅಭಿವೃದ್ಧಿ, ರಸ್ತೆ ಸುರಕ್ಷಾ ಅಭಿವೃದ್ಧಿ ಪಡಿಸಲಾಗುತ್ತದೆ ಎಂದರು.

ಈ ಸಂದರ್ಭದಲ್ಲಿ ನಾಮನಿರ್ದೇಶನ ಸದಸ್ಯ ಎಂ.ಸ್ವಾಮಿ, ಇಂಜಿನಿಯರ್ ವಿನೋದ್ ಹಾಜರಿದ್ದರು.

ಪಿ.ಸೋಮಶೇಖರ್ ನಿಧನ

ಕೊಳ್ಳೇಗಾಲ: ಪಟ್ಟಣದ ಮಹದೇಶ್ವರ ಕಾಲೇಜು ಸಮೀಪದ ವಾಸಿ, ಇಲ್ಲಿನ ಭೀಮನಗರದ ಮಾಜಿ ಯಜಮಾನರು ಹಾಗೂ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಮಾಜಿ ಅಧ್ಯಕ್ಷರೂ ಆದ ಪಿ.ಸೋಮಶೇಖರ್ (66) ಹೃದಯಾಘಾತದಿಂದ ಶುಕ್ರವಾರ ರಾತ್ರಿ ನಿಧನ ಹೊಂದಿದ್ದಾರೆ.



ದಿವಂಗತರು ಪತ್ನಿ, ಪುತ್ರ, ಪುತ್ರಿ ಹಾಗೂ ಅಪಾರ ಬಂಧು ಬಳಗವನ್ನು ಬಿಟ್ಟು ಅಗಲಿದ್ದಾರೆ. ಇಂದು ಪಟ್ಟಣದ ಹೊರವಲಯದ ಹಂಪಾಪುರದ ಬಳಿ ಇರುವ ಭೀಮನಗರ ಕುಲಸ್ಥರ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನಡೆಯಿತು.

ಕೊಳ್ಳೇಗಾಲ ಶಾಸಕ ಎ.ಆರ್.ಕೃಷ್ಣಮೂರ್ತಿ, ಹನೂರು ಶಾಸಕ ಎಂ.ಆರ್. ಮಂಜುನಾಥ್, ಗ್ಯಾರಂಟಿ ಯೋಜನೆ ರಾಜ್ಯ ಉಪಾಧ್ಯಕ್ಷ ಪುಷ್ಪ ಅಮರನಾಥ್, ಮಾಜಿ ಸಚಿವ ಎನ್.ಮಹೇಶ್, ಬಿ.ಸೋಮಶೇಖರ್, ಮಾಜಿ ಶಾಸಕ ಆರ್.ನರೇಂದ್ರ ಹಾಗೂ ಅನೇಕ ಗಣ್ಯರು ಅಂತಿಮ ದರ್ಶನ ಪಡೆದರು.

ಮೈಸೂರು ಮಿತ್ರ
ಭಾನುವಾರ 15-03-2026

ವಾರದ ಮಿತ್ರ
ಸಾಪ್ತಾಹಿಕ ಪುರವಣಿ

ಮೈಸೂರು ವೀಳ್ಯದೆಲೆ...





ಬಿ. ಶ್ರೀಕಂಠಸ್ವಾಮಿ



“ತ್ವರಿತಗತಿಯಲ್ಲಿ ಬದಲಾಗುತ್ತಿರುವ ಜೀವನಶೈಲಿ ಮತ್ತು ನಾಗಾಲೋಟದಲ್ಲಿ ಬೆಳೆಯುತ್ತಿರುವ ನಗರ ಪ್ರದೇಶಗಳ ಹೊರತಾಗಿಯೂ, ಮೈಸೂರು ವೀಳ್ಯದೆಲೆ ತನ್ನ ಅನಿವಾರ್ಯತೆ ಹಾಗೂ ಪ್ರಭಾವವನ್ನು ಈಗಲೂ ಉಳಿಸಿಕೊಂಡಿದೆ. ಪೂಜೆಗೆ ಮೀಸಲಾದ ದಿನಗಳೆಂದೇ ಪಾಲಿಸುವ ಸೋಮವಾರ ಮತ್ತು ಶುಕ್ರವಾರದ ಪೂಜೆಗಳಿಗೆ ಮನೆಗಳಲ್ಲಿ ಕಡ್ಡಾಯವಾಗಿ ಬೇಕಾದ ವಸ್ತುವಾಗಿದೆ. ಈಗ ಪ್ರತಿ ಎಲೆಯ ಬೆಲೆ ಸುಮಾರು 1.50 ರೂಪಾಯಿಗಳಿಂದ 2 ರೂ ಗಳಾಗಿದೆ. ನಾನಾ ರೀತಿಯ ಬೀಡಾ ಜಗಿಯುವ ಪರಿಪಾಠ ಬೆಳೆದು ಬಂದ ಮೇಲಂತೂ ವೀಳ್ಯದೆಲೆಗೆ ಅದರಲ್ಲೂ ಚಿಗುರೆಲೆಗೆ ಭಾರೀ ಡಿಮ್ಯಾಂಡ್ ಇದೆ. ಹಾಗಾಗೀ ರೈತರಿಗೆ ಮಾರುಕಟ್ಟೆಯೂ ವಿಸ್ತಾರವಾಗುತ್ತಾ ಬಂದಿದೆ.

ಕ್ಷಿಪ್ರ ನಗರೀಕರಣದಿಂದ ಮೈಸೂರು ವೀಳ್ಯದೆಲೆ ಕೃಷಿ ಜಿಲ್ಲೆಯ ಅನೇಕ ಭಾಗಗಳಲ್ಲಿ ನಶಿಸಿ ಹೋಗಿದೆ. ಅದೊಂದು ಕಾಲವಿತ್ತು ಅಗ್ರಹಾರ ಸಮೀಪದ ರಾಮಾನುಜ ರಸ್ತೆಯಲ್ಲಿದ್ದ ಅಡಿಕೆ ತೋಟದಲ್ಲಿ ಯಥೇಚ್ಛವಾಗಿ ವೀಳ್ಯದೆಲೆ ಬೆಳೆಯುತ್ತಿದ್ದರು. ಕಾಲಕ್ರಮೇಣ ಗೃಹ ಹಾಗೂ ವಾಣಿಜ್ಯ ಉದ್ದೇಶಗಳಿಂದ ಈ ತೋಟಗಳು ಸೈಟ್‌ಗಳಾಗಿ ಪರಿವರ್ತನೆಗೊಂಡಿವೆ. ಆದರೆ, ಮೈಸೂರು ನಗರದ ಹೃದಯಭಾಗದಿಂದ ಕೇವಲ 12 ಕಿ.ಮೀ ದೂರದಲ್ಲಿರುವ ಒಂದು ಸಣ್ಣ ಗ್ರಾಮ ಉದ್ದೂರಿನಲ್ಲಿ, ಈ ವೀಳ್ಯದೆಲೆಯು ಕೃಷಿ, ಸಂಪ್ರದಾಯ ಮತ್ತು ಸಮುದಾಯದ ಹೆಮ್ಮೆಯಾಗಿ ಉಳಿದುಕೊಂಡಿದೆ. ಮೈಸೂರು-ಎಚ್.ಡಿ. ಕೋಟೆ ರಸ್ತೆಯ ಚಿತ್ರನಟ ವಿಷ್ಣುವರ್ಧನ್ ಸ್ಮಾರಕದ ಎದುರು ಉದ್ದೂರು-ಹುಲ್ಲಹಳ್ಳಿ ರಸ್ತೆಯಲ್ಲಿರುವ ಈ ಉದ್ದೂರು ಗ್ರಾಮವು ಒಂದು ಕಾಲದಲ್ಲಿ ರಾಜಮನೆತನದ ಪ್ರೋತ್ಸಾಹದೊಂದಿಗೆ ಮೈಸೂರು ವೀಳ್ಯದೆಲೆ ಪರಂಪರೆಯ ಹಿಂದಿನಿಂದಲೂ ಉಳಿಸಿಕೊಂಡಿದೆ. ಬೇರೆ ಗ್ರಾಮಗಳಿಗೆ ಹೋಲಿಸಿದರೆ ಉದ್ದೂರು ವಿಭಿನ್ನವಾಗಿರುವುದು ಜಿಐ-ಟ್ಯಾಗ್ (ಭೌಗೋಳಿಕ ಸೂಚ್ಯಂಕ) ಹೊಂದಿರುವ ಮೈಸೂರು ವೀಳ್ಯದೆಲೆ ಕೃಷಿಯಿಂದ ಮಾತ್ರವಲ್ಲ, ಅಲ್ಲಿನ ರೈತರು ತಮ್ಮದೇ ಆದ ವೀಳ್ಯದೆಲೆ ಸಗಟು ಮಾರುಕಟ್ಟೆ ಹೊಂದಿರುವ ಕಾರಣಕ್ಕೆ. ಇದು ಇಂದಿನ ಬದಲಾದ ವ್ಯವಸ್ಥೆಯಲ್ಲಿ ಬಲು ವಿಶಿಷ್ಟ.

ಮಾರುಕಟ್ಟೆ ವ್ಯವಸ್ಥೆ

ಉದ್ದೂರು ಗ್ರಾಮದ ಮಧ್ಯಭಾಗದಲ್ಲಿ ಮೈಸೂರು ವೀಳ್ಯದೆಲೆಗೆ ಪ್ರತ್ಯೇಕ ಮಾರುಕಟ್ಟೆ ವ್ಯವಸ್ಥೆ ಇದ್ದು. ಇದು **'ಶ್ರೀ ಲಕ್ಷ್ಮಿನಾರಾಯಣ ಸ್ವಾಮಿ ವೀಳ್ಯದೆಲೆ ಸಂತೆ'** ಎಂದು ಜನಜನಿತೆ. ಪಟ್ಟಣದ ಮಾರುಕಟ್ಟೆಗಳನ್ನು ಅವಲಂಬಿಸಿರುವ ಹೆಚ್ಚಿನ ಕೃಷಿ ಸಮುದಾಯಗಳಿಗೆ ಭಿನ್ನವಾಗಿ, ಉದ್ದೂರಿನ ವೀಳ್ಯದೆಲೆ ಬೆಳೆಗಾರರು ತಮ್ಮ ಉತ್ಪನ್ನವನ್ನು ಹರಾಜು ಮೂಲಕ ಮಾರಾಟ ಮಾಡಲು ತಮ್ಮದೇ ವ್ಯಾಪಾರ ವಹಿವಾಟು ವ್ಯವಸ್ಥೆ ಮಾಡಿಕೊಂಡಿದ್ದಾರೆ. ಈ ಮಾರುಕಟ್ಟೆಯು ಭಾನುವಾರವೂ ಸೇರಿದಂತೆ ವರ್ಷಪೂರ್ತಿ ಪ್ರತಿ ದಿನ ಸಂಜೆ 4 ರಿಂದ 5 ರವರೆಗೆ ಕಾರ್ಯಾಚರಿಸುತ್ತದೆ. ಕೇವಲ ಒಂದೇ ಒಂದು ಗಂಟೆ. ಆದರೆ ನೂರಾರು ರೈತರಿಗೆ ದಿನದ ಸಂಪಾದನೆಯನ್ನು ನಿರ್ಧರಿಸುತ್ತದೆ.

ಬೆಂಗಳೂರು ದಕ್ಷಿಣ ಜಿಲ್ಲೆಯ (ಹಿಂದಿನ ರಾಮನಗರ) ಚನ್ನಪಟ್ಟಣವು ಸಹ ವೀಳ್ಯದೆಲೆ ಮಾರುಕಟ್ಟೆಯನ್ನು ಹೊಂದಿದೆ. ಆದರೆ ಅದು ವಾರಕ್ಕೆ ಎರಡು ಬಾರಿ ಮಾತ್ರ ಸಮಾವೇಶಗೊಳ್ಳುತ್ತದೆ. ಕರ್ನಾಟಕವನ್ನು ದಾಟಿ, ನೆರೆಯ ರಾಜ್ಯ ತಮಿಳುನಾಡು, ಮೈಸೂರು ವೀಳ್ಯದೆಲೆಗೆ ಪ್ರಮುಖ ಮಾರುಕಟ್ಟೆ.

ಉದ್ದೂರು ಮತ್ತು ಸುತ್ತಮುತ್ತಲಿನ ಹಳ್ಳಿಗಳು ಸೇರಿದಂತೆ ನೂರಾರು ಎಕರೆ ಪ್ರದೇಶದಲ್ಲಿ ವೀಳ್ಯದೆಲೆ ಕೃಷಿ ಕೈಗೊಳ್ಳಲಾಗುತ್ತಿದೆ.. ಹೆಚ್ಚಿನ ರೈತರು ತಮ್ಮ ಜಮೀನಿನ 10 ರಿಂದ 20 ಗುಂಟೆಯನ್ನು ವೀಳ್ಯದೆಲೆ ಬೆಳೆಯಲೆಂದೇ ಮೀಸಲಿಡುತ್ತಾರೆ. ಮನೆ ಬಾಗಿಲಲ್ಲೇ ಮಾರುಕಟ್ಟೆ ಇರುವುದರಿಂದ, ಇದರ ಮಾರಾಟದ ಬಗ್ಗೆ ಚಿಂತೆಗಳು ಕಡಿಮೆ - ಆದರೂ ಕೃಷಿಗೆ ಸಂಬಂಧಿಸಿದ ಸವಾಲುಗಳು ಸಾಕಷ್ಟಿವೆ.

ಹೆಮ್ಮೆಯ ತಲೆಮಾರುಗಳು...

ಉದ್ದೂರಿನ ಐದನೇ ತಲೆಮಾರಿನ ವೀಳ್ಯದೆಲೆ ಬೆಳೆಗಾರ ಮಂಜು ಅವರಿಗೆ, ಈ ಬೆಳೆ ಜೀವನೋಪಾಯಕ್ಕಿಂತ ಅತ್ಯಂತ ಹೆಮ್ಮೆಯ ವಿಷಯ.

ರೈತರ...
ರೈತರಿಂದ...
ರೈತರಿಗಾಗಿ
ರೂಪುಗೊಂಡಿದೆ
ಉದ್ದೂರಿನ
ವೀಳ್ಯದೆಲೆ
ಮಾರುಕಟ್ಟೆ;

ನಾನು 27 ವರ್ಷಗಳಿಂದ ಮೈಸೂರು ವೀಳ್ಯದೆಲೆ ಬೆಳೆಯುತ್ತಿದ್ದೇನೆ. ಅದರ ಕೃಷಿಗೆ ಸಂಬಂಧಿಸಿದಂತೆ ನನಗಿರುವ ಹೆಮ್ಮೆಯನ್ನು ವರ್ಣಿಸಲಾಗದು ಎಂದು ಅವರು ಹೇಳುತ್ತಾರೆ. ಆದರೆ, ಕೌಶಲ್ಯಪೂರ್ಣ ಕಾರ್ಮಿಕರ ಕೊರತೆ ಮತ್ತು ಹೆಚ್ಚುತ್ತಿರುವ ದಿನಗೂಲಿಯೊಂದಿಗೆ, ಇದೂ ದುಬಾರಿ ಕಸುಬಾಗಿದೆ ಎಂದು ಅವರು ಬೇಸರದಿಂದಲೇ ನುಡಿಯುತ್ತಾರೆ. ಖರ್ಚು-ವೆಚ್ಚಗಳ ಹೊರತಾಗಿಯೂ, ಇಲ್ಲಿನ ರೈತರು ಸಾಂಪ್ರದಾಯಿಕ ಮತ್ತು ಸಂಪಾದನೆ ಮೂಲದಿಂದ ಪ್ರೇರಿತರಾಗಿ ಈ ಕೃಷಿಯಲ್ಲಿ ಮುಂದುವರೆಯುತ್ತಿದ್ದಾರೆ.

ಮೈಸೂರು ವೀಳ್ಯದೆಲೆಯನ್ನು ಮೂರು ಪ್ರಮುಖ ಪ್ರಭೇದಗಳಲ್ಲಿ ಬೆಳೆಯಲಾಗುತ್ತದೆ - ಬಿಳಿ ಎಲೆ, ಕಪ್ಪು ಎಲೆ ಮತ್ತು ಎಣ್ಣೆಗೆಂಪು. 'ಬಿಳಿ' ಎಲೆ ವಾಸ್ತವವಾಗಿ ತಿಳಿ ಹಸಿರು ಬಣ್ಣದ್ದಾಗಿದ್ದು, ಎರಡರಿಂದ ಮೂರು ದಿನಗಳು ಕಾದು ಬಳಸಬಹುದಾಗಿದೆ 'ಕಪ್ಪು ಎಲೆ', ಗಾಢ ಹಸಿರು ಬಣ್ಣದ್ದಾಗಿದ್ದು ಅಧಿಕ ದಿನಗಳು ಇಡಬಹುದು. ಆದರೆ ಎಣ್ಣೆಗೆಂಪು ಎಲೆಯನ್ನು ಹೆಚ್ಚು ದಿನಗಳವರೆಗೆ ಕಾದಿಡಲು ಬರುವುದಿಲ್ಲ. ಅವೆಲ್ಲವನ್ನೂ ಒಂದುಗೂಡಿಸುವುದು ವಿಶಿಷ್ಟವಾದ ಹೃದಯ ಆಕಾರದ ವೀಳ್ಯದೆಲೆ.

ಮದುವೆ, ನಾಮಕರಣ, ಗೃಹಪ್ರವೇಶ ಅಥವಾ ಯಾವುದೇ ಶುಭ ಸಮಾರಂಭವಾಗಲಿ - ಅಶುಭ ಸಂದರ್ಭವಾದರೂ ಇತರೆ ಕಾರ್ಯಕ್ರಮಗಳಲ್ಲಿನ ಭೋಜನದ ನಂತರ ಸುಣ್ಣ, ಅಡಿಕೆ ಮತ್ತು ಸಕ್ಕರೆಯೊಂದಿಗೆ ವೀಳ್ಯದೆಲೆಯನ್ನು ಮೆಲ್ಲದಿದ್ದರೆ ಅಂದಿನ ಸಂಭ್ರಮದ ಕ್ಷಣ ಅಪೂರ್ಣವೆಂದು ಈಗಲೂ ಸಂಪ್ರದಾಯಸ್ಥರ ವಾದ.

ಧಾರ್ಮಿಕ ಮಹತ್ವವನ್ನು ಮೀರಿ ಹೇಳುವುದಾದರೆ, ವೀಳ್ಯದೆಲೆಯನ್ನು ಅಗಿಯುವುದು ಜೀರ್ಣಕ್ರಿಯೆಗೆ ಸಹಾಯಕಾರಿ ಎಂಬುದು ಪ್ರತೀತಿ. ಈ ನಂಬಿಕೆಯನ್ನು ಹಿರಿಯರು ಇನ್ನೂ ಬಲವಾಗಿ ನಂಬುತ್ತಾರೆ, ಅವರಲ್ಲಿ ಅನೇಕರು ನಿಯಮಿತವಾಗಿ ಎಲೆಯನ್ನು ಅಗಿಯುತ್ತಾರೆ. ಕೆಲವರಿಗೆ, ಈ ಅಭ್ಯಾಸವು ವ್ಯಸನವಾಗಿಯೂ ಪರಿಣಮಿಸಿದೆ. ಅವರ ತುಟಿ ಮತ್ತು ನಾಲಿಗೆ ಯಾವಾಗಲೂ ಕೆಂಪು ಬಣ್ಣಕ್ಕೆ ತಿರುಗಿರುತ್ತದೆ.

ಒಂದು ಕ್ರಮ ಬದ್ದತೆ ಇದೆ...

ವೀಳ್ಯದೆಲೆ ಬೆಳೆಯಲು ಅಧಿಕ ಶ್ರಮ ಮತ್ತು ನೀರು ಅತ್ಯಗತ್ಯವಾಗಿದೆ. ಆದರೆ, ನೀರು ನಿಲ್ಲಬಾರದು ಅದು ನಿಲ್ಲುವುದನ್ನು ತಡೆಯಲು ಸೂಕ್ತ ವ್ಯವಸ್ಥೆಯೊಂದಿಗೆ ಮಣ್ಣಿನ ತೇವಾಂಶವನ್ನು ಸ್ಥಿರವಾಗಿ ಕಾಪಾಡಿಕೊಳ್ಳಬೇಕು.

ಅರ್ಥಾತ್, ವೀಳ್ಯದೆಲೆ ಬೆಳೆಗೆ ಸದಾ ಭೂಮಿಯ ಮೇಲ್ಮೈ ತೇವವಾಗಿರಬೇಕು ಮತ್ತು ನೀರಿನ ಪೂರೈಕೆ ನಿಯಮಿತವಾಗಿರಬೇಕು.

ಈ ಹಿಂದೆ, ಪ್ರತಿಯೊಬ್ಬ ವೀಳ್ಯದೆಲೆ ಬೆಳೆಯುವ ರೈತರು ಮಳೆನೀರನ್ನೇ ಆಶ್ರಯಿಸಿ, ಆ ನೀರನ್ನು ಸಂಗ್ರಹಿಸುವ ಸಲುವಾಗಿ ಗುಂಡಿಗಳನ್ನು ತೆಗೆದು, ಅದರಲ್ಲಿ ಸಂಗ್ರಹಿಸಲಾದ ನೀರನ್ನು ಕೈಯಿಂದಲೇ ತೋಟಕ್ಕೆ ಹಾಕುತ್ತಿದ್ದರು. ನಂತರ ಡೀಸೆಲ್ ಮೋಟಾರನ್ನು ಬಳಸಿಕೊಂಡು ಅಕ್ಕ ಪಕ್ಕದ ಜಲಮೂಲಗಳಿಂದ ನೀರನ್ನು ಪಂಪ್ ಮಾಡಿಕೊಂಡು ವೀಳ್ಯದೆಲೆ ತೋಟವನ್ನು ನಿರ್ವಹಿಸುತ್ತಿದ್ದರು.

ಆರಂಭಿಕವಾಗಿ ವೀಳ್ಯದೆಲೆ ಕೃಷಿ ಮಾಡುವವರು ಸಾಮಾನ್ಯವಾಗಿ ವೀಳ್ಯದೆಲೆ ಬಳ್ಳಿಯನ್ನು ಅಡಿಕೆ ಇಲ್ಲವೆ ಇತರ ದಟ್ಟ ಮರಗಳಿರುವ ತೋಟಗಳಲ್ಲಿ ನೆಡಲಾಗುತ್ತದೆ. ಬಳ್ಳಿಗಳನ್ನು ಒಂದೂವರೆ ಅಡಿ ಅಂತರದಲ್ಲಿ, ನಾಲ್ಕು ಅಡಿ ಅಗಲದ ಸಾಲುಗಳಲ್ಲಿ ನೆಡಲಾಗುತ್ತದೆ. ಇದಕ್ಕೂ ಮೊದಲು ಕೊಟ್ಟಿಗೆ ಗೊಬ್ಬರವನ್ನು ಬಳಸಿ ಮಣ್ಣನ್ನು ಫಲವತ್ತಾಗಿ ಮಾಡಿಕೊಳ್ಳಲಾಗುತ್ತದೆ.

ಈ ಬಳ್ಳಿಯು ಸುಮಾರು ಒಂದು ಅಡಿ ಎತ್ತರಕ್ಕೆ ಬೆಳೆಯುತ್ತಿದ್ದಂತೆ, ಬಾಳೆ ದಿಂಡುಗಳಿಂದ ತೆಗೆದ ನಾರಿನಿಂದ ಹೊಸೆದ ಹಗ್ಗಗಳನ್ನು ಬಳಸಿ ಬಳ್ಳಿಗಳನ್ನು ಅಡಿಕೆ ಮರಗಳಿಗೆ ಸುತ್ತಲಾಗುತ್ತದೆ.

ಬಾಳೆ ದಿಂಡಿನ ಹಗ್ಗಗಳೇ ಏಕೆ?

ಉದ್ದೂರಿನ ರೈತ ಮಲ್ಲೇಶ್ ಈ ವಿಶಿಷ್ಟ ಸಂಪ್ರದಾಯವನ್ನು ವಿವರಿಸುತ್ತಾ ; 'ವೀಳ್ಯದೆಲೆ ಮತ್ತು ಬಾಳೆಹಣ್ಣು ಎರಡೂ ಶುಭ ಸಂದರ್ಭಗಳಲ್ಲಿ ಅತ್ಯಗತ್ಯ. ಪೂಜೆಯ ಸಮಯದಲ್ಲಿ ಸಾಮಾನ್ಯವಾಗಿ ಅವುಗಳನ್ನು ದೇವರಿಗೆ ಅರ್ಪಿಸಲಾಗುತ್ತದೆ. ಅದಕ್ಕಾಗಿಯೇ ಅವುಗಳನ್ನು ಒಟ್ಟಾಗಿ ಬಳಸಿದರೆ ಶುಭ ಸೂಚಕ ಎಂದು ವಿವರಿಸುತ್ತಾರೆ. ತಲೆಮಾರುಗಳಿಂದ ತಮಗೆ ಬಳುವಳಿಯಾಗಿ ಬಂದ ಒಂದು ಎಚ್ಚರಿಕೆಯ ಮಾತನ್ನು ಅವರು ಇದೇ ವೇಳೆ ನೆನಪಿಸಿಕೊಳ್ಳುತ್ತಾರೆ; ಬೇರೆ ಯಾವುದೇ ವಸ್ತುವಿನಿಂದ ಮಾಡಿದ ಹಗ್ಗವನ್ನು ಬಳಸಿದಾಗ ವೀಳ್ಯದೆಲೆ ಬಳ್ಳಿಗಳು ಬೆಳೆಯುವ ಬದಲು ಬಾಡುವ ಇಲ್ಲವೇ ಒಣಗುವ ಸಾಧ್ಯತೆ ಹೆಚ್ಚು.

ವೀಳ್ಯದೆಲೆ ತೋಟಕ್ಕೆ ಕಾಲಿಟ್ಟಾಗ ಮೊದಲು ಮಣ್ಣಿಗೆ ನಮಸ್ಕರಿಸಿ, ನಂತರ ಬರಿಗಾಲಿನಲ್ಲಿ ತೋಟವನ್ನು ಪ್ರವೇಶಿಸುತ್ತಾರೆ ಎಂದೂ ಮಲ್ಲೇಶ್ ವಿವರಿಸಿದರು. ಇದು ಬೆಳೆಯ ಬಗ್ಗೆ ಅವರು (ವೀಳ್ಯದೆಲೆ ಬೆಳೆಗಾರರು) ಹೊಂದಿರುವ ಪವಿತ್ರ ನಂಬಿಕೆ ಹಾಗೂ ಭಕ್ತಿಯನ್ನು ಪ್ರತಿಬಿಂಬಿಸುತ್ತದೆ.

ಟಿ. ಕಾಟೂರು, ಗೋಪಾಲಪುರ, ತಳೂರು, ಧನಗಳ್ಳಿ ಹಾಗೂ ನೆರೆಯ ಇತರೆ ಹಳ್ಳಿಗಳ ವೀಳ್ಯದೆಲೆ ಬೆಳೆಗಾರರು ಸಹ ಈ ಮಾರುಕಟ್ಟೆಗೆ ಬರುತ್ತಾರೆ. ಉದ್ದೂರಿನ ರೈತರಿಗೆ ಉಚಿತವಾಗಿ ಮಾರಾಟ ಜಾಗವನ್ನು ನೀಡಲಾಗಿದ್ದರೆ, ಬೇರೆ ಊರಿನ ರೈತರು ದಿನಕ್ಕೆ 50 ರೂಪಾಯಿ ನೆಲ ಬಾಡಿಗೆ ನೀಡಬೇಕು. ಸಂಗ್ರಹಿಸಿದ ಹಣವನ್ನು ಶ್ರೀ ಲಕ್ಷ್ಮಿನಾರಾಯಣ ಸ್ವಾಮಿ ದೇವಾಲಯದ ಹುಂಡಿಗೆ ಅರ್ಪಿಸಲಾಗುತ್ತದೆ.

ತೋಟದಿಂದ ಮಾರುಕಟ್ಟೆವರೆಗೆ

ಹವಾಮಾನ ಅನುಕೂಲಕರವಾಗಿದ್ದಾಗ, ಅಂದರೆ ತಂಪು ಹವೆ ಇದ್ದಾಗ ಬೆಳಿಗ್ಗೆ 6 ರಿಂದ ಮಧ್ಯಾಹ್ನ 12 ರವರೆಗೆ ಕೊಯ್ಲು ಮಾಡಲಾಗುತ್ತದೆ. ರೈತರು ಸ್ಥಳೀಯವಾಗಿ ತಯಾರಿಸಿದ 'ಎಲೆ ಉಗುರು' ಉಪಕರಣವನ್ನು ಬಳಸುತ್ತಾರೆ. ಇದು ಬೆರಳಿನ ಆಕಾರದ ಲೋಹದ ಕಟ್ಟರ್ ಆಗಿದ್ದು, ಇದನ್ನು ಹೆಬ್ಬೆರಳಿಗೆ ಧರಿಸಲಾಗುತ್ತದೆ. ಇದರಿಂದ ವೀಳ್ಯದೆಲೆಗಳನ್ನು ಸುರಕ್ಷಿತ ಹಾಗೂ ನಯವಾಗಿ ಕತ್ತರಿಸಬಹುದಾಗಿದೆ.

ನಂತರ ವೀಳ್ಯದೆಲೆಗಳನ್ನು ಪ್ಯಾಕ್ ಮಾಡಲಾಗುತ್ತದೆ - ಒಂದು ಕಟ್ಟಿಗೆ 200 ಎಲೆಗಳು, ಒಂದು 'ಪಿಂಡಿ'ಗೆ 50 ಕಟ್ಟುಗಳು ಒಟ್ಟು 10,000 ಎಲೆಗಳನ್ನು - ತೆಂಗಿನ ಗರಿಗಳನ್ನು ಬಳಸಿ, ಒಪ್ಪವಾಗಿ ಕೈಯಲ್ಲಿ ಎಣೆದ ಬುಟ್ಟಿಯಲ್ಲಿ ವೀಳ್ಯದೆಲೆಗಳ ತಾಜಾವಾಗಿಡಲು ನಿಯತಕಾಲಿಕವಾಗಿ ನೀರನ್ನು ಸಿಂಪಡಿಸಲಾಗುತ್ತದೆ.

ಮಧ್ಯಾಹ್ನದ ಹೊತ್ತಿಗೆ, ರೈತರು ಒಬ್ಬೊಬ್ಬರಾಗಿ, ಇಲ್ಲವೇ ತಂಡೋಪ ತಂಡವಾಗಿ ತಮ್ಮ ವೀಳ್ಯದೆಲೆ ಪಿಂಡಿಗಳನ್ನು ಹೊತ್ತು ಮಾರುಕಟ್ಟೆಯತ್ತ ಬರಲು ಪ್ರಾರಂಭಿಸುತ್ತಾರೆ. ಸರಿಯಾಗಿ ಸಂಜೆ 4 ಗಂಟೆಗೆ, ನಾರಾಯಣಿ ಎಂಬ ವ್ಯಕ್ತಿ ಮಾರುಕಟ್ಟೆಯ ಕಂಬಕ್ಕೆ ಲೋಹದ ರಾಡ್‌ನಿಂದ ಬಡಿಯುತ್ತಾರೆ. ಅದರಿಂದ ಶಾಲೆಯ ಗಂಟೆಯ ರೀತಿಯದ್ದೇ ಶಬ್ಧ ಕೇಳಿ ಬರುತ್ತದೆ, ಕೂಡಲೇ ಹರಾಜು ಆರಂಭವಾಗುತ್ತದೆ.

ಪಿಂಡಿಯಲ್ಲಿನ ಕಟ್ಟುಗಳನ್ನು ಬಿಚ್ಚಿ, ಎಲೆಗಳನ್ನು ತೋರಿಸಿ ರೈತರು ವ್ಯಾಪಾರ ಕುದುರಿಸಲು ಆರಂಭಿಸುತ್ತಾರೆ ಒಂದು ವೇಳೆ ಮಧ್ಯ ಪ್ರವೇಶಿಸುವ ಮಧ್ಯವರ್ತಿಗಳ ಜೊತೆ ಚೌಕಾಸಿಗಿಳಿಯುತ್ತಾರೆ. ಎಲ್ಲಾ ಕಡೆಯಂತೆ ಇಲ್ಲಿಯೂ ವ್ಯವಹಾರ ಚಾತುರ್ಯವೇ ಲಾಭದಾಯಕ ಮಾರ್ಗವಾಗಿದೆ.

ಒಂದು ಪಿಂಡಿಗೆ ಕನಿಷ್ಠ 2,000 ರೂ. ಯಿಂದ ಗರಿಷ್ಠ 8,000 ರೂ. ಗಳವರೆಗೆ ಅದರ ಗುಣಮಟ್ಟಕ್ಕೆ ಅನುಗುಣವಾಗಿ ಬೆಲೆ ನಿರ್ಧರಿಸಲಾಗುತ್ತದೆ. ಈ ಹಿಂದೆ ಕೆಲವು ಬಾರಿ ಉತ್ಪಾದನೆ ಕುಂಠಿತವಾದಾಗ ಒಂದು ಪಿಂಡಿಗೆ 15,000 ರೂ. ವರೆಗೂ ಹರಾಜಾಗಿರುವ ಉದಾಹರಣೆಯೂ ಇದೆ. ಯಾವುದೇ ಬೆಳೆಯಂತೆ, ಗುಣಮಟ್ಟ ಮತ್ತು ಒಟ್ಟಾರೆ ಇಳುವರಿಯೊಂದಿಗೆ ಬೆಲೆಗಳು ನಿರ್ಧಾರಿತವಾಗುತ್ತವೆ.

ಹಳ್ಳಿಯಿಂದ ಮನೆಗಳಿಗೆ

ಸಾಮಾನ್ಯವಾಗಿ ಹೋಲ್‌ಸೇಲ್ ವ್ಯಾಪಾರಿಗಳು ಉದ್ದೂರು ಮಾರುಕಟ್ಟೆಯಲ್ಲಿ ವೀಳ್ಯದೆಲೆಯನ್ನು ಖರೀದಿಸುತ್ತಾರೆ. ನಂತರ ಮೈಸೂರು ನಗರದ ದೇವರಾಜ ಮಾರುಕಟ್ಟೆ, ವಾಣಿ ವಿಲಾಸ ಮಾರುಕಟ್ಟೆಗಳ ದೊಡ್ಡ ವ್ಯಾಪಾರಿಗಳಿಗೆ ಎಲೆಗಳನ್ನು ತುಸು ಹೆಚ್ಚಿನ ಬೆಲೆಗೆ ಲಾಭದೊಂದಿಗೆ ಮಾರಾಟ ಮಾಡುತ್ತಾರೆ. ರಸ್ತೆ ಬದಿಯ ವ್ಯಾಪಾರಿಗಳು ಮತ್ತು ದಿನಸಿ ಅಂಗಡಿಗಳಿಗೂ ಎಲೆಗಳನ್ನು ಪೂರೈಕೆ ಮಾಡುತ್ತಾರೆ.

ತ್ವರಿತಗತಿಯಲ್ಲಿ ಬದಲಾಗುತ್ತಿರುವ ಜೀವನಶೈಲಿ ಮತ್ತು ನಾಗಾಲೋಟದಲ್ಲಿ ಬೆಳೆಯುತ್ತಿರುವ ನಗರ ಪ್ರದೇಶಗಳ ಹೊರತಾಗಿಯೂ, ಮೈಸೂರು ವೀಳ್ಯದೆಲೆ ತನ್ನ ಅನಿವಾರ್ಯತೆ ಹಾಗೂ ಪ್ರಭಾವವನ್ನು ಈಗಲೂ ಉಳಿಸಿಕೊಂಡಿದೆ. ಪೂಜೆಗೆ ಮೀಸಲಾದ ದಿನಗಳೆಂದೇ ಪಾಲಿಸುವ ಸೋಮವಾರ ಮತ್ತು ಶುಕ್ರವಾರದ ಪೂಜೆಗಳಿಗೆ ಮನೆಗಳಲ್ಲಿ ಕಡ್ಡಾಯವಾಗಿ ಬೇಕಾದ ವಸ್ತುವಾಗಿದೆ. ಈಗ ಪ್ರತಿ ಎಲೆಯ ಬೆಲೆ ಸುಮಾರು 1.50 ರೂಪಾಯಿಗಳಿಂದ 2 ರೂ ಗಳಾಗಿದೆ.

ನಾನಾ ರೀತಿಯ ಬೀಡಾ ಜಗಿಯುವ ಪರಿಪಾಠ ಬೆಳೆದು ಬಂದ ಮೇಲಂತೂ ವೀಳ್ಯದೆಲೆಗೆ ಅದರಲ್ಲೂ ಚಿಗುರೆಲೆಗೆ ಬಾರೀ ಡಿಮ್ಯಾಂಡ್ ಇದೆ. ಹಾಗಾಗೀ ರೈತರಿಗೆ ಮಾರುಕಟ್ಟೆಯೂ ವಿಸ್ತಾರವಾಗುತ್ತಾ ಬಂದಿದೆ.





ವಾರಭವಿಷ್ಯ

15.03.2026 ರಿಂದ 21.03.2026

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ: ರವಿ-ಮೀನ, ಚಂದ್ರ-ಮಕರ, ಕುಂಭ, ಮೀನ, ಕುಜ-ಕುಂಭ, ಬುಧ-ಕುಂಭ, ಗುರು-ಮಿಥುನ, ಶುಕ್ರ-ಮೀನ, ಶನಿ-ಮೀನ, ರಾಹು-ಕುಂಭ ಮತ್ತು ಕೇತು-ಸಿಂಹ

ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ್ ರತ್ನ'
'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು'
'ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ'
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ, ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು.
ಮೊ: 9740973224, 9739548720



ಮೇಷ (ಚು,ಚೆ,ಲ,ಲಿ,ಲು,ಲೆ,ಲೊ,ಅ)

ಈ ವಾರದಲ್ಲಿ ವಿವಿಧ ಮೂಲಗಳಿಂದ ಹಣ ಸಂಪಾದನೆ ಆಗುವುದು. ವಾಹನ ಖರೀದಿಗೆ ಚಂದ್ರ ಗ್ರಹದ ಬೆಂಬಲವಿದೆ. ಜವಳಿ, ಗಾರ್ಮೆಂಟ್ಸ್ ಉದ್ಯಮಿಗಳಿಗೆ ಕೈ ತುಂಬ ಕೆಲಸ ಹಾಗೂ ಧನಾರ್ಜನೆಯಾಗುವುದು. ಮನೆಯಲ್ಲಿ ನೆಮ್ಮದಿಯ ವಾತಾವರಣ ಇರುತ್ತದೆ. ಹೊಸ ಅಂಗಡಿ ಪ್ರಾರಂಭಿಸಲು ಸುಸಮಯವಾಗಿದೆ. ಅನಾವಶ್ಯಕ ಓಡಾಟಗಳು ಬೇಡ. ಜಲಾಶಯಗಳ ಹತ್ತಿರ ಹುಡುಗಾಟ ಬೇಡ.

ಶ್ರೀ ವಿಘ್ನೇಶ್ವರ ಪ್ರಾರ್ಥನೆ. ಶುಭ ಸಂಖ್ಯೆ-3

ವೃಷಭ (ಇ,ಉ,ಎ,ಒ,ವ,ವಿ,ವು,ವೆ,ವೊ)

ಸರ್ಕಾರಿ ವರಿಷ್ಠಾಧಿಕಾರಿಗಳಿಗೆ ಜವಾಬ್ದಾರಿ ಹೆಚ್ಚುವುದು. ರಾಜಕಾರಣಿಗಳಿಗೆ ಶುಭಯೋಗವಿದೆ. ಪತ್ನಿ-ಪುತ್ರರ ಸಹಕಾರದಿಂದ ಉನ್ನತವಾದುದನ್ನು ಸಾಧಿಸುವಿರಿ. ರೈತಾಪಿ ಜನರಿಗೆ ಬೆಳೆಯಲ್ಲಿ ಅಧಿಕ ಇಳುವರಿಯಿಂದ ಮುಖದಲ್ಲಿ ಮಂದಹಾಸ. ಇಂಜಿನಿಯರುಗಳಿಗೆ ದೊಡ್ಡ ಯೋಜನೆಗಳು ದೊರೆಯುವ ಸಂಭವವಿದೆ. ದಾನ-ಧರ್ಮ ಬುದ್ಧಿಯಿಂದ ಸಮಾಜದಲ್ಲಿ ಮನ್ನಣೆ ಗಳಿಸುವಿರಿ.

ಶ್ರೀ ದೇವೀ ಖಡ್ಗಮೂಲ ಸ್ತೋತ್ರ ಪಠಿಸಿ. ಶುಭ ಸಂಖ್ಯೆ-2

ಮಿಥುನ (ಕ,ಕಿ,ಕು,ಘ,ಙ,ಛ,ಕೆ,ಕೊ,ಹ)

ನೀವು ಅಂದುಕೊಂಡದ್ದು ಒಂದು, ಆಗುತ್ತಿರುವುದು ಮತ್ತೊಂದು. ದೇಹದ ದಣಿವು, ಮಾನಸಿಕ ಒತ್ತಡ ಎಲ್ಲವೂ ಗುರುಗ್ರಹವು ಉಚ್ಚ ಸ್ಥಾನಕ್ಕೆ ಯುಗಾದಿಯ ನಂತರ ಬರುವುದರಿಂದ ನೆಮ್ಮದಿಯನ್ನು ಹೊಂದುವಿರಿ. ಈ ವಾರ ಧಾರ್ಮಿಕ ಕಾರ್ಯಗಳಲ್ಲಿಯೂ ಮಗ್ನರಾಗುವುದರಿಂದ ಮನಸ್ಸು ಹಗುರವೆನಿಸಲಿದೆ. ಅನಿವಾರ್ಯವಲ್ಲದ ಕೆಲಸಗಳನ್ನು ಮುಂದೂಡಿ.

ಶ್ರೀ ಮನ್ನಾರಾಯಣ ನಾಮಸ್ತುತಿ. ಶುಭ ಸಂಖ್ಯೆ-8

ಕಟಕ (ಹೀ,ಹು,ಹೆ,ಹೊ,ಡ,ಡಿ,ಡು)

ವಾರದಾರಂಭಕ್ಕೆ ಗುರುಭಕ್ತಿ, ಸ್ವಧರ್ಮಾಚರಣೆಯಿಂದ ಮನಸ್ಸಿನ ವ್ಯಾಕುಲತೆ ನಿವಾರಣೆಯಾಗುವುದು. ಆರೋಗ್ಯದಲ್ಲಿ ಸುಧಾರಣೆಯನ್ನು ಕಾಣುವಿರಿ. ದೈವಾರ್ಚನೆಯಲ್ಲಿ ತೊಡಗುವುದರಿಂದ ಚಿತ್ತ ಶುದ್ಧಿಯಾಗುವುದು. ವಾರ ಮಧ್ಯಾನಂತರ ಅನ್ನಾಹಾರಗಳಲ್ಲಿ ವ್ಯತ್ಯಯವಾಗುವುದರಿಂದ ಆರೋಗ್ಯ ಕೆಡುವ ಸಾಧ್ಯತೆ. ಕೆಟ್ಟ ಸಹವಾಸಗಳಿಂದ ತೊಂದರೆಗೆ ಗುರಿಯಾಗುವಿರಿ.

ಶ್ರೀ ದೇವಿ ಸ್ತುತಿ. ಶುಭ ಸಂಖ್ಯೆ-6

ಸಿಂಹ (ಮ,ಮಿ,ಮು,ಮೆ,ಮೊ,ಟ,ಟಿ,ಟು,ಟೆ)

ವಾರದಾರಂಭಕ್ಕೆ ಬಯಸಿದ್ದನ್ನು ಗಳಿಸಿಕೊಳ್ಳುವಿರಿ. ಧನಲಾಭ, ಮೃಷ್ಟಾನ್ನ ಭೋಜನ, ಸ್ತ್ರೀಯರು ತಮ್ಮ ಮನ ಮೆಚ್ಚಿನ ಉಡುಗು-ತೊಡುಗೆಗಳನ್ನು ಖರೀದಿಸುವರು. ಬಂಧುಗಳ ಜೊತೆ ಪ್ರೀತಿ-ವಿಶ್ವಾಸ ವೃದ್ಧಿಸುವುದು. ಕೆಲವು ಸರ್ಕಾರಿ ಅಧಿಕಾರಿಗಳಿಗೆ ಸ್ಥಾನ ಭ್ರಷ್ಟತೆ ಉಂಟಾಗುವ ಸಾಧ್ಯತೆ. ವಾರದ ಕಡೆಗೆ ದೇಹಪೀಡೆಯಿಂದ ಶರೀರ ಸೊರಗುವುದು. ಜೂಜಿನಿಂದ ನಷ್ಟ ಉಂಟಾಗುವುದು.

ಶ್ರೀ ಗುರ್ವಾಷ್ಟೋತ್ತರ ಪಠಿಸಿ. ಶುಭ ಸಂಖ್ಯೆ-5

ಕನ್ಯಾ (ಟೊ,ಪ,ಪಿ,ಪು,ಷ,ಣ,ಠ,ಪೆ,ಪೊ)

ಈ ಯುಗಾದಿ ನಿಮಗೆ ಹೊಸ ಭರವಸೆಗಳನ್ನು ಹೊತ್ತು ತರಲಿದೆ. ಸದ್ವಾರ್ತೆ ಬಂದು ಮೈ ಮನಗಳು ಪುಳಕಿತಗೊಳ್ಳುವುದು. ವಿದ್ಯಾಭಿವೃದ್ಧಿ, ವಿನೋದ-ಪ್ರಮೋದಗಳಿಂದ ಹರುಷದ ವಾತಾವರಣ. ಕೆಲವು ಅಹಿತಕರ ಪ್ರಸಂಗಗಳು ಜರುಗಬಹುದು. ಇದರಿಂದ ನಿಮ್ಮ ಉತ್ಸಾಹ ಭಂಗವಾದೀತು. ಚಾಡಿಕೋರರ ಮಾತಿಗೆ ಬೆಲೆ ಕೊಡಬೇಡಿ. ಸ್ನಾಯು ಸೆಳೆತ ಕಾಡಬಹುದು.

ಶ್ರೀ ವೆಂಕಟೇಶ್ವರ ಆರಾಧನೆ. ಶುಭ ಸಂಖ್ಯೆ-1

ತುಲಾ (ರ,ರಿ,ರು,ರೆ,ರೊ,ತ,ತಿ,ತು,ತೆ)

ವಾರದಾರಂಭಕ್ಕೆ ನಂಬಿಕಸ್ಥ ಹಿರಿಯರೊಬ್ಬರಿಂದ ಮಹತ್ವದ ಯೋಜನೆ ಕಾರ್ಯರೂಪಕ್ಕೆ ಬರುವ ಸಂಭವವಿದೆ. ಸಾಮಾಜಿಕ ಸ್ತರದಲ್ಲಿ ಜನಾದರವನ್ನು ಪಡೆಯುವಿರಿ. ನಿಮ್ಮ ಪರಿಶ್ರಮಕ್ಕೆ ತಕ್ಕ ಪ್ರತಿಫಲ ದೊರೆಯುವುದು. ಕಟ್ಟಡ ಗುತ್ತಿಗೆದಾರರಿಗೆ ಹೊಸ ಯೋಜನೆಗಳು ಲಭಿಸುವುದು. ನಿಮ್ಮ ಪ್ರೀತಿ ಪಾತ್ರರ ನಿಷ್ಠೆಯನ್ನು ಅನುಮಾನಿಸಬೇಡಿ. ರೈತಾಪಿ ಜನರಿಗೆ ಒಳ್ಳೆಯ ಬೆಳೆ ಹಾಗೂ ಬೆಲೆ ದೊರೆಯುವುದು.

ಶ್ರೀ ಚಾಮುಂಡೇಶ್ವರಿ ದರ್ಶನ. ಶುಭ ಸಂಖ್ಯೆ-2

ವೃಶ್ಚಿಕ (ತೊ,ನ,ನಿ,ನು,ನೆ,ನೊ,ಯ,ಯಿ,ಯು)

ವಾರದಾರಂಭಕ್ಕೆ ನೆಂಟರು-ಇಷ್ಟರು ಬೆರೆಯುವ ಉಲ್ಲಾಸದ ಸಮಯ. ಜಾತ್ರೆ, ರಥೋತ್ಸವಗಳಲ್ಲಿ ಭಾಗವಹಿಸುವಿರಿ. ನೂತನ ಗೃಹವಸ್ತು, ವಸ್ತ್ರಾಭರಣ ಮನೆಗೆ ಬರುವುದು. ಶ್ರೀಮತಿಯ ಹಿತವಚನದಿಂದ ಒಳಿತಾಗುವುದು. ಸ್ಥಿರಾಸ್ತಿ ಮಾರಾಟದಲ್ಲಿ ವಿಳಂಬವಾಗುವುದು ಪಾಲುದಾರಿಕೆ ವ್ಯವಹಾರಗಳಲ್ಲಿ ನಷ್ಟವನ್ನು ಅನುಭವಿಸುವಿರಿ. ಸಟ್ಟಾ-ಜೂಜುಗಳಲ್ಲಿ ಅಪಜಯ ಉಂಟಾಗುವುದು.

ಶ್ರೀ ನರಸಿಂಹಸ್ವಾಮಿ ಉಪಾಸನೆ. ಶುಭ ಸಂಖ್ಯೆ-4

ಧನುಸ್ಸು (ಯೆ,ಯೊ,ಬ,ಬಿ,ಬು,ಧ,ಭ,ಢ,ಬೆ)

ವಾರದ ಆದಿಗೆ ಆಮೋದ-ಪ್ರಮೋದಗಳಲ್ಲಿ ಸಮಯ ಕಳೆಯುವುದು. ನೀವು ಯಶಸ್ವಿ ಆಗಬೇಕೆಂದರೆ ವಿರಮಿಸುತ್ತಾ ಕೂರಬೇಡಿ. ಸನ್ಮಾರ್ಗಿಗಳ ಸಹವಾಸದಿಂದ ಹೂವಿನೊಂದಿಗೆ ನಾರು ಸ್ವರ್ಗ ಸೇರಿತು ಎಂಬ ಗಾದೆಯಂತೆ ನಡೆಯುವುದು. ಸರಾಫ್ ವ್ಯಾಪಾರಿಗಳಿಗೆ ಉತ್ತಮ ವ್ಯಾಪಾರ ಹಾಗೂ ಧನಲಾಭವಾಗುವುದು. ಮಾತೃಶ್ರೀಯವರ ಆರೋಗ್ಯದ ಕಡೆ ಗಮನ ನೀಡಿ. ಸಂಚಾರಿ ನಿಯಮಗಳನ್ನು ಪಾಲಿಸಿ. ಅನ್ಯಥಾ ಸಂಕಷ್ಟಕ್ಕೆ ಗುರಿಯಾಗುವಿರಿ.

ಶ್ರೀ ಸಾಯಿಬಾಬಾ ಪೂಜೆ. ಶುಭ ಸಂಖ್ಯೆ-7

ಮಕರ (ಬೊ,ಜ,ಜಿ,ಖಿ,ಖು,ಖೆ,ಖೊ,ಗ,ಗಿ)

ಸಮಯ ಯಾರನ್ನೂ ಕಾಯುವುದಿಲ್ಲ. ದೈನಂದಿನ ಕೆಲಸ ಕಾರ್ಯಗಳು ನೀವಂದುಕೊಂಡಂತೆ ಸಾಗುವುದು. ಮಾತಿನಿಂದ ಜಟಿಲ ಸಮಸ್ಯೆಯನ್ನು ಜಾಣ್ಮೆಯಿಂದ ಪರಿಹರಿಸಿಕೊಳ್ಳುವಿರಿ. ವಾರದ ಉತ್ತರಾರ್ಧಕ್ಕೆ ಅನಿಶ್ಚಿತತೆ ಕಾಡುತ್ತದೆ. ಬೇಡದ ಅಪವಾದಗಳಿಗೆ ಗುರಿಯಾಗುವಿರಿ. ತಿಳಿದವರೆಂದು ನಂಬಿ ಸಾಲ ಕೊಟ್ಟು ಕೈ ಸುಟ್ಟುಕೊಳ್ಳುವಿರಿ. ನೆರೆಹೊರೆಯಲ್ಲಿ ವಾಗ್ವಾದಗಳಿಗೆ ಆಸ್ಪದ ಕೊಡಬೇಡಿ.

ಶ್ರೀ ಶನಿದೇವ ದರ್ಶನ. ಶುಭ ಸಂಖ್ಯೆ-3

ಕುಂಭ (ಗು,ಗೆ,ಗೊ,ಸ,ಸಿ,ಸು,ಸೆ,ಸೊ,ದ)

ಈ ವಾರದಲ್ಲಿ ನಾನಾ ವಿಧದಿಂದ ಧನ ಸಂಗ್ರಹವಾಗಿ ಗುರು-ಚಂದ್ರ ಕೃಪೆಯಿಂದ ನಿಮ್ಮ ಮನೋವಾಂಛಿತ ಕೆಲಸಗಳು ಕೈಗೂಡಲಿದೆ. ಫ್ಯಾನ್ಸಿ ಅಂಗಡಿ ಹಾಗೂ ಅಲಂಕಾರಿಕ ವಸ್ತು ವ್ಯಾಪಾರಿಗಳಿಗೆ ಯುಗಾದಿಯ ಬಂಪರ್ ವ್ಯಾಪಾರದಿಂದ ಹೇರಳ ಧನಲಾಭ. ಕಚೇರಿ ಕೆಲಸಗಳನ್ನು ಜವಾಬ್ದಾರಿಯಿಂದ ನಿರ್ವಹಿಸಿ. ಅನ್ಯಥಾ ತನಿಖಾ ಸಂಸ್ಥೆಗಳ ಕಾಕದೃಷ್ಟಿಯಿಂದ ಅಪಮಾನಕ್ಕೆ ಗುರಿಯಾಗುವಿರಿ.

ಶ್ರೀ ಶನಿದೇವ ಪ್ರಾರ್ಥನೆ. ಶುಭ ಸಂಖ್ಯೆ-9

ಮೀನ (ದಿ,ದು,ಖ,ಝ,ಥ,ತೆ,ದೊ,ಚ,ಚಿ)

ಎಲ್ಲ ಕೆಲಸವನ್ನೂ ಒಮ್ಮೆಲೆ ಮಾಡಲು ಹೋಗಿ ಫಜೀತಿ ಪಡುವಿರಿ. ನೆರೆಹೊರೆಯಲ್ಲಿ ಮನಸ್ತಾಪಗಳಿಗೆ ಆಸ್ಪದ ಕೊಡದೆ ಹಬ್ಬದ ಹರುಷವನ್ನು ಆನಂದದಿಂದ ಆಚರಿಸಿಕೊಳ್ಳಿ. ವಾರದ ಕಡೆಗೆ ಶುಭ ಚಂದ್ರನ ಪ್ರಭಾವದಿಂದ ಸತ್ಕರ್ಮಾಚರಣೆ, ಸಜ್ಜನರ ಭೇಟಿ ಮನಸ್ಸಿಗೆ ಸುಖ ತರುವುದು. ರಾಜಕೀಯದವರಿಗೆ ಸ್ಥಾನಮಾನಗಳು ಲಭಿಸಲಿದೆ. ಹಬ್ಬದ ವೆಚ್ಚಗಳಂತೂ ಇದ್ದೇ ಇರುತ್ತದೆ.

ಶ್ರೀ ದಕ್ಷಿಣಾಮೂರ್ತಿ ಸ್ತೋತ್ರ ಪಠಿಸಿ. ಶುಭ ಸಂಖ್ಯೆ-5

ಮೈಸೂರು ಮಿತ್ರ

ಭಾನುವಾರ 15 ಮಾರ್ಚ್ 2026

ಹಿರಿಯೂರು ಪಿಎಸಿಸಿಎಸ್ ಚುನಾವಣೆಯಲ್ಲಿ ಕಾಂಗ್ರೆಸ್ ಜಯಭೇರಿ

ಸಂಸದ ಸುನೀಲ್ ಬೋಸ್ ಆಪ್ತ ನವೀನ್ ಬಣದ 12 ಮಂದಿ ನಿರ್ದೇಶಕರಾಗಿ ಆಯ್ಕೆ

ತಿ.ನರಸೀಪುರ: ಹಿರಿಯೂರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನಿರ್ದೇಶಕರ ಸ್ಥಾನಕ್ಕೆ ಶನಿವಾರ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ ಬೆಂಬಲಿತ ಸದಸ್ಯರು ಜಯಭೇರಿ ಭಾರಿಸಿದ್ದು, ಸಂಸದ ಸುನೀಲ್ ಬೋಸ್ ಆಪ್ತ ಹಾಗೂ ಕೆಡಿಪಿ ಸದಸ್ಯ ಹಿರಿಯೂರು ನವೀನ್ ಬಣದ 12 ಮಂದಿ ನಿರ್ದೇಶಕರಾಗಿ ಆಯ್ಕೆಯಾಗಿದ್ದಾರೆ.

ಸಹಕಾರ ಸಂಘದ ಆಡಳಿತ ಮಂಡಳಿಯ ಮುಂದಿನ 5 ವರ್ಷಗಳ ಅವಧಿಗಾಗಿ ನಡೆದ ನಿರ್ದೇಶಕರ ಚುನಾವಣೆಯಲ್ಲಿ ಹಿರಿಯೂರು ನವೀನ್ ಬಣದ ಎಲ್ಲ 12 ಸದಸ್ಯರು ಭರ್ಜರಿ ಜಯಗಳಿಸಿದ್ದು, ಎದುರಾಳಿ ಬಣದಿಂದ ಸ್ಪರ್ಧಿಸಿದ್ದ ಏಕೈಕ ಅಭ್ಯರ್ಥಿ ಸೋಲನ್ನನುಭವಿಸಿದ್ದಾರೆ.

ಸಹಕಾರ ಸಂಘದ ಒಟ್ಟು 12 ನಿರ್ದೇಶಕರ ಪೈಕಿ ಶನಿವಾರ 5 ಸ್ಥಾನಗಳಿಗೆ ಮಾತ್ರವೇ ಚುನಾವಣೆ ನಡೆಯಿತು. ಉಳಿದ 7 ಸ್ಥಾನಗಳಿಗೆ ಮಾರ್ಚ್ 7 ರಂದು ಚುನಾವಣೆ ನಡೆದು ಎಲ್ಲ 7 ಮಂದಿ ನಿರ್ದೇಶಕರು ಅವಿರೋಧವಾಗಿ ಆಯ್ಕೆಯಾಗಿದ್ದರು.

ಶನಿವಾರ ಐವರು ನಿರ್ದೇಶಕರ ಆಯ್ಕೆಗಾಗಿ ಸಹಕಾರ ಸಂಘದಲ್ಲಿ ನಡೆದ ಚುನಾವಣೆಯಲ್ಲಿ ಹಿರಿಯೂರು ನವೀನ್ ಬಣದಿಂದ ಸಾಲಗಾರರ ಕ್ಷೇತ್ರದಿಂದ ಆಯ್ಕೆ ಬಯಸಿ ಎಂ.ಗುರುಸ್ವಾಮಿ, ಸಿ.ಎಸ್.ನಂಜುಂಡ ಸ್ವಾಮಿ, ಸಿ.ಎಸ್.ಪ್ರಭುಸ್ವಾಮಿ, ಎಸ್.ವೀರೇಶ್, ಸಹಜಾನಂದ ಸ್ವಾಮಿ ಹಾಗೂ ಎದುರಾಳಿ ಬಣದಿಂದ ಮಹದೇವಪ್ಪ ನಾಮಪತ್ರ ಸಲ್ಲಿಸಿದರು. ಆನಂತರ ನಡೆದ ಚುನಾವಣೆಯಲ್ಲಿ ಎದುರಾಳಿ ಬಣದ ಮಹದೇವಪ್ಪ ಸೋಲನ್ನನುಭವಿಸಿದ್ದಾರೆ ಉಳಿದ ಐವರು ಜಯಗಳಿಸಿದರು. ಚುನಾವಣೆಯಲ್ಲಿ ಒಟ್ಟು 319 ಮತಗಳ ಪೈಕಿ 283 ಮತಗಳು ಚಲಾವಣೆಯಾದವು.



ಹಿರಿಯೂರು ಕೃಷಿ ಪತ್ತಿನ ಸಹಕಾರ ಸಂಘದ ಆಡಳಿತ ಮಂಡಳಿ ನಿರ್ದೇಶಕರ ಚುನಾವಣೆಯಲ್ಲಿ ಭರ್ಜರಿ ಜಯಗಳಿಸಿದ ಹಿರಿಯೂರು ನವೀನ್ ಬಣದ ನಿರ್ದೇಶಕರು ಮತ್ತು ಅವರ ಬೆಂಬಲಿಗರು ವಿಜಯದ ಸಂಕೇತ ಪ್ರದರ್ಶಿಸಿ ವಿಜಯೋತ್ಸವ ಆಚರಿಸಿದರು.

ಉಳಿದಂತೆ ಮಾ.7ರಂದು ಸಾಲಗಾರರ ಕ್ಷೇತ್ರದಿಂದ ಆಯ್ಕೆ ಬಯಸಿ ರಾಜೇಶ್ವರಿ, ಎಚ್.ಎಂ. ಕೋಮಲ, ಎಂ.ಎಸ್.ರಾಜಶೇಖರಮೂರ್ತಿ, ಎಚ್.ಎಂ.ಮನೋಜ್ ಕುಮಾರ್, ಎಂ.ಗಿರಿಮಲ್ಲಯ್ಯ ಹಾಗು ಎಂ.ರವಿಕುಮಾರ್, ಸಾಲಗಾರರಲ್ಲದ ಕ್ಷೇತ್ರ ದಿಂದ ಗುರುಮಲ್ಲಪ್ಪ (ಶೇಖರಪ್ಪ) ಉಮೇದುವಾರಿಕೆ ಸಲ್ಲಿಸಿ, ಬೇರಾವುದೇ ನಾಮಪತ್ರ ಸಲ್ಲಿಕೆಯಾಗದ ಹಿನ್ನೆಲೆಯಲ್ಲಿ ಅವಿರೋಧವಾಗಿ ಆಯ್ಕೆಯಾದರು. ಚುನಾವಣಾಧಿಕಾರಿ ಹಸೀನಾ ಮಾರ್ಚ್ 7 ಹಾಗು 14 ರಂದು ನಡೆದ ಚುನಾವಣೆಯಲ್ಲಿ ಚುನಾವಣಾಧಿಕಾರಿಯಾಗಿ ಭಾಗವಹಿಸಿ ಅಭ್ಯರ್ಥಿಗಳ ಅವಿರೋಧ ಆಯ್ಕೆ ಹಾಗು ಚುನಾವಣೆ ಮೂಲಕ ಆಯ್ಕೆಯಾದ ವಿಜೇತ ಅಭ್ಯರ್ಥಿಗಳ ಫಲಿತಾಂಶ ಪ್ರಕಟಿಸಿದರು. ಸಹಕಾರ ಸಂಘದ ಎಲ್ಲ 12 ಸ್ಥಾನಗಳನ್ನು ಜಯಗಳಿಸಿದ ಹಿನ್ನೆಲೆಯಲ್ಲಿ ಸಹಕಾರ ಸಂಘದ ಆವರಣದಲ್ಲಿ ವಿಜೇತ ಅಭ್ಯರ್ಥಿಗಳು ಹಾಗು ಮುಖಂಡರು ವಿಜಯೋತ್ಸವ ಆಚರಿಸಿದರು.

ಈ ವೇಳೆ ಮಾತನಾಡಿದ ಕೆಡಿಪಿ ಸದಸ್ಯ ಹಿರಿಯೂರು ನವೀನ್ ಮಾತನಾಡಿ ಚುನಾವಣೆ ಮೂಲಕ ಹಾಗು ಅವಿರೋಧವಾಗಿ ಆಯ್ಕೆಯಾಗಿರುವ ಸಹಕಾರ ಮಂಡಳಿಯ ಎಲ್ಲ ನಿರ್ದೇಶಕರು ಸಂಘವನ್ನು ಅಭಿವೃದ್ಧಿಯತ್ತ ಕೊಂಡೊಯ್ಯುವ ಜೊತೆಗೆ ಈ ಭಾಗದ ರೈತರಿಗೆ ಹೆಚ್ಚಿನ ಸಾಲ ಸೌಲಭ್ಯ ದೊರಕಿಸಿಕೊಡುವ ನಿಟ್ಟಿನಲ್ಲಿ ಕಾರ್ಯ ನಿರ್ವಹಿಸಿ ತಾಲೂಕಿನಲ್ಲಿಯೇ ಸಂಘವನ್ನು ಮಾದರಿ ಸಂಘ ಮಾಡಲು ಸಂಘಟಿತ ಪ್ರಯತ್ನ ಮಾಡಬೇಕೆಂದು ಸಲಹೆ ನೀಡಿದರು.

ಡೈರಿ ಕಾರ್ಯದರ್ಶಿ ನಿಲಸೋಗೆ ನಂಜುಂಡ ಸ್ವಾಮಿ ಮಾತನಾಡಿ ಗ್ರಾಮದ ಹಿರಿಯರಾದ ನಾಗಪ್ಪನವರ ಮಾರ್ಗದರ್ಶನದಲ್ಲಿ ಎಲ್ಲರೂ ಒಮ್ಮತವಾಗಿ ನಿರ್ದೇಶಕರಾಗಿ ಆಯ್ಕೆಯಾಗಿ ಬಂದಿದ್ದಾರೆ. ಗೆಲುವಿನಿಂದ ಬೀಗಬೇಕಿಲ್ಲ. ಮುಂದೆ ಅಭಿವೃದ್ಧಿ ಕೆಲಸ ಮಾಡುವ ವಿಚಾರದಲ್ಲಿ ಈಗಿನ ಉತ್ಸಾಹ, ಹುಮ್ಮಸ್ಸು ಇದೇ ರೀತಿ ಇರಬೇಕಾಗುತ್ತದೆ. ಪತ್ತಿನ ಸಹಕಾರ ಸಂಘವನ್ನು ಯಾವುದೇ ಭೇದ ಭಾವ ಮಾಡದೇ ಮತ್ತಷ್ಟು ಎತ್ತರಕ್ಕೆ ಕೊಂಡೊಯ್ಯಲು ಎಲ್ಲರೂ ತಮ್ಮ ಶ್ರಮ ಹಾಕಬೇಕಾಗುತ್ತದೆ ಎಂದು ಸಲಹೆ ನೀಡಿದರು.

ಈ ವೇಳೆ ಸಹಕಾರ ಸಂಘದ ಮಾಜಿ ಅಧ್ಯಕ್ಷ ನಾಗಪ್ಪ, ಶಿವಣ್ಣ, ರೇಣುಕಣ್ಣ, ಪರಮೇಶ್, ಚೌಹಳ್ಳಿ ಮಹದೇವಪ್ಪ, ಡಿ.ಸೋಮಶೇಖರ್, ಪ್ರದೀಪ್ ಕುಮಾರ್, ವೆಂಕಟೇಶ್, ಮಹದೇವಸ್ವಾಮಿ, ಸೋಮಣ್ಣ, ಶಂಕರ, ತ್ರಿಪುರ, ಸಿಬಿ ಹುಂಡಿ ಗೌಡ್ರ ಸೋಮಣ್ಣ, ಸಿ.ಎಸ್.ನಿಂಗಪ್ಪ, ನಿಲಸೋಗೆ ಬಸವರಾಜು, ರೇವಣ್ಣ, ಮಹದೇವಪ್ರಸಾದ್, ಸಿ.ಪಿ.ಮಹದೇವಪ್ಪ, ವೀರಪ್ಪ, ಪೃಥ್ವಿ, ಕರಿಬಸವೇಗೌಡ, ಸಿ.ಎಸ್. ನಂದೀಶ್, ಕಾಂಗ್ರೆಸ್ ಮುಖಂಡ ಎಂ.ಗಿರೀಶ್, ಸಂಘದ ಕಾರ್ಯದರ್ಶಿ ಉಮೇಶ್ ಸೇರಿದಂತೆ ಮತ್ತಿತರರಿದ್ದರು.

ನಗರ್ಲೆ ಗ್ರಾಮದಲ್ಲಿ ನವಜಾತ ಶಿಶು ಮೃತ ದೇಹ ಪತ್ತೆ

ನಂಜನಗೂಡು: ತಾಲೂಕಿನ ನಗರ್ಲೆ ಗ್ರಾಮದ ಕಪಿಲಾ ನದಿ ಕಡೆಗೆ ಹೋಗುವ ದಾರಿಯಲ್ಲಿನ ಕುಂಬಾರ ಗುಂಡಿ ನಾಲೆ ಹಳ್ಳದಲ್ಲಿ ಆಗ ತಾನೆ ಜನಿಸಿದ ನವಜಾತ ಗಂಡು ಶಿಶುವಿನ ಮೃತ ದೇಹವು ಪತ್ತೆಯಾಗಿದೆ.

ಕಳೆದ ಎರಡು ದಿನಗಳ ಹಿಂದೆಯಷ್ಟೇ ಜನಿಸಿದ್ದ ನವಜಾತ ಗಂಡು ಶಿಶುವನ್ನು ಪೋಷಕರು ಎಸೆದು ಹೋಗಿದ್ದಾರೆ. ಗ್ರಾಮಸ್ಥರು ನವಜಾತ ಶಿಶುವಿನ ಮೃತ ದೇಹವನ್ನು ಕಂಡು ಅಂಗನವಾಡಿ ಕಾರ್ಯಕರ್ತೆಯರಿಗೆ ವಿಷಯ ಮುಟ್ಟಿಸಿದ್ದಾರೆ, ವಿಷಯ ತಿಳಿದು ಸ್ಥಳಕ್ಕೆ ಬಿಳಿಗೆರೆ ಯೋಜನೆಯ ಸಿಡಿಪಿಓ ರಾಘವೇಂದ್ರ ಭೇಟಿ ನೀಡಿ ಬಿಳಿಗೆರೆ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

ಸಿಡಿಪಿಓ ರಾಘವೇಂದ್ರರವರ ದೂರನ್ನು ಆಧರಿಸಿ ಬಿಳಿಗೆರೆ ಪೊಲೀಸ್ ಠಾಣೆಯ ಪಿಎಸ್ಐ ಬಸಪ್ಪ ಕರವಿ ಸ್ಥಳಕ್ಕೆ ಭೇಟಿ ನೀಡಿ ಶಿಶುವಿನ ಶವವನ್ನು ಮೈಸೂರಿನ ಕೆ.ಆರ್.ಆಸ್ಪತ್ರೆಗೆ ಮರಣೋತ್ತರ ಪರೀಕ್ಷೆಗಾಗಿ ರವಾನಿಸಿದರು.

ಸಿಡಿಪಿಓ ರಾಘವೇಂದ್ರ ಮಾತನಾಡಿ ಅಂಗನವಾಡಿ ಕಾರ್ಯಕರ್ತೆ ಮಾಹಿತಿಯ ಮೇರೆಗೆ ನಗರ್ಲೆ ಗ್ರಾಮದ ಕುಂಬಾರ ಗುಂಡಿ ನಾಲೆಯಲ್ಲಿ ಆಗತಾನೆ ಜನಿಸಿದ್ದ ನವಜಾತ ಗಂಡು ಶಿಶುವಿನ ಮೃತ ದೇಹವು ಪತ್ತೆಯಾಗಿತ್ತು, ಹೊಕ್ಕಳ ಬಳ್ಳಿಯನ್ನು ಸಹ ಕತ್ತರಿಸದೆ ಇರುವುದರಿಂದ ಇದು ನವಜಾತ ಶಿಶು ಎಂದು ಖಚಿತವಾಗಿದೆ, ಕಾನೂನು ಕ್ರಮ ಜರುಗಿಸುವಂತೆ ಬಿಳಿಕೆರೆ ಪೊಲೀಸ್ ಠಾಣೆಗೆ ದೂರು ನೀಡಲಾಗಿದೆ ಎಂದರು.

ಈ ಸಂಬಂಧ ಬಿಳಿಗೆರೆ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ಆಕಸ್ಮಿಕ ಬೆಂಕಿಗೆ ಎರಡು ರಾಗಿ ಮೆದೆ ಭಸ್ಮ



ಸರಗೂರು, ಮಾ.14– ತಾಲೂಕಿನ ಹುಲ್ಲೇಮಾಳ ಗ್ರಾಮದಲ್ಲಿ ರಾಗಿ ಮೆದೆಗೆ ಆಕಸ್ಮಿಕವಾಗಿ ಬೆಂಕಿ ಬಿದ್ದು ಸುಮಾರು 5 ಎಕರೆ ರಾಗಿ ಮೆದೆ ಸಂಪೂರ್ಣ ಸುಟ್ಟು ಭಸ್ಮವಾಗಿದೆ ಗ್ರಾಮದ ಮಂಜುನಾಥ್ ಮತ್ತು ಬಸವರಾಜು, ಎಂಬುವರಿಗೆ ಸೇರಿದ ಎರಡು ರಾಗಿ ಮೆದೆಗಳು ಶನಿವಾರ ಮಧ್ಯಾಹ್ನ ಬೆಂಕಿಗೆ ಆಹುತಿಯಾಗಿ ಸಂಪೂರ್ಣವಾಗಿ ರಾಗಿ ಮದೆ ಭಸ್ಮವಾಗಿದೆ. ಮನೆಯ ಹಿತ್ತಲಿನಲ್ಲಿ 15 ದಿನಗಳ ಹಿಂದೆ ಕಟಾವು ಮಾಡಿ ರಾಗಿ ಮೆದೆಯನ್ನು ಹಾಕಲಾಗಿತ್ತು, ಆದರೆ ಇಂದು ಮೆದೆಗೆ ಬೆಂಕಿ ಬಿದ್ದು ರಾಗಿ ಮೆದೆ ಸಂಪೂರ್ಣ ಭಸ್ಮವಾಗಿದೆ. ತಕ್ಷಣ ಅಕ್ಕಪಕ್ಕದ ಮನೆಯವರು ಬಂದು ಬೆಂಕಿಯನ್ನು ನಂದಿಸಲು ಶ್ರಮ ಪಟ್ಟರೂ ಬೆಂಕಿ ಹುರಿಯು ಹೆಚ್ಚಾಗಿ ರಾಗಿ ಮೆದೆ ಸಂಪೂರ್ಣ ಭಸ್ಮವಾಗಿದೆ.

ಇದೆ ಸಂದರ್ಭದಲ್ಲಿ ರೈತ ಮಂಜುನಾಥ್, ಮಾತನಾಡಿ ನಾವು ಕಷ್ಟಪಟ್ಟು ಕೃಷಿ ಮಾಡಿ ರಾಗಿ ಬೆಳೆದು ಮೆದೆ ಹಾಕಿ ಎರಡು ಮೂರು ದಿನಗಳಲ್ಲಿ ರಾಗಿ ಒಕ್ಕಣೆ ಮಾಡಬೇಕಿತ್ತು. ಅಂತಹದರಲ್ಲಿ ಮೆದೆಗೆ ಬೆಂಕಿ ಬಿದ್ದು ರಾಗಿ ಮೆದೆ ಸಂಪೂರ್ಣ ಭಸ್ಮವಾಗಿದೆ. ಈ ರೀತಿ ಆಗಿರುವುದರಿಂದ ನಮಗೆ ನಷ್ಟವಾಗಿದೆ ಹಾಗೆ ಹಸು ಕರುಗಳಿಗೆ ಮೇವು ಇಲ್ಲದಂತಾಗಿದೆ ಎಂದು ರೈತ ಮಂಜುನಾಥ್ ತಮ್ಮ ಅಳಲನ್ನು ತೋಡಿಕೊಂಡರು.

ಆಕಸ್ಮಿಕವಾಗಿ ಎರಡು ಮೆದೆಗಳು ಬೆಂಕಿಗೆ ಆಹುತಿಯಾಗಿರುವುದರಿಂದ ಸುಮಾರು 2 ಲಕ್ಷಕ್ಕೂ ಹೆಚ್ಚು ನಷ್ಟವಾಗಿದೆ. ಕೂಡಲೇ ಅಧಿಕಾರಿಗಳು ಸೂಕ್ತ ಪರಿಹಾರ ನೀಡಬೇಕು ಎಂದು ಅವರು ಆಗ್ರಹಿಸಿದ್ದಾರೆ. ಸ್ಥಳಕ್ಕೆ ಕಂದಾಯ ಇಲಾಖಾಧಿಕಾರಿ ನಾಗಪ್ಪ ಭೇಟಿ ನೀಡಿ ಪರಿಶೀಲಿಸಿ ಮಾಹಿತಿ ಪಡೆದಿದ್ದಾರೆ.

25 ಮಂದಿಗೆ ಹೊಲಿಗೆ ತರಬೇತಿ



ಹೆಚ್.ಡಿ.ಕೋಟೆ: ತಾಲೂಕಿನ ಕ್ಯಾತನಹಳ್ಳಿ ಗ್ರಾಮದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಚಿಕ್ಕದೇವಮ್ಮ, ಶ್ರೀದೇವಿ ಮಹಿಳಾ ಜ್ಞಾನವಿಕಾಸ ಕೇಂದ್ರದ 25 ಸದಸ್ಯರುಗಳಿಗೆ 3 ತಿಂಗಳ ಕಾಲ ಹೊಲಿಗೆ ತರಬೇತಿಯನ್ನು ಹಮ್ಮಿಕೊಂಡಿದ್ದು, ತರಬೇತಿಯ ಸಮಾರೋಪ ಸಮಾರಂಭ ನಡೆಯಿತು.

ಕಾರ್ಯಕ್ರಮ ಕುರಿತು ತಾಲೂಕು ಯೋಜನಾಧಿಕಾರಿ ಬಿ. ಭಾಸ್ಕರ್ ಮಾತನಾಡಿ, ಮಹಿಳಾ ಜ್ಞಾನ ವಿಕಾಸ ಹೇಮಾವತಿ ಹೆಗ್ಗಡೆ ಅವರು ಕನಸಿನ ಕೂಸು, ಗ್ರಾಮೀಣ ಮಹಿಳೆಯರು ಸ್ವಾವಲಂಬಿಯಾಗಿ ಬದುಕುವ ದಾರಿಯಾಗಬೇಕು ಸ್ವ ಉದ್ಯೋಗದಿಂದ ಕುಟುಂಬದ ಆರ್ಥಿಕ ಸ್ಥಿತಿಯನ್ನು ನಿಭಾಯಿಸಬಹುದು ಎಂದರು.

ಕಾರ್ಯಕ್ರಮದಲ್ಲಿ ಕ್ಯಾತನಹಳ್ಳಿ ಶಾಲೆಯ ಶಿಕ್ಷಕಿ ಸುಜಾತಾ ತಾಲೂಕು ಜ್ಞಾನ ವಿಕಾಸ ಸಮನ್ವಯಾಧಿಕಾರಿ ಆಶಾ, ವಲಯ ಮೇಲ್ವಿಚಾರಕಿ ವೀಣಾ, ಸೇವಾಪ್ರತಿ ನಿಧಿ ಅನಿತಾ, ಪ್ರಮೀಳಾ, ಇತರರಿದ್ದರು.

ಶ್ರೀ ಶನೇಶ್ವರಸ್ವಾಮಿಯ ಜಾತ್ರಾ ಮಹೋತ್ಸವ

ತಿ.ನರಸೀಪುರ, ಮಾ.14– ಶನಿಯನ್ನು ಕೋಪದ ದೇವನೆಂದು, ಶಿಕ್ಷೆಯ ದೇವನೆಂದು ಹೇಳಲಾಗುತ್ತದೆಯಾದರೂ ಆತನನ್ನು ಯಾರು ಪೂಜಿಸಿ ಸ್ಮರಿಸಿ, ಭಕ್ತಿ ಕೈಂಕರ್ಯ ಮಾಡುತ್ತಾರೋ ಅವರ ಬೆನ್ನಹಿಂದೆ ಇದ್ದು ಒಳ್ಳೆಯದನ್ನೇ ಮಾಡುತ್ತಾನೆ ಎಂದು ಮಳವಳ್ಳಿ ತಾಲೂಕು ಹಣಕೊಳ ಪಟ್ಟದ ಮಠದ ಸಿದ್ದನ ಶಿವಾನಂದ ಶ್ರೀ ಗಳು ಹೇಳಿದರು.

ತಾಲೂಕಿನ ಚಿಟಗಂಯ್ಯನ ಕೊಪ್ಪಲು ಗ್ರಾಮದಲ್ಲಿರುವ ಶ್ರೀ ಶನೇಶ್ವರ ಸ್ವಾಮಿ ದೇವಸ್ಥಾನದ ಆವರಣದಲ್ಲಿ ಶನಿವಾರ ಹಮ್ಮಿಕೊಳ್ಳಲಾಗಿದ್ದ 18ನೇ ವರ್ಷದ ಶ್ರೀ ಶನೇಶ್ವರ ಸ್ವಾಮಿಯ ಜಾತ್ರಾ ಮಹೋತ್ಸವ ಕಾರ್ಯಕ್ರಮದಲ್ಲಿ ಭಕ್ತಾಧಿಗಳಿಗೆ ಆಶೀರ್ವಚನ ನೀಡಿ ಅವರು ಮಾತನಾಡಿದರು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಕ್ಷೇತ್ರ ಶಿಕ್ಷಣಾಧಿಕಾರಿ ಶಿವಮೂರ್ತಿ, ಇಂದಿನ ವೇಗದ ಜಗತ್ತಿನಲ್ಲಿ ನಮಗೆ ಶಾಂತಿ, ಸಂಯಮ ಬಹಳ ಮುಖ್ಯವಾಗುತ್ತದೆ. ಶನಿದೇವರ ಆರಾಧನೆ ಎಂದರೆ ಅದು ಕೇವಲ ಎಳ್ಳು ದೀಪ ಹಚ್ಚುವುದಕ್ಕಷ್ಟೇ ಸೀಮಿತವಲ್ಲ. ನಮ್ಮೊಳಗಿರುವಂತಹ ಅಹಂಕಾರವನ್ನು ಸುಟ್ಟು ಹಾಕಿ, ಸತ್ಯದ ಹಾದಿಯಲ್ಲಿ ನಡೆಯುವ ಸಂಕಲ್ಪ ಮಾಡುವುದು ನಿಜವಾದ ಆರಾಧನೆ ಯಾಗುತ್ತದೆ ಎಂದರು.



ಹಣಕೊಳ ಪಟ್ಟದ ಮಠದ ಸಿದ್ದನ ಶಿವಾನಂದ ಶ್ರೀಗಳು ಆಶೀರ್ವಚನ ನೀಡಿದರು.

ವಾರ್ಷಿಕೋತ್ಸವದ ಹಿನ್ನೆಲೆಯಲ್ಲಿ ದೇವಸ್ಥಾನದಲ್ಲಿ ಶ್ರೀ ಶ್ರೀ ಶ್ರೀ ಶನೇಶ್ವರ ಸ್ವಾಮಿಗೆ ರುದ್ರಾಭಿಷೇಕ, ಸಹಸ್ರತುಳಸೀ ಅರ್ಚನೆ, ರಾಜೋಪಚಾರ ಬೆಳಗ್ಗೆ 5.30ಕ್ಕೆ ಮಹಾ ಮಂಗಳಾರತಿ, ತೀರ್ಥ ಪ್ರಸಾದ ವಿನಿಯೋಗ, 101 ಮಕ್ಕಳಿಂದ ಹಾಲರವಿ ಉತ್ಸವ ಹಾಗೂ ಶನೇಶ್ವರಸ್ವಾಮಿಗೆ ಬೆಳ್ಳಿಕಿರೀಟ ಧಾರಣೆ, ಮಲಿಯೂರು ಬೀರೇಶ್ವರಸ್ವಾಮಿ, ಬಳ್ಳಕೆರೆ ಹುಚ್ಚರಾಯ ಬೀರೇಶ್ವರ ಸ್ವಾಮಿ, ದೊಡ್ಡ ಮೂಲಗೂಡು ದೊಡ್ಡಯ್ಯ ಬೀರೇಶ್ವರ ಸ್ವಾಮಿ, ಗಾಮನಹಳ್ಳಿ ಹುಚ್ಚರಾಯ ಬೀರೇಶ್ವರಸ್ವಾಮಿ, ಹೆಮ್ಮರಗಾಲ ಬೀರೇಶ್ವರ ಸ್ವಾಮಿ, ಹೊನಗನಹಳ್ಳಿ ಬೀರೇಶ್ವರ ಸ್ವಾಮಿ, ಚಿದರವಳ್ಳಿ ಬೀರೇಶ್ವರ ಸ್ವಾಮಿ, ಬೆನಕನಹಳ್ಳಿ ಹೊನ್ನಹುಣಸೆ ಬೀರೇಶ್ವರ ಸ್ವಾಮಿ, ನಂಜಾಪುರದ ಊರದಮ್ಮ ದೇವರುಗಳ ಉತ್ಸವ, ಸ್ವಾಮಿಗೆ ಹೂವಿನ ಅಲಂಕಾರ ಏರ್ಪಡಿಸಲಾಗಿತ್ತು.

ಪುಟ್ಟ ರಂಗಮ್ಮ ನಿಧನ



ತಿ.ನರಸೀಪುರ ಮಾ 14– ಪಟ್ಟಣದ ತ್ರಿವೇಣಿನಗರ ನಿವಾಸಿಯಾಗಿದ್ದ ನಿವೃತ್ತ ಮುಖ್ಯಶಿಕ್ಷಕಿ ಪುಟ್ಟ ರಂಗಮ್ಮ (70) ಇಂದು ಮುಂಜಾನೆ ನಿಧನ ಹೊಂದಿದರು.

ಮೃತರು ಬೈರಾಪುರ ಗ್ರಾಪಂ ಮಾಜಿ ಸದಸ್ಯ ಹೇಮಂತ್, ಸೇರಿದಂತೆ ಇಬ್ಬರು ಪುತ್ರರನ್ನು ಅಗಲಿದ್ದು ಇವರ ಅಂತ್ಯಕ್ರಿಯೆಯನ್ನು ಕುಪ್ಪೆಗಾಲ ಗ್ರಾಮದಲ್ಲಿ ಸಂಜೆ ನೆರವೇರಿಸಲಾಯಿತು.

ಪುರಸಭಾ ಮಾಜಿ ಅಧ್ಯಕ್ಷ ಸಿ.ಪ್ರಕಾಶ್, ನಂಜುಂಡಸ್ವಾಮಿ, ಸದಸ್ಯ ಬಾದಾಮಿ ಮಂಜು, ಗಣೇಶ್, ಮುಖ್ಯಾಧಿಕಾರಿ ಶ್ರೀನಿವಾಸ್, ಎಂ.ಮಿಥುನ್, ಅಂಬೇಡ್ಕರ್ ಸಂಘದ ಅಧ್ಯಕ್ಷ ಮಹೇಶ್, ಶಿವಣ್ಣ, ಸಂತಾಪ ಸೂಚಿಸಿ ಅಂತಿಮ ದರ್ಶನ ಪಡೆದರು.

ಮೂರನೇ ಪುಟದಿಂದ

ಮಾರಾಟ ವಿರುದ್ಧ ಕಠಿಣ ಕ್ರಮ

ಮಾರ್ಚ್ 27 ರಂದು ವಿಶೇಷ ಸಂಪುಟ ಸಭೆ ಕರೆದಿದ್ದಾರೆ ಎಂದು ಹೇಳಿದರು.

ಪೊಲೀಸ್ ಇಲಾಖೆಯ 8000 ಹುದ್ದೆ ಭರ್ತಿ: ಆ ದಿನ ಸಮಸ್ಯೆ ಬಗೆಹರಿಯುತ್ತದೆ ಎಂದು ನಾವು ನಿರೀಕ್ಷಿಸುತ್ತೇವೆ. ಸಂಪುಟದ ನಿರ್ಧಾರದ ನಂತರ, ಸರ್ಕಾರ ಆದೇಶ ಹೊರಡಿಸುತ್ತದೆ. ಅದರ ನಂತರ ನೇಮಕಾತಿ ಪ್ರಕ್ರಿಯೆ ಪ್ರಾರಂಭವಾಗುತ್ತದೆ. 56,000 ಕ್ಕೂ ಹೆಚ್ಚು ಖಾಲಿ ಹುದ್ದೆಗಳಿಗೆ ನೇಮಕಾತಿ ನಡೆಸುವುದಾಗಿ ಸರ್ಕಾರ ಹೇಳಿದೆ. ನನ್ನ ಇಲಾಖೆಯಲ್ಲಿ (ಗೃಹ ಇಲಾಖೆ) 8,000 ಖಾಲಿ ಹುದ್ದೆಗಳನ್ನು ಭರ್ತಿ ಮಾಡಲಾಗುತ್ತದೆ. ನಾವು ತಕ್ಷಣ ಒಳ ಮೀಸಲಾತಿ ಅಳವಡಿಸಿಕೊಂಡು ಪ್ರಕ್ರಿಯೆಯನ್ನು ಪ್ರಾರಂಭಿಸುತ್ತೇವೆ ಎಂದರು.

ಸಿಲಿಂಡರ್ ಸಮಸ್ಯೆಗೆ ಪರಿಹಾರ

ದಾವಣಗೆರೆ ದಕ್ಷಿಣ ಹಾಗೂ ಬಾಗಲಕೋಟೆ ವಿಧಾನ ಸಭಾ ಕ್ಷೇತ್ರಗಳ ಉಪ ಚುನಾವಣಾ ದಿನಾಂಕ ಒಂದು ವಾರದಲ್ಲಿ ಘೋಷಣೆ ಆಗುವ ಸಾಧ್ಯತೆ ಇದೆ. ಎರಡೂ ಕ್ಷೇತ್ರಗಳಲ್ಲಿ ಪ್ರತಿನಿಧಿಸುತ್ತಿದ್ದವರ ಕುಟುಂಬ ಸದಸ್ಯರಲ್ಲದೆ, ಇತರರೂ ಟಿಕೆಟ್ ಆಕಾಂಕ್ಷಿಗಳಾಗಿದ್ದಾರೆ, ಯಾರಿಗೆ ಟಿಕೆಟ್ ನೀಡಬೇಕೆಂಬ ಬಗ್ಗೆ ಕಾಂಗ್ರೆಸ್ ವರಿಷ್ಠರು ತೀರ್ಮಾನ ಕೈಗೊಳ್ಳಲಿದ್ದಾರೆ ಎಂದರು.

ಇ–ಸ್ವತ್ತು ಸಮಸ್ಯೆಗೆ ಪರಿಹಾರ: ರಾಜ್ಯದಲ್ಲಿ ಇ–ಸ್ವತ್ತು ಸಮಸ್ಯೆ ಬಗೆಹರಿಸುವುದಾಗಿ ತಿಳಿಸಿದ ಮುಖ್ಯಮಂತ್ರಿ ಸಿದ್ದ ರಾಮಯ್ಯ, ಹೊಸ ಪ್ರಯೋಗಗಳು ನಡೆದಾಗ ಕೆಲವು ಅಡೆತಡೆ ಸಹಜ, ಅವನ್ನು ಸರ್ಕಾರ ಪರಿಹರಿಸಲಿದೆ.

ಕೃಷ್ಣಾ ಮೇಲ್ದಂಡೆ ಯೋಜನೆ ಸಂತ್ರಸ್ತರಿಗೆ ಪರಿಹಾರ ಚೆಕ್ ವಿತರಣಾ ಕಾರ್ಯ ಇಂದಿನಿಂದ ಪ್ರಾರಂಭಿಸಲಾಗಿದ್ದು, ಎಲ್ಲರಿಗೂ ಮೂರ್‍ನಾಲ್ಕು ವರ್ಷಗಳಲ್ಲಿ ವಿತರಿಸಲಾಗುವುದು ಎಂದರು. ಬಿಜೆಪಿ ನಾಲ್ಕು ವರ್ಷ ಅಧಿಕಾರದಲ್ಲಿದ್ದರೂ ವೈದ್ಯಕೀಯ ಕಾಲೇಜು ಮಾಡಲಿಲ್ಲ, ನಾವು ಈಗಾಗಲೇ ಟೆಂಡರ್ ಕರೆದು ಏಜೆನ್ಸಿ ನಿಗದಿಪಡಿಸಿದ್ದೇವೆ. ಕಾಮಗಾರಿ ಆರಂಭವಾಗ ಬೇಕಿದ್ದು ಅಡಿಗಲ್ಲು ಹಾಕಲಾಗುತ್ತಿದೆ ಎಂದರು.

ಇದೇನು ರಾಜರ ಆಡಳಿತಾನಾ?

ರಾಜ್ಯದಲ್ಲಿದೆ ಡಿನ್ನರ್ ಪಾರ್ಟಿ: ರಾಜ್ಯದಲ್ಲಿ ಇರೋದು ಡಿನ್ನರ್ ಪಾರ್ಟಿ ಸರ್ಕಾರ. ಡಿ.ಕೆ.ಶಿವಕುಮಾರ್ ಡಿನ್ನರ್ ಪಾರ್ಟಿ ಆದ ಮೇಲೆ ಈಗ ಸಿದ್ದರಾಮಯ್ಯ ಟೀಂ ಪಾರ್ಟಿ ಮಾಡ್ತಿದೆ. ಸಿದ್ದರಾಮಯ್ಯ ಗ್ಯಾಂಗ್ ಪ್ರತಿದಿನ ಡಿನ್ನರ್ ಪಾಲಿಟಿಕ್ಸ್ ಮಾಡಿ ಅಂತ ಸೂಚಿಸಿದ್ದಾರೆ. ರಾಜ್ಯದ ಜನರಿಗೆ ಗೊತ್ತಿಲ್ಲ ಯಾವ ಡಿನ್ನರ್ ಮಾಡಬೇಕು ಅಂತ. ಆದರೆ, ಇವರು ಪ್ರತಿದಿನ ಡಿನ್ನರ್ ಮಾಡ್ತಿದ್ದಾರೆ. ಆದರೆ, ಯಾರು ಸಿಎಂ ಅನ್ನೋ ಚರ್ಚೆ ವಿನಃ ಬೇರೆ ಯಾವುದೇ ಅಭಿವೃದ್ಧಿ ವಿಚಾರ ಚರ್ಚೆಯನ್ನ ಮಾಡುತ್ತಿಲ್ಲ. ಕಾಂಗ್ರೆಸ್‌ನಲ್ಲಿ ಡಿನ್ನರ್ ಪಾರ್ಟಿ ಜಾಸ್ತಿ ಆಗಿದೆ. ಇದು ಡಿನ್ನರ್ ಪಾರ್ಟಿ ಸರ್ಕಾರ ಆಗಿದೆ ಅಂತ ಕಿಡಿಕಾರಿದರು. ಬಜೆಟ್ ಸರಿಯಿಲ್ಲ ಎಂಬ ಕಾಂಗ್ರೆಸ್ ಶಾಸಕ ಇಕ್ಬಾಲ್ ಹುಸೇನ್ ಹೇಳಿಕೆಗೆ ಪ್ರತಿಕ್ರಿಯೆ ನೀಡಿದ ಅವರು, ಕಾಂಗ್ರೆಸ್‌ನ ಎಲ್ಲಾ ಶಾಸಕರು ಹೇಳಿದ್ದಾರೆ ಬಜೆಟ್ ಸರಿ ಇಲ್ಲ ಅಂತ. ಬಜೆಟ್ ಸರಿ ಇಲ್ಲ ಅಂತ ಬಹುತೇಕ ಕಾಂಗ್ರೆಸ್ ಶಾಸಕರು ಬೈಕೊಂಡು ಆಚೆ ಬಂದು ಕುಳಿತಿದ್ದರು. ಕಾಂಗ್ರೆಸ್‌ನ ಎಲ್ಲಾ ಶಾಸಕರ ಪರವಾಗಿ ಇಕ್ಬಾಲ್ ಹುಸೇನ್ ಮಾತಾಡಿದ್ದಾರೆ. ಈ ಬಜೆಟ್ ಸರಿ ಇಲ್ಲ ಅಂತ ಹೇಳಿರೋ ಇಕ್ಬಾಲ್ ಹುಸೇನ್‌ಗೆ ಧನ್ಯವಾದಗಳನ್ನ ಹೇಳ್ತೀನಿ ಎಂದರು.

92,700 ಮೆಟ್ರಿಕ್ ಟನ್ ಎಲ್‌ಪಿಜಿ

ಇಂದು ಸುದ್ದಿಗೋಷ್ಠಿಯಲ್ಲಿ ಪೆಟ್ರೋಲಿಯಂ ಸಚಿವಾಲಯದ ಜಂಟಿ ಕಾರ್ಯದರ್ಶಿ (ಮಾರುಕಟ್ಟೆ ಮತ್ತು ತೈಲ ಸಂಸ್ಕರಣಾಗಾರ) ಸುಜಾತಾ ಶರ್ಮಾ ಕೂಡ ಮಾತನಾಡಿದ್ದು, 'ಭಾರತದಲ್ಲಿ ಸಾಕಷ್ಟು ಪ್ರಮಾಣದ ಕಚ್ಚಾ ತೈಲ ಪೂರೈಕೆ ಇದೆ. ಸಂಸ್ಕರಣಾಗಾರಗಳು ಪೂರ್ಣ ಸಾಮರ್ಥ್ಯದಲ್ಲಿ ಕಾರ್ಯನಿರ್ವಹಿಸುತ್ತಿವೆ. ಚಿಲ್ಲರೆ ಮಾರಾಟ ಮಳಿಗೆಗಳಲ್ಲಿ ಯಾವುದೇ ಇಂಧನದ ಕೊರತೆ ಕಂಡುಬಂದಿಲ್ಲ. ಸಾಕಷ್ಟು ಪೆಟ್ರೋಲ್ ಮತ್ತು ಡೀಸೆಲ್ ಲಭ್ಯವಿದೆ' ಎಂದು ಹೇಳಿದ್ದಾರೆ. ಭಾರತವು ತನ್ನ ಅಗತ್ಯಗಳನ್ನು ಪೂರೈಸಲು ದೇಶೀಯವಾಗಿ ಸಾಕಷ್ಟು ಪೆಟ್ರೋಲ್ ಮತ್ತು ಡೀಸೆಲ್ ಅನ್ನು ಉತ್ಪಾದಿಸುತ್ತದೆ ಎಂದು ತಿಳಿಸಿದ್ದಾರೆ.

ದೇಶದಲ್ಲಿ ಸಾಕಷ್ಟು ಕಚ್ಚಾ ತೈಲದ ಸ್ಟಾಕ್ ಇದೆ. ಜನರು ಆತಂಕದಿಂದ ಎಲ್‌ಪಿಜಿ ಸಿಲಿಂಡರ್‌ಗಳನ್ನು ಬುಕ್ ಮಾಡುವುದನ್ನು ನಿಲ್ಲಿಸಿ. ಅಗತ್ಯವಿದ್ದಾಗ ಮಾತ್ರ ಬುಕ್ ಮಾಡಿ. ರಾಜ್ಯ ಸರ್ಕಾರಗಳಿಗೆ ವಾಣಿಜ್ಯ ಸಿಲಿಂಡರ್‌ಗಳನ್ನು ವಿಲೇವಾರಿ ಮಾಡಲಾಗಿದೆ. 29 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ವಾಣಿಜ್ಯ ಸಿಲಿಂಡರ್‌ಗಳ ವಿತರಣೆ ಪ್ರಾರಂಭವಾಗಿದೆ. ಎಲ್‌ಪಿಜಿ ಸಿಲಿಂಡರ್‌ಗಳ ಬ್ಲಾಕ್ ಮಾರ್ಕೆಟ್ ಮತ್ತು ಸಂಗ್ರಹವನ್ನು ನಿಯಂತ್ರಿಸಲು ವಿವಿಧ ರಾಜ್ಯ ಸರ್ಕಾರಗಳು ಹಲವೆಡೆ ದಾಳಿ ಮತ್ತು ತಪಾಸಣೆಗಳನ್ನು ನಡೆಸುತ್ತಿವೆ. ನಾಗರಿಕರು ಆನ್?ಲೈನ್ ಮೂಲಕ ಸಿಲಿಂಡರ್‌ಗಳನ್ನು ಬುಕ್ ಮಾಡಬೇಕು. ಸರತಿ ಸಾಲಿನಲ್ಲಿ ನಿಲ್ಲುವುದನ್ನು ತಪ್ಪಿಸಬೇಕು ಎಂದು ಅವರು ಒತ್ತಾಯಿಸಿದ್ದಾರೆ.

ಕ್ರೀಡಾಂಗಣಕ್ಕೆ ಶಂಕುಸ್ಥಾಪನೆ

ನೀಡುವ ಕೆಲಸ ಮಾಡುತ್ತಿದ್ದು, ಕರ್ನಾಟಕದಲ್ಲೂ ಸಹ ಯುವ ಕ್ರೀಡಾಪಟುಗಳ ಸಾಧನೆ, ಅವರ ಸಾಮರ್ಥ್ಯಕ್ಕೆ ತಕ್ಕಂತೆ ಪ್ರೋತ್ಸಾಹಿಸಲು ನಾವು ನಿಂತಿದ್ದೇವೆ. ಮೇಕ್ ಇನ್ ಇಂಡಿಯಾ ಹೆಸರಿನಡಿ ದೇಶದ ಕ್ರೀಡಾ ಕ್ಷೇತ್ರವನ್ನು ಜಾಗತಿಕ ಮಟ್ಟಕ್ಕೆ ಕೊಂಡೊಯ್ಯಬೇಕೆಂಬುದು ನಮ್ಮ ಉದ್ದೇಶವಾಗಿದೆ. ನಮ್ಮ ಕ್ರೀಡಾಪಟುಗಳು ಕೇಂದ್ರ ಸರ್ಕಾರದ ಸಹಕಾರವನ್ನು ಸಮರ್ಥವಾಗಿ ಬಳಸಿಕೊಂಡು ಉತ್ತಮ ಕ್ರೀಡಾಪಟುಗಳಾಗಬೇಕು. ಕ್ರೀಡಾಪಟುಗಳಿಗೆ ಶಿಸ್ತು ಬಹಳ ಮುಖ್ಯವಾಗಿರುತ್ತದೆ. ಜೊತೆಗೆ ಕಠಿಣ ಪರಿಶ್ರಮ ಸಹ ಅತ್ಯಗತ್ಯವಾಗಿದೆ ಎಂದು ಮಾಂಡವೀಯ ಅಭಿಪ್ರಾಯಪಟ್ಟರು.

ಖೇಲೋ ಇಂಡಿಯಾ ಯೋಜನೆಯು ಭಾರತದ ತಳಮಟ್ಟದಲ್ಲಿ ಕ್ರೀಡಾ ಸಂಸ್ಕೃತಿಯನ್ನು ಪುನರುಜ್ಜೀವನಗೊಳಿಸಲು ಮತ್ತು ದೇಶವನ್ನು ಶ್ರೇಷ್ಠ ಕ್ರೀಡಾ ರಾಷ್ಟ್ರವಾಗಿ ರೂಪಿಸಲು ಕೇಂದ್ರ ಸರಕಾರ ಜಾರಿಗೆ ತಂದ ರಾಷ್ಟ್ರೀಯ ಕಾರ್ಯಕ್ರಮವಾಗಿದೆ. ವಿಶೇಷಚೇತನರ ಬಗ್ಗೆ ನೀವು ಹೊಂದಿರುವ ಮಮತೆ, ಬದ್ಧತೆಯನ್ನು ನಾನು ಕಣ್ಣಾರೆ ನೋಡಿ ಬಹಳ ಸಂತೋಷ ತಂದಿದೆ. ನೀವು ಮಾಡುತ್ತಿರುವ ಈ ಕೆಲಸ ಶ್ಲಾಘನೀಯ ಎಲೆಕ್ಟ್ರಿಕ್ ವಾಹನಗಳನ್ನು ನೀಡುವ ಮೂಲಕ ವಿಕಲಚೇತನರಿಗೆ ಮಾತ್ರ ಸಹಾಯ ಮಾಡುತ್ತಿಲ್ಲ. ಪರಿಸರಪೂರಕ ಕೆಲಸ ಮಾಡುತ್ತಿದ್ದೀರಿ ಎಂದು ಪ್ರಶಂಸಿಸಿದರು.

ಮಂಡ್ಯ ನೆಲದಿಂದ ರಾಜ್ಯವಷ್ಟೇ ಅಲ್ಲ, ರಾಷ್ಟ್ರ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಹೆಸರು ಮಾಡಿರುವ ಕ್ರೀಡಾಪಟುಗಳು ಬಂದಿದ್ದಾರೆ. ಆ ಪೈಕಿ ನಾನು ವಿಕಾಸಗೌಡ, ಕೆ.ಆರ್. ಶಿಲ್ಪಾ ಅವರನ್ನು ನೆನಪಿಸಿಕೊಳ್ಳಲು ಬಯಸುತ್ತೇನೆ. ಇಂತಹ ಅನೇಕ ಕ್ರೀಡಾಪಟುಗಳು ಮಂಡ್ಯದ ಕೀರ್ತಿ ಯನ್ನು ಹೆಚ್ಚಿಸಿದ್ದಾರೆ. ಮುಖ್ಯವಾಗಿ ಭಾರತದ ನಂಬರ್ ಒನ್ ವೀಲ್‌ಚೇರ್ ಟೆನಿಸ್ ಆಟಗಾರ್ತಿ ಆಗಿರುವ ಶಿಲ್ಪಾ ಅವರು ಭಾರತದ ಕೀರ್ತಿಯನ್ನು ದೇಶ ವಿದೇಶಗಳಲ್ಲಿ ಮೆರೆಯುತ್ತಿದ್ದಾರೆ. ಇಂತಹ ಅಸಂಖ್ಯಾತ ಪ್ರತಿಭೆಗಳು ಇಲ್ಲಿಂದ ಬರಲಿ ಎಂದು ಆಶಯ ವ್ಯಕ್ತಪಡಿಸಿದರು.

ವೇದಿಕೆಯಲ್ಲಿ ಕೇಂದ್ರದ ಉಕ್ಕು ಹಾಗೂ ಬೃಹತ್ ಕೈಗಾರಿಕಾ ಸಚಿವ ಹೆಚ್.ಡಿ.ಕುಮಾರಸ್ವಾಮಿ, ಶಾಸಕ ಹೆಚ್.ಟಿ.ಮಂಜು, ಮಾಜಿ ಸಚಿವರಾದ ಸಿ.ಎಸ್.ಪುಟ್ಟರಾಜು, ಡಿ.ಸಿ.ತಮ್ಮಣ್ಣ, ಸಾ.ರಾ. ಮಹೇಶ್, ವಿಧಾನಪರಿಷತ್ ಸದಸ್ಯ ಕೆ.ವಿವೇಕಾನಂದ, ಮಾಜಿ ಶಾಸಕರಾದ ಕೆ.ಸುರೇಶ್‌ಗೌಡ, ಡಾ.ಕೆ.ಅನ್ನದಾನಿ, ಜೆ.ಬಿ. ಶಿವಕುಮಾರ್, ಮನ್‌ಮುಲ್ ನಿರ್ದೇಶಕ ರಾಮಚಂದ್ರ, ಜೆಡಿಎಸ್ ಜಿಲ್ಲಾಧ್ಯಕ್ಷ ಡಿ.ರಮೇಶ್, ಬಿಜೆಪಿ ರಾಜ್ಯ ಕಾರ್ಯಕಾರಿಣಿ ಸದಸ್ಯ ಡಾ.ಸಿದ್ದರಾಮಯ್ಯ, ಸೇಲ್ ಕಂಪನಿಯ ರಾಜೀವ್ ಪಾಂಡೆ, ವೈ.ಕೆ.ಪಾಟೀಲ್, ಅಭಿಯವಾರ್ ಸಾಹಿ, ಟಿವಿಎಸ್ ಕಂಪನಿಯ ಸೀತಾರಾಮನ್, ಪ್ರಸಾದ್ ಕೃಷ್ಣನ್, ಇನ್ಫೋಸೀಸ್ ಕಂಪನಿಯ ಸತೀಶ್ ಬಿ.ನಂಜಪ್ಪ, ಸಂತೋಷ್ ಅನಂತಪುರ, ಎಚ್‌ಎಂಟಿ ಕಂಪನಿಯ ರಾಜೇಶ್ ಕೊಪ್ಲಿ, ಜೆ.ಕೆ.ಪ್ರಸಾದ್, ಹಿಂದೂಜ ಕಂಪನಿಯ ಸಂಜಯ್‌ಕುಮಾರ್, ಪ್ರದೀಪ್ ಸೇರಿದಂತೆ ಹಲವು ಗಣ್ಯರು ಉಪಸ್ಥಿತರಿದ್ದರು.

ಕನ್ನಡದಲ್ಲೇ ಭಾಷಣ ಆರಂಭ: ಕೇಂದ್ರ ಸಚಿವ ಮನ್ಸುಖ್ ಮಾಂಡವೀಯ 'ಮಂಡ್ಯ ಜನರಿಗೆ ನಮಸ್ಕಾರ' ಎನ್ನುವ ಮೂಲಕ ಕನ್ನಡದಲ್ಲೇ ಭಾಷಣ ಆರಂಭಿಸಿದರು. ಜೊತೆಗೆ ಮಂಡ್ಯ ಜಿಲ್ಲೆಯ ಧಾರ್ಮಿಕ ಕ್ಷೇತ್ರಗಳಾದ ಆದಿಚುಂಚನಗಿರಿ ಹಾಗೂ ಮೇಲುಕೋಟೆ ದೇವಾಲಯಗಳನ್ನು ಸ್ಮರಿಸಿದರು.

ಆದಿಚುಂಚನಗಿರಿ ಮಠಾಧೀಶ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಮಾತನಾಡಿ, ಯುವಜನರೇ ತುಂಬಿರುವ ನಮ್ಮ ದೇಶದಲ್ಲಿ ಕ್ರೀಡಾ ಕ್ಷೇತ್ರದಲ್ಲಿ ಮುಂದೆ ಬರಬೇಕೆಂದು ಪ್ರಧಾನಿ ಮೋದಿ ಖೇಲೋ ಇಂಡಿಯಾ ಯೋಜನೆಯನ್ನು ಜಾರಿಗೆ ತಂದಿದ್ದಾರೆ. ಏಷ್ಯನ್, ಕಾಮನ್‌ವೆಲ್ತ್, ಒಲಂಪಿಕ್ ಪಂದ್ಯಾವಳಿಯಲ್ಲಿ ನಮ್ಮ ದೇಶದ ಪ್ರತಿಭೆಗಳು ಹೆಚ್ಚೆಚ್ಚು ಮೆಡಲ್ ತಂದಿದ್ದಾರೆ. ಇದಕ್ಕೆ ಖೇಲೋ ಇಂಡಿಯಾ ಸಹಕಾರ ಆಗಿದೆ. ಈ ಯೋಜನೆಯಡಿ ಕುಮಾರಸ್ವಾಮಿ ನೇತೃತ್ವದಲ್ಲಿ ಮಂಡ್ಯಕ್ಕೆ ಕ್ರೀಡಾಂಗಣ ಬಂದಿದೆ. ಇದನ್ನು ಜಿಲ್ಲೆಗೆ ಕೊಟ್ಟ ಮಾಂಡವೀಯ ಅವರಿಗೆ ಧನ್ಯವಾದ ಎಂದರು.

ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಲಕ್ಷಕ್ಕೂ ಹೆಚ್ಚು ಜನರಿಗೆ ಹೋಳಿಗೆ ಊಟದ ವ್ಯವಸ್ಥೆ ಮಾಡಲಾಗಿತ್ತು. ಸಿ.ಆರ್.ಎಸ್. ಫಂಡ್ ಮೂಲಕ ಎಲೆಕ್ಟ್ರಾನಿಕ್ ವಾಹನ, ಶ್ರವಣಹೀನರಿಗೆ ಉಚಿತ ಹಿಯರಿಂಗ್ ಯಂತ್ರ, ಉಚಿತ ಕಂಪ್ಯೂಟರ್, ಲ್ಯಾಪ್‌ಟಾಪ್ ಪಡೆದ ಸರ್ಕಾರಿ ಶಾಲೆಯ ಫಲಾನುಭವಿಗಳು ಸಂತಸ ವ್ಯಕ್ತಪಡಿಸಿದರು.

ಸುದೀರ್ಘ ಸಮರಕ್ಕೆ ನಾವು ಸಿದ್ಧ

ಇರಾನ್ ಕಳೆದ ಎರಡು ದಿನಗಳಿಂದ ಡ್ರೋಣ್ ಹಾಗೂ ಕ್ಷಿಪಣಿ ದಾಳಿ ನಡೆಸುತ್ತಿರುವುದರಿಂದ ಈ ಕ್ರಮ ಕೈಗೊಳ್ಳಲಾಗಿದೆ ಎಂದು ಸ್ಥಳೀಯ ಆಡಳಿತದ ವಕ್ತಾರರು ತಿಳಿಸಿದ್ದಾರೆ. ಅಮೆರಿಕದ ಸೇನಾ ನೆಲೆಗಳು ಇರುವ ದೇಶಗಳ ಮೇಲೆ ದಾಳಿ ಮುಂದುವರಿಸುವಂತೆ ಇರಾನ್‌ನ ನೂತನ ಸರ್ವೋಚ್ಚ ನಾಯಕ ಮೊಜ್ತಬಾ ಖಮೇನಿ ಅವರು ಹೇಳಿದ್ದರು. ಅದರ ಬೆನ್ನಲ್ಲೇ ಈ ದಾಳಿ ನಡೆದಿದೆ.

ಡ್ರೋನ್ ದಾಳಿ: ದುಬೈ ಅಮೆರಿಕ ರಾಯಭಾರಿ ಕಚೇರಿಯ ಕಟ್ಟಡದ ಮೇಲೆ ಶನಿವಾರವೂ ಡ್ರೋಣ್ ದಾಳಿ ನಡೆಸಲಾಗಿದ್ದು ಕಟ್ಟಡಕ್ಕೆ ಹಾನಿಯಾಗಿದೆ. ಆದರೆ ಯಾವುದೇ ಸಾವು–ನೋವು ಸಂಭವಿಸಿಲ್ಲ ಎಂದು ಮಾಧ್ಯಮಗಳು ವರದಿ ಮಾಡಿವೆ.

ಹೊರ್ಮುಜ್ ಜಲಸಂಧಿ ಮೂಲಕ ಸಾಗುವ ಹಡಗುಗಳಿಗೆ ಅಗತ್ಯವಿದ್ದರೆ ಅಮೆರಿಕ ನೌಕಾಪಡೆಯು ಬೆಂಗಾವಲು ಒದಗಿಸಲಾಗುವುದು ಮತ್ತು ಮುಂದಿನ ವಾರ ಇರಾನ್ ಮೇಲೆ ಇನ್ನಷ್ಟು ದಾಳಿ ನಡೆಯಲಿದೆ. ಇರಾನ್ ಬಳಿ ಇದೀಗ ನೌಕಾಪಡೆ ಮತ್ತು ವಾಯುಪಡೆ ಇಲ್ಲ. ಅವರಲ್ಲಿದ್ದ ಕ್ಷಿಪಣಿಗಳು ಮತ್ತು ಡ್ರೋನ್‌ಗಳನ್ನು ನಾಶಪಡಿಸಲಾಗಿದೆ. ಅವರ ನಾಯಕರನ್ನೂ ಹತ್ಯೆ ಮಾಡಲಾಗಿದೆ ಎಂದು ಅಮೆರಿಕಾ ಅಧ್ಯಕ್ಷ ಟ್ರಂಪ್ ಅವರು ಸಾಮಾಜಿಕ ಮಾಧ್ಯಮ ತಿಳಿಸಿದ್ದಾರೆ.

ಇರಾನ್ ಹಾರಿಸಿದ ಸುಮಾರು 50 ಡ್ರೋನ್‌ಗಳನ್ನು ಸೌದಿ ಅರೇಬಿಯಾದ ವಾಯು ರಕ್ಷಣಾ ವ್ಯವಸ್ಥೆ ನಾಶಪಡಿಸಿದೆ. ಒಮಾನ್‌ನ ಸೊಹಾರ್‌ನಲ್ಲಿರುವ ಕೈಗಾರಿಕಾ ಪ್ರದೇಶಕ್ಕೆ ಎರಡು ಡ್ರೋನ್‌ಗಳು ಅಪ್ಪಳಿಸಿ ಇಬ್ಬರು ವಿದೇಶಿ ಪ್ರಜೆಗಳು ಮೃತಪಟ್ಟಿದ್ದಾರೆ ಎಂದು ಒಮಾನ್ ಸುದ್ದಿ ಸಂಸ್ಥೆ ವರದಿ ಮಾಡಿದೆ. ಬಹರೇನ್‌ನಲ್ಲಿ ದಾಳಿಯ ಬಗ್ಗೆ ಎಚ್ಚರಿಕೆ ನೀಡುವ ಸೈರನ್‌ಗಳು ಮೊಳಗಿದವು. ದುಬೈನಲ್ಲಿ ಕೈಗಾರಿಕಾ ಪ್ರದೇಶದಿಂದ ದಟ್ಟ ಹೊಗೆ ಎದ್ದಿದ್ದು, ಕ್ಷಿಪಣಿಯ ಅವಶೇಷ ಬಿದ್ದು ಬೆಂಕಿ ಹೊತ್ತಿಕೊಂಡಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ದುಬೈ ಇಂಟರ್‌ನ್ಯಾಶನಲ್ ಫೈನಾನ್ಶಿಯಲ್ ಸೆಂಟರ್‌ನಲ್ಲಿರುವ ಕಟ್ಟಡದ ಮೇಲೆ ಕ್ಷಿಪಣಿಯ ಅವಶೇಷ ಬಿದ್ದು ಹಾನಿ ಉಂಟಾಗಿದೆ.

ಆದ್ರೂ ಕೊಡಬಾರ್ದಾ

ಪ್ರವಾಹದ ಫೋಟೋಗಳ ಸಮೇತ ವಾಸ್ತವ ಸ್ಥಿತಿ ವಿವರಿಸಿದ್ದೇನೆ. ಆದರೂ, ನನ್ನ ಮನವಿಗೆ ಸ್ಪಂದಿಸಿಲ್ಲ ಎಂಬ ನೋವಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಮೈಕ್ರೊ ಫೈನಾನ್ಸ್‌ನಿಂದಾಗಿ ಕ್ಷೇತ್ರದಲ್ಲಿ 2,800 ಮನೆಗಳು ಹರಾಜಿಗೆ ಬಂದಿವೆ. ಕರ್ನಾಟಕ ರೇಷ್ಮೆ ಮಾರುಕಟ್ಟೆ ಮಂಡಳಿ (ಕೆಎಸ್‌ಎಂಬಿ) ಪುನರುಜ್ಜೀವನಕ್ಕಾಗಿ ಕೇಳಿದ್ದ 100 ಕೋಟಿ ಅನುದಾನ ಸಹ ಕೊಟ್ಟಿಲ್ಲ. ರಸ್ತೆ ಮತ್ತು ಚರಂಡಿ ದುರಸ್ತಿಗೂ ಹಣವಿಲ್ಲ. ನನ್ನ ಕ್ಷೇತ್ರಕ್ಕಾಗಿರುವ ನೋವನ್ನು ಹೇಳಿದ್ದೇನೆಯೇ ಹೊರತು ಬಜೆಟ್ ಬಗೆಯಲ್ಲ ಎಂದು ಸ್ಪಷ್ಟಪಡಿಸಿದರು.

ಬಹಿರಂಗ ಹೇಳಿಕೆ ನೀಡಿದರೆ, ಮುಂದೆ ಟಿಕೆಟ್ ನೀಡುವಾಗ ಹೈಕಮಾಂಡ್ ಅದನ್ನು ಗಮನಿಸುತ್ತದೆ ಎಂಬ ಗೃಹ ಸಚಿವ ಡಾ. ಜಿ. ಪರಮೇಶ್ವರ್ ಹೇಳಿಕೆ ಕುರಿತ ಪ್ರಶ್ನೆಗೆ, ಅವರು ನಮ್ಮ ನಾಯಕರು. ಏನು ಬೇಕಾದರೂ ಹೇಳಲಿ. 2018ರಲ್ಲಿ ನಾನು ಸೋತಾಗ ಅವರೇ ಟಿಕೆಟ್ ಕೊಟ್ಟಿದ್ದರು. ನೀನು ಗೆಲ್ಲಬೇಕು ಎಂದು ಬೆನ್ನು ತಟ್ಟಿದ್ದರು. ಕೆಲವು ಸಂದರ್ಭದಲ್ಲಿ ಅವರ ಆಶೀರ್ವಾದ ನನಗೆ ಇರುತ್ತದೆ ಎಂದು ಪ್ರತಿಕ್ರಿಯಿಸಿದರು.

25 ಕೋಟಿ ಸಾಲದ ಆಸೆ ತೋರಿ 25 ಲಕ್ಷ ವಂಚನೆ!

● ಗುರುತಾಗಿ ಅರ್ಧ ನೋಟು ನೀಡಿ, ಮನೆಗೆ ಹಣ ಕಳುಹಿಸುವುದಾಗಿ ಹೇಳಿ ಮೋಸ ● ಮೈಸೂರಿನ ದಕ್ಷಿಣ ಪೊಲೀಸ್ ಠಾಣೆಯಲ್ಲಿ ಐವರ ವಿರುದ್ಧ ಪ್ರಕರಣ ದಾಖಲು

ಮೈಸೂರು, ಮಾ.14(ಬಿಎಲ್‌ಯು)– ಬರೋಬ್ಬರಿ 25 ಕೋಟಿ ರೂ. ಕೈಸಾಲ ನೀಡುವುದಾಗಿ ನಂಬಿಸಿ, ವ್ಯಕ್ತಿಯೊಬ್ಬರಿಂದ ಛಾಪಾ ಕಾಗದದ ಶುಲ್ಕವೆಂದು 25 ಲಕ್ಷ ಪಡೆದು, ಕಡೆಗೆ ಅವರಿಗೆ 10 ರೂ. ಅರ್ಧ ನೋಟು ನೀಡಿ ವಂಚಿಸಿರುವ ಪ್ರಕರಣ ಮೈಸೂರಿನಲ್ಲಿ ಬೆಳಕಿಗೆ ಬಂದಿದೆ.

ಹುಬ್ಬಳ್ಳಿಯ ವಾಣಿಜ್ಯೋದ್ಯಮಿ ಹರ್ಷ ವಂಚನೆಗೊಳಗಾಗಿದ್ದು, ಇವರು ನಾರಾಯಣಶೆಟ್ಟಿ, ಕಾರ್ತಿಕ್, ಯಶವಂತಶೆಟ್ಟಿ, ಪ್ರವೀಣ್, ದೀಪಕ್ ವಿಶ್ವಕರ್ಮ ಹಾಗೂ ಶ್ರುತಿ ವಿರುದ್ಧ ಮೈಸೂರು ದಕ್ಷಿಣ ಪೊಲೀಸ್ ಠಾಣೆಯಲ್ಲಿ ಮಾ.9ರಂದು ಪ್ರಕರಣ ದಾಖಲಿಸಿದ್ದಾರೆ.

ಧಾರವಾಡ ಟೋಲ್‌ಗೇಟ್ ಬಳಿಯ ಹೋಟೆಲ್‌ನಲ್ಲಿ 2025ರ ಅಕ್ಟೋಬರ್‌ನಲ್ಲಿ ಹರ್ಷ ಅವರಿಗೆ ಪರಿಚಯವಾಗಿದ್ದ ಯಶವಂತಶೆಟ್ಟಿ ಮತ್ತು ಪ್ರವೀಣ್, ಮೈಸೂರಿನಲ್ಲಿರುವ ನಾರಾಯಣಶೆಟ್ಟಿ ಅವರು ನಿಮಗೆ ಬೇಕಾದಷ್ಟು ಕೈಸಾಲ ಕೊಡುತ್ತಾರೆ, ನೀವು ಒಮ್ಮೆ ಮೈಸೂರಿಗೆ ಬನ್ನಿ ಎಂದು ತಿಳಿಸಿದ್ದಾರೆ.

ಅದರಂತೆ ಎರಡು ವಾರಗಳ ನಂತರ ಮೈಸೂರಿಗೆ ಬಂದು ಖಾಸಗಿ ಹೋಟೆಲ್‌ನಲ್ಲಿ ತಂಗಿದ್ದ ಹರ್ಷ ಅವರನ್ನು ಯಶವಂತಶೆಟ್ಟಿ ಹಾಗೂ ಪ್ರವೀಣ ಕಾರಿನಲ್ಲಿ ಜೆ.ಪಿ.ನಗರ, ಕೊಪ್ಪಲೂರು ಬಳಿಯ ಗೆಜ್ಜಗಳ್ಳಿ ಲೇಕ್ ವೀವ್ ಬಡಾವಣೆಯ ಮನೆಯೊಂದಕ್ಕೆ ಕರೆದೊಯ್ಯುತ್ತಾರೆ. ಮನೆಯಲ್ಲೇ ಕಚೇರಿ ಮಾಡಿಕೊಂಡಿದ್ದ ನಾರಾಯಣಶೆಟ್ಟಿ ಮತ್ತು ಕಾರ್ತಿಕ್ ಅವರನ್ನು ಭೇಟಿ ಮಾಡಿಸಿದಾಗ ಅವರು ಒಂದಷ್ಟು ಷರತ್ತುಗಳನ್ನು ತಿಳಿಸಿ, ಹರ್ಷ ಅವರಿಗೆ 25 ಕೋಟಿ ಸಾಲ ನೀಡಲು ಒಪ್ಪುತ್ತಾರೆ. ಈ ವೇಳೆ ಒಂದು ಕೋಟಿಗೆ ಒಂದು ಲಕ್ಷದಂತೆ ಒಟ್ಟು 25 ಲಕ್ಷ ರೂ. ಛಾಪಾ ಕಾಗದದ ಶುಲ್ಕ ನೀಡಬೇಕೆಂದು ತಿಳಿಸುತ್ತಾರೆ.

ಬರೋಬ್ಬರಿ 25 ಕೋಟಿ ಸಾಲ ಸಿಗುತ್ತದೆ ಎಂದು ಹರ್ಷ ಎರಡು ಹಂತಗಳಲ್ಲಿ 25 ಲಕ್ಷ ನಗದನ್ನು ನೀಡುತ್ತಾರೆ. ಹಣ ಪಡೆದ ನಾರಾಯಣಶೆಟ್ಟಿ ಹಾಗೂ ಕಾರ್ತಿಕ್, 2025ರ ನವೆಂಬರ್ 27ರಿಂದ 30ರೊಳಗೆ ಸಿಎಂಎಸ್ ವಾಹನದಲ್ಲಿ ಸಾಲದ ಮೊತ್ತ 25 ಕೋಟಿ ನಿಮ್ಮ ವಿಳಾಸಕ್ಕೇ ತಲುಪಿಸುತ್ತೇವೆ ಎಂದು ಹೇಳಿ, 10 ರೂ. ಮುಖಬೆಲೆಯ ಅರ್ಧ ನೋಟು ಹಾಗೂ ಸಿಎಂಎಸ್ ವಾಹನ ಸಂಖ್ಯೆ ನೀಡಿ ಕಳುಹಿಸುತ್ತಾರೆ.

ಆದರೆ, ಅವರು ತಿಳಿಸಿದ ದಿನಾಂಕಗಳಲ್ಲಿ ಹಣ ತಲುಪದಿದ್ದಾಗ ಹರ್ಷ ಅವರು ಕಾರ್ತಿಕ್‌ಗೆ ಕರೆ ಮಾಡಿ ವಿಚಾರಿಸಿದಾಗ ಏನೋ ಕಾರಣ ನೀಡಿ, ಡಿಸೆಂಬರ್‌ನಲ್ಲಿ ನೀವೇ ಮೈಸೂರಿಗೆ ಬನ್ನಿ ಎನ್ನುತ್ತಾನೆ. ಹಾಗೆಯೇ ಮೈಸೂರಿಗೆ ಬಂದು ನಾರಾಯಣಶೆಟ್ಟಿ ಅವರ ಮನೆಗೆ ಹೋಗಿ ವಿಚಾರಿಸಿದಾಗ ಯಾವುದೋ ಕಾರಣದಿಂದ ಹಣ ಕಳುಹಿಸುವುದು ವಿಳಂಬವಾಗಿದ್ದು, ಡಿಸೆಂಬರ್ 23ರಂದು ನಿಮಗೆ ಖಂಡಿತ ಹಣ ತಲುಪುತ್ತದೆ ಎಂದು ನಂಬಿಸಿ, ಕಳುಹಿಸಿದ್ದಾರೆ. ಆದರೆ ಆ ದಿನವೂ ಹಣ ಕಳುಹಿಸದಿದ್ದಾಗ ಕರೆ ಮಾಡಿ ವಿಚಾರಿಸಿದ್ದಾರೆ. ಹೀಗೆ ಕಳೆದ ಫೆಬ್ರವರಿ 24ರವರೆಗೂ ಹಲವು ದಿನಾಂಕಗಳನ್ನು ತಿಳಿಸಿ, ದಿನದೂಡಿದ್ದಾರೆ.

ಇದರಿಂದ ಅನುಮಾನಗೊಂಡ ಹರ್ಷ, ಕಳೆದ ಮಾ.5ರಂದು ಮೈಸೂರಿನ ನಾರಾಯಣಶೆಟ್ಟಿ ಅವರ ಮನೆಗೆ ತೆರಳಿದಾಗ ಆಘಾತ ಕಾದಿತ್ತು. ಅವರು 15 ದಿನಗಳ ಹಿಂದೆಯೇ ಮನೆ ಖಾಲಿ ಮಾಡಿರುವುದಾಗಿ ತಿಳಿದಿದೆ. ಈ ಬಗ್ಗೆ ಮನೆ ಮಾಲೀಕರನ್ನು ವಿಚಾರಿಸಿದಾಗ ನಾರಾಯಣಶೆಟ್ಟಿ ಹಾಗೂ ಕಾರ್ತಿಕ್‌ಗೆ ಅವರ ಜೊತೆ ಕೆಲಸ ಮಾಡುತ್ತಿದ್ದ ದೀಪಕ್ ವಿಶ್ವಕರ್ಮ ಹಾಗೂ ಅವರ ಪತ್ನಿ ಶೃತಿ ಹೆಸರಲ್ಲಿ ಮನೆ ಬಾಡಿಗೆ ನೀಡಿದ್ದಾಗಿ ತಿಳಿಸಿದ್ದಾರೆ. ನಾರಾಯಣಶೆಟ್ಟಿ ಹಾಗೂ ಕಾರ್ತಿಕ್, ತಮ್ಮ ಮತ್ತೊಂದು ಕಚೇರಿಯನ್ನೂ ಖಾಲಿ ಮಾಡಿಕೊಂಡು ನಾಪತ್ತೆಯಾಗಿರುವುದಾಗಿ ತಿಳಿದು, ಈ ಸಂಬಂಧ ಪೊಲೀಸರಿಗೆ ದೂರು ನೀಡಿದ್ದಾರೆ.

9 ರೂ. ಸಾಲಕ್ಕೆ ಬೆನ್ನು ಬಿದ್ದ ಬ್ಯಾಂಕ್: ಸಾಲ ತೀರಿಸಿ 66 ಪೈಸೆ ವಾಪಸ್ ಪಡೆದ ರೈತ

ಹಾಸನ, ಮಾ.14– ಕೊನೆಗೂ ಸಕಲೇಶಪುರದ ಕೆನರಾ ಬ್ಯಾಂಕ್ ರೈತನ ಖಾತೆಗೆ ಬಾಕಿ ಉಳಿಸಿಕೊಂಡಿದ್ದ 66 ಪೈಸೆಯನ್ನು ಜಮೆ ಮಾಡಿ ಪ್ರಕರಣವನ್ನು ಮುಕ್ತಾಯಗೊಳಿಸಿದೆ. ಸಕಲೇಶಪುರ ತಾಲೂಕಿನ, ಹೊಸಕೊಪ್ಪಲು ಗ್ರಾಮದ ರೈತ ಚೊಕ್ಕಣ್ಣಗೌಡ ಕೆನರಾ ಬ್ಯಾಂಕ್‌ನಿಂದ ಕಳೆದ ವರ್ಷ 50 ಸಾವಿರ ರೂ. ಸಾಲ ಪಡೆದಿದ್ದರು. ಪಡೆದ ಸಾಲವನ್ನು ಬಡ್ಡಿಯೊಂದಿಗೆ ತೀರಿಸಿದ್ದರು. ಆದರೆ ಫೆ.25 ರಂದು ಕೆನರಾ ಬ್ಯಾಂಕ್ ಕಡೆಯಿಂದ ಬಂದ ಕರೆಯಲ್ಲಿ ಬಾಕಿ ಉಳಿಸಿಕೊಂಡ 9 ರೂ.34 ಪೈಸೆಯನ್ನು ಪಾವತಿಸಬೇಕೆಂದು ಸೂಚಿಸಲಾಗಿತ್ತು.

ಎಲ್‌ಪಿಜಿ ಸಿಲಿಂಡರ್ ಕೃತಕ ಅಭಾವ ಸೃಷ್ಟಿಸುವವರ ವಿರುದ್ಧ ಕಠಿಣ ಕ್ರಮಕ್ಕೆ ಮಾಜಿ ಸಚಿವ ಸಾ.ರಾ.ಮಹೇಶ್ ಆಗ್ರಹ

● ಕರ್ನಾಟಕ ಮಾತ್ರವಲ್ಲದೆ ದೇಶದಲ್ಲೇ ಗ್ಯಾಸ್ ಸಿಲಿಂಡರ್‌ಗಳಿಗೆ ಯಾವುದೇ ರೀತಿಯ ಅಭಾವವಿಲ್ಲ ● ತಂಬಾಕಿಗೆ ಉತ್ತಮ ಬೆಲೆ ವಿಶ್ವಾಸ ● ಶೀಘ್ರವೇ ಇದಕ್ಕೆ ಶಾಶ್ವತ ಪರಿಹಾರ ಸೂತ್ರ

ಮೈಸೂರು, ಮಾ.14(ಬಿಎಲ್‌ಯು)– ಎಲ್‌ಪಿಜಿ ಸಿಲಿಂಡರ್‌ಗಳ ಮಾರಾಟದಲ್ಲಿ ಕೃತಕ ಅಭಾವ ಸೃಷ್ಟಿಸುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಮಾಜಿ ಸಚಿವ ಸಾ.ರಾ.ಮಹೇಶ್, ರಾಜ್ಯ ಸರ್ಕಾರವನ್ನು ಆಗ್ರಹಿಸಿದ್ದಾರೆ.

ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ಇಂದು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕರ್ನಾಟಕ ಮಾತ್ರವಲ್ಲದೆ ದೇಶದಲ್ಲಿ ಎಲ್‌ಪಿಜಿ ಸಿಲಿಂಡರ್‌ಗೆ ಯಾವುದೇ ರೀತಿಯ ಅಭಾವ ವಿಲ್ಲ. ಆದರೆ ಕೆಲವರು ಕೃತಕ ಅಭಾವ ಸೃಷ್ಟಿಸಿ, ಲಾಭ ಮಾಡಿಕೊಳ್ಳು ತ್ತಿದ್ದಾರೆ ಎಂದು ಆರೋಪಿಸಿದರು.

ಈ ಹಿನ್ನೆಲೆಯಲ್ಲಿ ಕೃತಕ ಅಭಾವ ಸೃಷ್ಟಿಸುವವರ ವಿರುದ್ಧ ರಾಜ್ಯ ಸರ್ಕಾರ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಬೇಕು ಎಂದು ಸರ್ಕಾರಕ್ಕೆ ಮನವಿ ಮಾಡಿದರು.

ತಂಬಾಕು ವಿಷಯದಲ್ಲಿ ಶಾಶ್ವತ ಪರಿಹಾರ: ಮೈಸೂರು ಭಾಗದ ಐದು ತಾಲೂಕುಗಳಲ್ಲಿ ಹೆಚ್ಚಾಗಿ ತಂಬಾಕು ಬೆಳೆಯಲಾಗುತ್ತದೆ. ಆದರೆ ತಂಬಾಕು ಬೆಲೆ ಕುಸಿತದಿಂದ ರೈತರು ಕಂಗಾಲಾ ಗಿದ್ದಾರೆ. ಕಳೆದ ವರ್ಷ ಕೂಡ ಇದೇ ಸಮಸ್ಯೆ ಎದುರಾದಾಗ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಹಾಗೂ ಸಂಸದ ಯದುವೀರ್ ಅವರು ಸಮಸ್ಯೆ ಪರಿಹಾರ ಮಾಡಿದ್ದರು. ಈಗ ಮತ್ತೆ ಸಮಸ್ಯೆ ಎದುರಾಗಿರುವ ಹಿನ್ನೆಲೆಯಲ್ಲಿ ಇದಕ್ಕೆ ಶಾಶ್ವತ ಪರಿಹಾರ ಕಂಡುಕೊಳ್ಳುವುದು ಅನಿವಾರ್ಯ ಎಂದು ಅಭಿಪ್ರಾಯಪಟ್ಟರು.


ಈ ನಿಟ್ಟಿನಲ್ಲಿ ನಿನ್ನೆ ಕೇಂದ್ರ ವಾಣಿಜ್ಯ ಸಚಿವ ಪಿಯೂಷ್ ಗೋಯಲ್ ಅವ ರನ್ನು ಭೇಟಿ ಮಾಡಿ ವಸ್ತುಸ್ಥಿತಿ ಮನ ವರಿಕೆ ಮಾಡಿಕೊಟ್ಟಿದ್ದೇವೆ. ತಂಬಾಕಿಗೆ ಹೆಚ್ಚು ಬೆಲೆ ನೀಡಿ ಖರೀದಿ ಮಾಡಲು ಭರವಸೆ ನೀಡಿದ್ದಾರೆ. ಅಷ್ಟೇ ಅಲ್ಲದೆ ವಿಶ್ವದ 190 ರಾಷ್ಟ್ರಗಳ ರಾಯಭಾರ ಕಚೇರಿಗೆ ಪತ್ರ ಬರೆದು, ಮುಕ್ತ ಮಾರುಕಟ್ಟೆಯಲ್ಲಿ ತಂಬಾಕು ಖರೀದಿ ಮಾಡುವಂತೆ ತಿಳಿಸಿದ್ದಾರೆ. ಈ ಮೂಲಕ ಮುಂದಿನ ದಿನಗಳಲ್ಲಿ ಇದಕ್ಕೆ ಶಾಶ್ವತ ಪರಿಹಾರ ದೊರೆಯುವ ಸಾಧ್ಯತೆ ಇದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಬೆಂಬಲ ಬೆಲೆ ಕೊಡಿಸಲಿ: ಮುಖ್ಯ ಮಂತ್ರಿ ಸಿದ್ದರಾಮಯ್ಯ ಅವರ ಸ್ನೇಹಿತರು ನಿನ್ನೆ ಮೈಸೂರಿನ ಐಟಿಸಿ ಕಂಪನಿಗೆ ಮುತ್ತಿಗೆ ಹಾಕಿ ಹೆಚ್. ಡಿ.ಕುಮಾರಸ್ವಾಮಿ ಅವರ ಬಗ್ಗೆ ಟೀಕೆ ಮಾಡಿದ್ದಾರೆ. ಇಂತಹ ಪ್ರತಿಭಟನೆ ಮಾಡುವ ಮೊದಲು ರೈತರ ಬೆಲೆಗಳಿಗೆ ಬೆಂಬಲ ನೀಡುವಂತೆ ಅವರ ಮುಖ್ಯಮಂತ್ರಿ ಬಳಿ ಮನವಿ ಮಾಡಿ ಅದನ್ನು ಅನುಷ್ಠಾನ ಗೊಳಿಸಲಿ ಎಂದು ಸಲಹೆ ನೀಡಿದರು.

ತಂಬಾಕಿಗೆ ಸ್ಥಿರ ಬೆಲೆ: ಈ ವೇಳೆ ಮಾತ ನಾಡಿದ ಶಾಸಕ ಜಿ.ಡಿ.ಹರೀಶ್‌ಗೌಡ ಅವರು, ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ, ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರು ಕೇಂದ್ರ ವಾಣಿಜ್ಯ ಸಚಿವ ಪಿಯೂಷ್ ಗೋಯಲ್ ಅವರನ್ನು ಭೇಟಿ ಮಾಡಿ ತಂಬಾಕಿಗೆ ಅಧಿಕ ಬೆಲೆ ನೀಡುವಂತೆ ಮಾಡಿದ ಮನವಿಗೆ ಸಕಾರಾತ್ಮಕ ಸ್ಪಂದನೆ ದೊರೆತಿದೆ ಎಂದರು.

ಹೆಚ್ಚಿನ ಬೆಲೆ ಕೊಟ್ಟು ತಂಬಾಕು ಖರೀದಿಗೆ ವ್ಯವಸ್ಥೆ ಮಾಡಲಾಗುವುದು ಎಂದು ಪಿಯೂಷ್ ಗೋಯಲ್ ಅವರು ಭರವಸೆ ನೀಡಿದ್ದರಿಂದ ತಂಬಾಕಿಗೆ ಸ್ಥಿರವಾದ ಬೆಲೆ ದೊರೆಯು ತ್ತದೆ. ಹಾಗಾಗಿ ರೈತರು ಆತಂಕಗೊಳ್ಳ ಬಾರದು ಎಂದು ಸಲಹೆ ನೀಡಿದರು.

ಶಾಸಕರಾದ ಸಿ.ಎನ್.ಮಂಜೇಗೌಡ, ವಿವೇಕಾನಂದ, ಮಾಜಿ ಶಾಸಕ ಅಶ್ವಿನ್ ಕುಮಾರ್, ಜಿಲ್ಲಾ ಪಂಚಾಯತ್ ಮಾಜಿ ಅಧ್ಯಕ್ಷ ಸಿ.ಜೆ.ದ್ವಾರಕೀಶ್, ನಗರ ಜೆಡಿಎಸ್ ಅಧ್ಯಕ್ಷ ಹಾಗೂ ಮಾಜಿ ಕಾರ್ಪೊರೇಟರ್ ಎಸ್.ಬಿ.ಎಂ ಮಂಜು, ಮಾಜಿ ಮೇಯರ್ ಎಂ.ಜೆ.ರವಿಕುಮಾರ್ ಹಾಗೂ ಇತರರು ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.



ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ಶನಿವಾರ ಮಾಜಿ ಸಚಿವ ಸಾ.ರಾ.ಮಹೇಶ್ ಅವರು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು.

ಕ್ರೀಡಾಂಗಣಕ್ಕೆ ಹಸ್ತಾಂತರಿಸಿದ್ದ ಜಾಗವನ್ನು ಮತ್ತೆ ಕೆಎಸ್‌ಐಸಿಗೆ ನೀಡಲು ಆಗ್ರಹ

ತಿ.ನರಸೀಪುರದ ಕೆಎಸ್‌ಐಸಿ ರೇಷ್ಮೆ ನೂಲು ಕಾರ್ಖಾನೆಯ ಭೂಮಿಯನ್ನು ಕ್ರೀಡಾ ಇಲಾಖೆಗೆ ಹಸ್ತಾಂತರ ಮಾಡ ಲಾಗಿದ್ದು, ಕೂಡಲೇ ಆ ಭೂಮಿಯನ್ನು ಮತ್ತೆ ಕೆಎಸ್‌ಐಸಿಗೆ ನೀಡಬೇಕು. ಒಂದು ವೇಳೆ ಭೂಮಿಯನ್ನು ವಾಪಾಸು ನೀಡದಿದ್ದರೆ ಹೆಚ್.ಡಿ.ಕುಮಾರಸ್ವಾಮಿ ನೇತೃತ್ವದಲ್ಲಿ ತೀವ್ರ ರೀತಿಯ ಹೋರಾಟ ರೂಪಿಸಬೇಕಾಗುತ್ತದೆ ಎಂದು ಸಾ.ರಾ.ಮಹೇಶ್ ಎಚ್ಚರಿಸಿದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಘಜನಿ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ರೈಸ್ ಆಫ್ ಅಶೋಕ (ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಓ ರೋಮಿಯೋ (ಹಿ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಆಕಾಶ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಸಂಪತ್ತಿಗೆ ಸವಾಲ್ (ಕ)	4 ಪ್ರದರ್ಶನಗಳು
ರಾಜಕಮಲ್	
ಕಾಂಚನಾ–2 (ತೆ)	4 ಪ್ರದರ್ಶನಗಳು
ಸಂಗಂ	
ಹಯಗ್ರೀವ (ಕ)	4 ಪ್ರದರ್ಶನಗಳು
ಲಿಡೋ	
ಭಾರತ ಮಹಾಸಾಯುಲಕು ವಿಘ್ನಪತಿ (ತೆ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಸಂಪತ್ತಿಗೆ ಸವಾಲ್ (ಕ)	4 ಪ್ರದರ್ಶನಗಳು

ರಾಜ್ಯದ 13 ಜಿಲ್ಲೆಗಳಲ್ಲಿ 37 ಕೈಗಾರಿಕೆಗಳ ಸ್ಥಾಪನೆ

● 4,824.31 ಕೋಟಿ ರೂ. ಬಂಡವಾಳ ಹೂಡಿಕೆಯಿಂದ 14,525 ಉದ್ಯೋಗಾವಕಾಶ ● ಬೃಹತ್ ಹಾಗೂ ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ್ ಮಾಹಿತಿ



ಬೆಂಗಳೂರು, ಮಾ.14(ಕೆಎಂಶಿ)– ರಾಜ್ಯದ 13 ಜಿಲ್ಲೆಗಳಲ್ಲಿ 4,824.31 ಕೋಟಿ ರೂ. ಬಂಡವಾಳ ಹೂಡಿಕೆಯ 37 ಹೊಸ ಕೈಗಾರಿಕೆಗಳ ಸ್ಥಾಪನೆಯಿಂದ 14,525 ಉದ್ಯೋಗಾವಕಾಶ ಸೃಷ್ಟಿಯಾಗಲಿದೆ ಎಂದು ಬೃಹತ್ ಹಾಗೂ ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ್ ತಿಳಿಸಿದ್ದಾರೆ.

ಈ ಸಂಬಂಧ ಪ್ರಕಟಣೆ ಬಿಡುಗಡೆ ಮಾಡಿರುವ ಅವರು, ನಡೆದ 158ನೇ ರಾಜ್ಯಮಟ್ಟದ ಏಕಗವಾಕ್ಷಿ ಅನುಮೋದನಾ ಸಮಿತಿ ಸಭೆ ಹೊಸ ಕೈಗಾರಿಕಾ ಬಂಡವಾಳ ಹೂಡಿಕೆಗೆ ಸಮ್ಮತಿ ನೀಡಿದೆ ಎಂದಿದ್ದಾರೆ.

ರಾಮನಗರ, ಕೋಲಾರ, ಚಿತ್ರದುರ್ಗ, ವಿಜಯಪುರ, ಬಾಗಲಕೋಟೆ ಸೇರಿದಂತೆ 13 ಜಿಲ್ಲೆಗಳಲ್ಲಿ ಮಾಹಿತಿ ತಂತ್ರಜ್ಞಾನ (ಐಟಿ) ಮೂಲಸೌಲಭ್ಯ, ಸಕ್ಕರೆ ಕಾರ್ಖಾನೆ, ಟೆಕ್ನಿಕಲ್ ಟೆಕ್ಸ್‌ಟೈಲ್, ಕಂಪ್ರೆಸ್ಡ್‌ಗ್ಯಾಸ್, ವೈಮಾಂತರಿಕ್ಷ, ಚಿನ್ನಾಭರಣ ತಯಾರಿಕೆ, ಎಲೆಕ್ಟ್ರಾನಿಕ್ಸ್, ಸಾಫ್ಟ್‌ವೇರ್ ಹಾಗೂ ಪಂಚತಾರಾ ಹೋಟೆಲ್ ನಿರ್ಮಾಣ ಯೋಜನೆಗಳು ಪ್ರಾರಂಭವಾಗಲಿವೆ.

ಯೋಜನೆಗಳಲ್ಲಿ ಬಾಗ್ಮನೆ ಕನ್‌ಸ್ಟ್ರಕ್ಷನ್ ಪ್ರೈವೇಟ್ ಲಿಮಿಟೆಡ್ 494.65 ಕೋಟಿ ರೂ. ಹೂಡಿಕೆಯ ಐಟಿ ಮೂಲಸೌಲಭ್ಯ ಅಭಿವೃದ್ಧಿ, ಕರ್ನಾಟಕ ಬಂಗಾರು ಶುಗರ್ಸ್‌ನ 443.50 ಕೋಟಿ ರೂ. ಸಕ್ಕರೆ ಕಾರ್ಖಾನೆ, ಕ್ಲೀನ್ ಪ್ಯಾಕ್ಸ್‌ನ 376 ಕೋಟಿ ರೂ. ಟೆಕ್ನಿಕಲ್ ಟೆಕ್ಸ್‌ಟೈಲ್ ಘಟಕ, ತ್ರಿಶೂಲ್ ಬಿಲ್ಡ್‌ಟೆಕ್ ಅಂಡ್ ಇನ್‌ಫ್ರಾಸ್ಟ್ರಕ್ಚರ್‌ನ 300 ಕೋಟಿ ರೂ. ಪಂಚತಾರಾ ಹೋಟೆಲ್, ಟ್ರೌಲ್ಟ್ ಗ್ರಾಸ್‌ನ 257.77 ಕೋಟಿ ರೂ. ಕಂಪ್ರೆಸ್ಡ್ ಗ್ಯಾಸ್ ಘಟಕ, ತ್ಸುಯೊ ಮ್ಯಾನುಫ್ಯಾಕ್ಚರಿನ್‌ನ 250 ಕೋಟಿ ರೂ. ವಿದ್ಯುತ್‌ಚಾಲಿತ ವಾಹನಗಳ ಮೋಟರ್ ಹಾಗೂ ಕಂಟ್ರೋಲರ್ ತಯಾರಿಕಾ ಘಟಕ ಪ್ರಮುಖವಾಗಿವೆ.


ಅಲ್ಲದೆ, ಪ್ರತಿ 50 ಕೋಟಿ ರೂ.ಗಳಿಗೂ ಹೆಚ್ಚು ಹೂಡಿಕೆಯ 22 ಪ್ರಮುಖ ದೊಡ್ಡ ಮತ್ತು ಮಧ್ಯಮ ಕೈಗಾರಿಕಾ ಯೋಜನೆಗಳಿಗೆ ಅನುಮೋದನೆ ನೀಡಿದ್ದು, ಇದರಿಂದ 3908.68 ಕೋಟಿ ರೂ. ಹೂಡಿಕೆಯೊಂದಿಗೆ 12,475 ಜನರಿಗೆ ಉದ್ಯೋಗಾವಕಾಶ ದೊರೆಯಲಿದೆ.

ಅಲ್ಲದೆ, 15 ಕೋಟಿ ರೂ.ನಿಂದ 50 ಕೋಟಿ ರೂ. ಒಳಗಿನ ಹೂಡಿಕೆಯ 15 ಹೊಸ ಯೋಜನೆಗಳನ್ನೂ ಅನುಮೋದಿಸಿದ್ದು, ಇದರಿಂದ 350.60 ಕೋಟಿ ರೂ. ಹೂಡಿಕೆಯೊಂದಿಗೆ 1,750 ಜನರಿಗೆ ಉದ್ಯೋಗಾವಕಾಶ ಸಿಗಲಿವೆ.

ಹೆಚ್ಚುವರಿ ಹೂಡಿಕೆಯ 2 ಯೋಜನೆಗಳ ಅನುಮೋದನೆಯಿಂದ 565.03 ಕೋಟಿ ರೂ. ಹೂಡಿಕೆಯೊಂದಿಗೆ 300 ಜನರಿಗೆ ಉದ್ಯೋಗಾವಕಾಶ ಸಿಗಲಿವೆ ಎಂದಿದ್ದಾರೆ.

ತಮಿಳು ಸಾಹಿತಿಗೆ ಜ್ಞಾನಪೀಠ ಪ್ರಶಸ್ತಿ

24 ವರ್ಷಗಳ ಬಳಿಕ ತಮಿಳುನಾಡಿಗೆ 3ನೇ ಪ್ರಶಸ್ತಿ!



ಚೆನ್ನೈ, ಮಾ.14– ಭಾರತೀಯ ಸಾಹಿತ್ಯ ರಂಗದ ಪ್ರತಿಷ್ಠಿತ ಪ್ರಶಸ್ತಿಗಳಲ್ಲಿ ಒಂದಾದ ಜ್ಞಾನಪೀಠ ಪ್ರಶಸ್ತಿ 2026ನೇ ಸಾಲಿಗೆ ಘೋಷಣೆಯಾಗಿದೆ. ತಮಿಳು ನಾಡಿನ ಖ್ಯಾತ ಸಾಹಿತಿ, ಸಿನಿಮಾ ಸಾಹಿತ್ಯ ರಚನೆಕಾರ ವೈರಮುತ್ತು ಅವರನ್ನು ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ವೈರ ಮುತ್ತು ಅವರು ವೈಕರೈ ಮೇಂಗಲ್ ಸೇರಿದಂತೆ ಹಲವಾರು ಕವನ ಸಂಕಲನ ಗಳು, ಕಾದಂಬರಿಗಳು, ಗೀತ ಸಂಕಲನ ಗಳು ಮತ್ತು ಸಣ್ಣ ಕಥಾ ಪ್ರಬಂಧ ಗಳನ್ನು ಬರೆದಿದ್ದಾರೆ. ಸಂಶೋಧನೆಯಲ್ಲಿ 3 ಡಾಕ್ಟರೇಟ್ ಪದವಿಗಳನ್ನು ಸಹ ಪಡೆದಿದ್ದಾರೆ. ಇನ್ನು ತಮಿಳು ಸಾಹಿತ್ಯಕ್ಕೆ ಇದು 3ನೇ ಜ್ಞಾನಪೀಠ ಪ್ರಶಸ್ತಿಯಾಗಿದ್ದು, ಬರೋಬ್ಬರಿ 24 ವರ್ಷಗಳ ನಂತರ ತಮಿಳು ಸಾಹಿತಿಗೆ ಸಿಕ್ಕಿದೆ.

ಸಿನಿಮಾ ಗೀತ ಸಾಹಿತಿಯಾಗಿ ಜನಪ್ರಿಯ: 1953ರಲ್ಲಿ ಜನಿಸಿದ ವೈರಮುತ್ತು ಅವರು ತಮಿಳು ಸಾಹಿತ್ಯ ಹಾಗೂ ಸಿನಿಮಾ ಸಾಹಿತ್ಯ ರಂಗದಲ್ಲಿ ಬಹಳ ಜನಪ್ರಿಯ ರಾಗಿದ್ದಾರೆ. ನಿಜಲ್ಗಲ್ ಚಿತ್ರದಲ್ಲಿ 'ಇದು ಒರು ಪೊನ್ಮಲೈ ಪೋಡು' ಹಾಡಿನ ಮೂಲಕ ಸಿನಿಮಾ ಸಾಹಿತ್ಯ ಲೋಕಕ್ಕೆ ಪಾದಾರ್ಪಣೆ ಮಾಡಿದರು. ಅಂದಿನಿಂದ ಅವರು ಸುಮಾರು 8 ಸಾವಿರ ಹಾಡುಗಳನ್ನು ಬರೆದಿದ್ದಾರೆ.

7 ರಾಷ್ಟ್ರೀಯ ಪ್ರಶಸ್ತಿ ಪಡೆದಿರುವ ವೈರಮುತ್ತು: ಅವರು ಅತ್ಯುತ್ತಮ ಗೀತರಚನೆಗಾಗಿ 7 ರಾಷ್ಟ್ರೀಯ ಪ್ರಶಸ್ತಿಗಳನ್ನು ಗಳಿಸಿದ್ದಾರೆ. ಇದಲ್ಲದೆ, ವೈರಮುತ್ತು 6 ಬಾರಿ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗಳನ್ನು ಗೆದ್ದಿದ್ದಾರೆ ಮತ್ತು ಕಲೈಮಾಮಣಿ ಸೇರಿದಂತೆ ರಾಜ್ಯ ಸರ್ಕಾರದಿಂದ ವಿಶೇಷ ಪ್ರಶಸ್ತಿಗಳನ್ನು ಸಹ ಪಡೆದಿದ್ದಾರೆ.

3 ಡಾಕ್ಟರೇಟ್ ಪಡೆದಿರುವ ಸಾಹಿತಿ: ವೈರಮುತ್ತು ಅವರು ವೈಕರೈ ಮೇಂಗಲ್ ಸೇರಿದಂತೆ ಹಲವಾರು ಕವನ ಸಂಕಲನಗಳು, ಕಾದಂಬರಿಗಳು, ಗೀತ ಸಂಕಲನಗಳು ಮತ್ತು ಸಣ್ಣ ಕಥಾ ಪ್ರಬಂಧಗಳನ್ನು ಬರೆದಿದ್ದಾರೆ ಮತ್ತು ಸಂಶೋಧನೆಯಲ್ಲಿ 3 ಡಾಕ್ಟರೇಟ್ ಪದವಿಗಳನ್ನು ಸಹ ಪಡೆದಿದ್ದಾರೆ.

ತಮಿಳು ಸಾಹಿತ್ಯಕ್ಕೆ ಇದುವರೆಗೂ 2 ಜ್ಞಾನಪೀಠ ಪ್ರಶಸ್ತಿಗಳು ಲಭಿಸಿದ್ದರು, ಇದೀಗ 3ನೇ ಬಾರಿಗೆ ಜ್ಞಾನಪೀಠ ಪ್ರಶಸ್ತಿ ಲಭಿಸಿದೆ. 1975ರಲ್ಲಿ ತಮಿಳು ಬರಹಗಾರ ಅಖಿಲನ್ ಅವರಿಗೆ ಜ್ಞಾನಪೀಠ ಪ್ರಶಸ್ತಿ ನೀಡಲಾಗಿತ್ತು. ಬಳಿಕ 2002ರಲ್ಲಿ ಜಯಕಾಂತನ್ ಅವರಿಗೆ ಈ ಪ್ರಶಸ್ತಿ ನೀಡಲಾಯಿತು. ಈಗ, 24 ವರ್ಷಗಳ ನಂತರ, ತಮಿಳುನಾಡಿನ ಸಾಹಿತಿಯೊಬ್ಬರು ಈ ಪ್ರಶಸ್ತಿಯನ್ನು ಸ್ವೀಕರಿಸಲಿದ್ದಾರೆ

ಭಾರತ-ಅಮೇರಿಕ ವ್ಯಾಪಾರ ಒಪ್ಪಂದದಲ್ಲಿ

ದೇಶದ ಕೃಷಿ ಕ್ಷೇತ್ರ, ರೈತ ಸಮುದಾಯಕ್ಕೆ ಅನಾನುಕೂಲವಾಗುವ ಒಂದು ಅಂಶವೂ ಇಲ್ಲ

ಸಂಸದ ಯದುವೀರ ಒಡೆಯರ್ ಅಭಿಮತ

ಮೈಸೂರು,ಮಾ.14(ಪಿಎಂ)– ಅಮೆರಿಕ ದೊಂದಿಗೆ ಭಾರತ ಸರ್ಕಾರ ಮಾಡಿ ಕೊಂಡಿರುವ ವ್ಯಾಪಾರ ಒಪ್ಪಂದದಲ್ಲಿ ದೇಶದ ಕೃಷಿ ಕ್ಷೇತ್ರ ಹಾಗೂ ರೈತ ಸಮುದಾಯಕ್ಕೆ ಅನಾನುಕೂಲವಾಗುವ ಒಂದು ಅಂಶ ಕೂಡ ಇಲ್ಲ ಎಂದು ಮೈಸೂರು–ಕೊಡಗು ಸಂಸದ ಯದುವೀರ ಕೃಷ್ಣದತ್ತ ಚಾಮ ರಾಜ ಒಡೆಯರ್ ಪ್ರತಿಪಾದಿಸಿದರು.

ಮೈಸೂರಿನ ಬಿಜೆಪಿ ಕಚೇರಿ ಸಭಾಂಗಣ ದಲ್ಲಿ ಬಿಜೆಪಿ ರೈತ ಮೋರ್ಚಾ ಮೈಸೂರು ಗ್ರಾಮಾಂತರ ಮತ್ತು ಮಹಾನಗರ ವತಿಯಿಂದ ಶನಿವಾರ ಹಮ್ಮಿಕೊಂಡಿದ್ದ 'ಭಾರತ ಅಮೆರಿಕ ವ್ಯಾಪಾರ ಒಪ್ಪಂದ ; ದೇಶದ ಕೃಷಿ ಕ್ಷೇತ್ರದ ಮೇಲೆ ಆಗುವ ಉತ್ತಮ ಪರಿಣಾಮಗಳು' ಕುರಿತು ಶನಿವಾರ ಹಮ್ಮಿಕೊಂಡಿದ್ದ ವಿಚಾರ ಮಂಡನೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಹಲವು ರೈತ ಸಂಘಟನೆಗಳು ನನ್ನನ್ನು ಭೇಟಿಯಾಗಿ ಅಮೇರಿಕದೊಂದಿಗೆ ಭಾರತ ಮಾಡಿಕೊಂಡಿರುವ ವ್ಯಾಪಾರ ಒಪ್ಪಂದ ಹಾಗೂ ಯೂರೋಪ್ ಫ್ರೀ ಟ್ರೇಡ್ ಅಸೋಸಿಯೇಷನ್ ಜೊತೆಗಿನ ಭಾರತ ವ್ಯಾಪಾರ ಒಪ್ಪಂದದಿಂದ ದೇಶದ ರೈತರಿಗೆ ತೊಂದರೆಯಾಗಲಿದೆ ಎಂಬ ಆತಂಕ ಸೃಷ್ಟಿಯಾಗಿದೆ ಎಂದು ಹೇಳಿದರು. ನಿಜಕ್ಕೂ ಈ ಒಪ್ಪಂದಗಳಿಂದ ದೇಶದ ರೈತರು, ಕೃಷಿ ಕ್ಷೇತ್ರಕ್ಕೆ ಅನಾನುಕೂಲ ವಾಗುವ ಒಂದು ಅಂಶವೂ ಇಲ್ಲ. ನಮ್ಮ ರೈತರು, ಕೃಷಿ ವಲಯಕ್ಕೆ ಅನುಕೂಲ ವಾಗುವ ನಿಟ್ಟಿನಲ್ಲಿ ಸಾಕಷ್ಟು ಅವಲೋಕಿಸಿ ಕೇಂದ್ರ ಸರ್ಕಾರ ಒಪ್ಪಂದಗಳನ್ನು ಮಾಡಿಕೊಂಡಿದೆ ಎಂದರು.



ಮೈಸೂರಿನ ಬಿಜೆಪಿ ಕಚೇರಿ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ವಿಚಾರ ಮಂಡನೆ ಕಾರ್ಯಕ್ರಮ ಉದ್ಘಾಟಿಸಲಾಯಿತು.


ರೈತರಿಗೆ ಸಂಪೂರ್ಣ ರಕ್ಷಣೆ ನೀಡುವ ನಿಟ್ಟಿನಲ್ಲಿ ಸರಿಯಾದ ಒಪ್ಪಂದಗಳನ್ನು ಮಾಡಿಕೊಳ್ಳಲಾಗಿದೆ. ಆದರೆ ವಿರೋಧ ಪಕ್ಷದವರು ಅಪಪ್ರಚಾರ ಮಾಡುತ್ತಿದ್ದಾರೆ. ಅದಕ್ಕಾಗಿ ಕೆಲ ಶಕ್ತಿಗಳು ಕೆಲಸ ಮಾಡು ತ್ತಿವೆ. ಅಂತಾರಾಷ್ಟ್ರೀಯ ಮಟ್ಟದಲ್ಲಿ ಭೌಗೋಳಿಕ ರಾಜಕೀಯ ಮಾಡುವ ಕೆಲ ಸಂಸ್ಥೆಗಳು, ಭಾರತದಲ್ಲಿ ಒಂದು ಒಳ್ಳೆಯ ಸರ್ಕಾರದಿಂದ ಆರ್ಥಿಕಾಭಿವೃದ್ಧಿ ಆಗುವುದರಿಂದ ತಮಗೆ ಹಿನ್ನಡೆಯಾಗುತ್ತದೆ ಎಂಬ ಕಾರಣಕ್ಕೆ ದೊಡ್ಡ ಮಟ್ಟದಲ್ಲಿ ಭಾರತದ ಮಧ್ಯಪ್ರವೇಶಿಸಿ ಅಪಪ್ರಚಾರ ದಲ್ಲಿ ಭಾಗಿಯಾಗಿವೆ ಎಂದು ತಿಳಿಸಿದರು.

ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ನಮ್ಮ ಪಕ್ಷಕ್ಕೆ ಹಿನ್ನಡೆ ಉಂಟು ಮಾಡು ವುದು ಅವುಗಳ ಉದ್ದೇಶ. ಜಿಪಂ, ತಾಪಂ ಹಾಗೂ ಗ್ರಾಪಂ ಚುನಾವಣೆಯಲ್ಲಿ ಬಿಜೆಪಿಗೆ ಹಿನ್ನಡೆ ಉಂಟು ಮಾಡುಬೇಕೆಂಬುದೇ ಅವುಗಳ ಗುರಿಯಾಗಿದೆ. ಹಾಗಾಗಿ ರೈತ ಸಮುದಾಯದಲ್ಲಿ ಅಸಮಾಧಾನ, ಆತಂಕ ಸೃಷ್ಟಿ ಮಾಡಲು ಮುಂದಾಗಿವೆ. ಈ ಹಿನ್ನೆಲೆಯಲ್ಲಿ ಪಕ್ಷದ ಸ್ಥಳೀಯ ಕಾರ್ಯಕರ್ತರು ಸರಿಯಾಗಿ ಈ ಬಗ್ಗೆ ಅರಿವು ಮೂಡಿಸಬೇಕುಎಂದರು.

ಬಿಜೆಪಿ ರೈತ ಮೋರ್ಚಾ ರಾಜ್ಯ ಪ್ರಧಾನ ಕಾರ್ಯದರ್ಶಿ ಡಾ.ನವೀನ್ ವಿಚಾರ ಮಂಡಿಸಿದರು. ಬಿಜೆಪಿ ನಗರಾಧ್ಯಕ್ಷ ಎಲ್. ನಾಗೇಂದ್ರ, ಪ್ರಧಾನ ಕಾರ್ಯದರ್ಶಿ ಬಿ.ಎಂ. ರಘು, ಜಿಲ್ಲಾಧ್ಯಕ್ಷ ಕೆ.ಎಂ.ಸುಬ್ಬಣ್ಣ, ರೈತ ಮೋರ್ಚಾ ಮೈಸೂರು ಮಹಾನಗರ ಅಧ್ಯಕ್ಷ ದೇವರಾಜ್, ಜಿಲ್ಲಾಧ್ಯಕ್ಷ ಜೆ.ಎಸ್.ರಮೇಶ್ ಕುಮಾರ್ ಮತ್ತಿತರರು ಹಾಜರಿದ್ದರು.

ಡಾ.ಮಹದೇವಪ್ಪನವರ 'ಕೃಷಿಋಷಿ' ಕೃತಿ ಲೋಕಾರ್ಪಣೆ

—— ಕುವೆಂಪು ರಸಋಷಿ, ಮಹದೇವಪ್ಪ 'ಕೃಷಿಕವಿ' ——



ಪದ್ಮಭೂಷಣ ಡಾ.ಎಂ.ಮಹದೇವಪ್ಪನವರ ಜೀವನಾಧರಿತ 'ಕೃಷಿ ಋಷಿ' ನಡೆದು ಬಂದ ದಾರಿ ಪುಸ್ತಕವನ್ನು ನಾಡೋಜ ಡಾ.ಗೊ.ರು.ಚನ್ನಬಸಪ್ಪ ಶನಿವಾರ ಬಿಡುಗಡೆಗೊಳಿಸಿದರು. ಈ ವೇಳೆ ಸುತ್ತೂರು ಮಠದ ಶ್ರೀ ಶಿವರಾತ್ರಿದೇಶಿಕೇಂದ್ರ ಸ್ವಾಮೀಜಿ, ನಿವೃತ್ತ ನ್ಯಾಯಮೂರ್ತಿ ವಿ.ರಾಮಸುಬ್ರಮಣಿಯನ್, ಹಿರಿಯ ಸಾಹಿತಿ ಕೆ.ಸಿ.ಶಿವಪ್ಪ ಸೇರಿದಂತೆ ಇತರರಿದ್ದರು.

ಮೈಸೂರು,ಮಾ.14(ಎಸ್‌ಪಿಎನ್)– ಮೈಸೂರಿನ ಸರಸ್ವತಿಪುರಂನಲ್ಲಿರುವ ಜೆಎಸ್‌ಎಸ್ ಮಹಿಳಾ ಕಾಲೇಜಿನ ನವಜ್ಯೋತಿ ಸಭಾಂಗಣದಲ್ಲಿ ಕೆಂದಾವರೆ ಮಹದೇವಪ್ಪ ಸೇವಾ ಟ್ರಸ್ಟ್ ವತಿಯಿಂದ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ವಿಸ್ಮಯ ಬುಕ್‌ಹೌಸ್ ಹೊರತಂದಿರುವ ಪದ್ಮ ಭೂಷಣ ಡಾ.ಎಂ.ಮಹದೇವಪ್ಪನವರ ಜೀವನಾಧರಿತ 'ಕೃಷಿ ಋಷಿ' ನಡೆದು ಬಂದ ದಾರಿ ಪುಸ್ತಕ ವನ್ನು ನಾಡೋಜ ಡಾ.ಗೊ.ರು.ಚನ್ನಬಸಪ್ಪ ಶನಿವಾರ ಬಿಡುಗಡೆಗೊಳಿಸಿದರು.

> 'ಭಾರತ ಮಾತ್ರವಲ್ಲದೆ ಜಗತ್ತಿನ ಪ್ರತಿ ದೇಶವು ಕೃಷಿಯನ್ನು ಅವಲಂಬಿಸಿದೆ. ಆಹಾರ ಬೆಳೆಯುವುದು ಆಯಾಯ ಜನರ ಬದುಕಿನ ವಿಷಯವಾಗಿದೆ. ಭಾರತೀಯ ಪರಂಪರೆಯಲ್ಲಿ ಅನ್ನಕ್ಕೆ ಅತ್ಯುನ್ನತ ಸ್ಥಾನ ನೀಡಲಾಗಿದೆ. ಇದು ನಮ್ಮ ದೇಶದ ಸಂಸ್ಕೃತಿಯಾಗಿದೆ. ಕೃತಿಯಲ್ಲಿ ಕೃಷಿಯೊಂದಿಗೆ ಸಾಗಿಬಂದ ಹಾದಿಯ ಚಿತ್ರಣ ಕಟ್ಟಿಕೊಡುವುದರ ಜೊತೆಗೆ ಮಹದೇವಪ್ಪನವರ ಶ್ರೇಷ್ಠ ವ್ಯಕ್ತಿತ್ವ ಈ ಪುಸ್ತಕದಲ್ಲಿ ಗುರುತಿಸಲಾಗಿದೆ.
> – **ನ್ಯಾ.ವಿ.ರಾಮ ಸುಬ್ರಮಣಿಯನ್,** ನಿವೃತ್ತ ನ್ಯಾಯಾಮೂರ್ತಿ

ಬಳಿಕ ಮಾತನಾಡಿದ ಅವರು,'ಕೃಷಿ ಋಷಿ' ಅಂತಃಸಾಕ್ಷಿಯ ಗ್ರಂಥವಾಗಿದ್ದು, ಮಹದೇವಪ್ಪ ಅವರು ಪ್ರಯಾಣಿಸಿದ ಹಾದಿಯ ಕುರಿತು ದಾಖಲೆ ರೂಪದಲ್ಲಿ ಪ್ರಕಟವಾಗಿದೆ. ಮಹಾಕವಿ ಕುವೆಂಪು ಅವರು ರಸಋಷಿಯಾದರೆ, ಕೃಷಿ ಕ್ಷೇತ್ರಕ್ಕೆ ತಮ್ಮನ್ನು ತಾವು ಅರ್ಪಿಸಿಕೊಂಡ ಮಹದೇವಪ್ಪನವರು 'ಕೃಷಿ ಕವಿ' ಎಂದರೆ ತಪ್ಪಾಗಲಾರದು ಎಂದರು.

ಈ ಕೃತಿಯ ಶೀರ್ಷಿಕೆ ಮಹದೇವಪ್ಪ ನವರಿಗೆ ತುಂಬಾ ಅನ್ವರ್ಥವಾಗುತ್ತದೆ. ಅಲ್ಲದೆ, ಹೆಚ್ಚು ಇಳುವರಿ ಕೊಡುವ ಭತ್ತದ ಹೊಸತಳಿಗಳನ್ನು ಆವಿಷ್ಕರಿಸುವ ಮೂಲಕ ರೈತರ ಮುಖದಲ್ಲಿ ಸಂತಸ ಮೂಡುವಂತೆ ಮಾಡಿದ ಕೀರ್ತಿ ಡಾ.ಎಂ. ಮಹದೇವಪ್ಪ ಅವರಿಗೆ ಸಲ್ಲಿಸುತ್ತದೆ. ಅಲ್ಲದೆ, ಎರಡು ಅವಧಿಗೆ ಧಾರವಾಡ ಕೃಷಿ ವಿಶ್ವವಿದ್ಯಾಲಯದ ಉಪಕುಲಪತಿ ಗಳಾಗಿ ಕೆಲಸ ನಿರ್ವಹಿಸಿದ್ದಾರೆ ಎಂದರು.

ಡಾ.ಎಂ.ಮಹದೇವಪ್ಪ ಅವರು, ಅಂತರ ರಾಷ್ಟ್ರೀಯ ಖ್ಯಾತಿಯ 'ಇಂಟಾನ್' ಸೇರಿ 9 ತಳಿಗಳು ಹಾಗೂ ದೇಶದ ಮೊದಲ ಹೈಬ್ರಿಡ್ ಭತ್ತದ ಜನಕ ಎಂದು ಗುರುತಿ ಸಲಾಗಿದೆ. ಇವರ ಸಾಧನೆಯನ್ನು ಗುರುತಿ ಸಿರುವ ಭಾರತ ಸರ್ಕಾರ 2005ರಲ್ಲಿ ಪದ್ಮಶ್ರೀ, 2014ರಲ್ಲಿ ಪದ್ಮಭೂಷಣ ಪ್ರಶಸ್ತಿಯನ್ನು ನೀಡಿ ಗೌರವಿಸಿವೆ. ಇವರ ಮಾರ್ಗ ದರ್ಶನದಲ್ಲಿ 100ಕ್ಕೂ ಅಧಿಕ ವಿದ್ಯಾರ್ಥಿ ಗಳು ಸಂಶೋಧನೆ ಕೈಗೊಂಡು ಪಿಎಚ್‌ಡಿ ಪದವಿ ಪಡೆದುಕೊಂಡಿದ್ದಾರೆ ಎಂದರು.

ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಮಾತನಾಡಿ, ಭತ್ತದ ತಳಿಯ ಸಂಶೋಧನೆ ನಡೆಸಿ ರೈತರಿಗೆ ಉಪಕಾರಿಯಾಗಿದ್ದರು. ವಿಷಯುಕ್ತ ಪಾರ್ಥೇನಿಯಂ ಸಸ್ಯಕ್ಕೆ ಜೈವಿಕ ಪ್ರತಿರೋಧ ಒಡ್ಡುವಂಥಹ ಸಸ್ಯಗಳನ್ನು ಬೆಳೆಸಬೇಕೆಂಬ ಅವರ ಯೋಜನೆ ದೂರದರ್ಶಿತ್ವದಿಂದ ಕೂಡಿತ್ತು. ಅದರಲ್ಲಿ ಯಶಸ್ವಿಯೂ ಆಗಿದ್ದರು ಎಂದು ಶ್ರೀಗಳು ಸ್ಮರಿಸಿದರು.

ಕೃತಿ ಬಿಡುಗಡೆಗೂ ಮುನ್ನ 'ಪ್ರಕೃತಿ ನಿಯಮಗಳು ಮತ್ತು ಸುಸ್ಥಿರ ಕೃಷಿ' ವಿಷಯ ಕುರಿತು ರಾಷ್ಟ್ರೀಯ ಜೀವ ವಿಜ್ಞಾನ ಕೇಂದ್ರದ ನಿರ್ದೇಶಕ ಪ್ರೊ.ಎಲ್. ಎಸ್.ಶಶಿಧರ್ ಉಪನ್ಯಾಸ ನೀಡಿದರು. ಸಾಹಿತಿ ಕೆ.ಸಿ.ಶಿವಪ್ಪ, ವಿಶ್ರಾಂತ ಕುಲಪತಿ ಎಂ.ಎನ್.ಶೀಲಾವಂತರ್, ವಿಸ್ಮಯ ಬುಕ್ ಹೌಸ್‌ನ ಪ್ರಕಾಶ್ ಚಿಕ್ಕಪಾಳ್ಯ, ಪ್ರಾಂಶುಪಾಲ ರೇಚಣ್ಣ, ಟ್ರಸ್ಟ್‌ನ ಮಮತಾ ಶೇಖರ್, ಚಂದ್ರಶೇಖರ್ ಉಪಸ್ಥಿತರಿದ್ದರು.

ಈ ವೇಳೆ ಡಾ.ಎಂ.ಮಹದೇವಪ್ಪ ಒಡನಾಡಿಗಳಾದ ಡಾ.ಪ್ರತಿಭಾ ಪೆರೇರಾ, ಕರ್ನಾಟಕ ಪಶುವೈದ್ಯಕೀಯ, ಪ್ರಾಣಿ ಮತ್ತು ಮೀನುಗಾರಿಕೆ, ವಿಜ್ಞಾನ ವಿವಿ, ಪ್ರೊ.ಆರ್.ಎನ್. ಶ್ರೀನಿವಾಸ ಗೌಡ, ವಿಶ್ರಾಮತಿ ಕುಲಪತಿಗಳಾದ ಪ್ರೊ.ಎಸ್. ಚಂದ್ರಶೇಖರ್ ಶೆಟ್ಟಿ, ಡಾ.ಆರ್.ಸಿ. ಜಗದೀಶ, ಡಾ.ಕೆ.ಪಿ.ವಿಶ್ವನಾಥ್, ಡಾ.ಆರ್.ಚಂದ್ರಶೇಖರ, ಬೆಟ್ಟಸ್ವಾಮಿ ಸೇರಿದಂತೆ ಇತರನ್ನು ಸನ್ಮಾನಿಸಲಾಯಿತು.

ಮಣಿಪಾಲ್ ಜಂಕ್ಷನ್‌ನ ಫ್ಲೈ ಓವರ್ ಕಾಮಗಾರಿ ಪರಿಶೀಲಿಸಿದ ಸಂಸದ ಯದುವೀರ್

—— 2027ರ ವೇಳೆಗೆ ಕಾಮಗಾರಿ ಪೂರ್ಣ; ಯದುವೀರ್ ——



ಸಂಸದ ಯದುವೀರ್ ಒಡೆಯರ್ ಅವರು ಕೆಂಪೇಗೌಡ ವೃತ್ತ (ಮಣಿಪಾಲ್ ಜಂಕ್ಷನ್)ದಲ್ಲಿ ಎನ್‌ಹೆಚ್‌ಎಐ ವತಿಯಿಂದ ನಡೆಯುತ್ತಿರುವ ಫ್ಲೈ ಓವರ್ ಕಾಮಗಾರಿ ಪರಿಶೀಲನೆ ನಡೆಸಿದರು.

ಮೈಸೂರು, ಮಾ.14(ವಿವಿಹೆಚ್)– ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಶನಿವಾರ ಕೆಂಪೇಗೌಡ ವೃತ್ತ (ಮಣಿಪಾಲ್ ಜಂಕ್ಷನ್) ದಲ್ಲಿ ಎನ್‌ಹೆಚ್‌ಎಐ ವತಿಯಿಂದ ನಡೆಯುತ್ತಿರುವ ಫ್ಲೈ ಓವರ್ ಕಾಮಗಾರಿಯನ್ನು ಪರಿಶೀಲನೆ ನಡೆಸಿದರು.

ಬಳಿಕ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಈ ಭಾಗದಲ್ಲಿ ಸಿಗ್ನಲ್ ಚೋಕ್ ಪಾಯಿಂಟ್ ಆಗುತ್ತಿತ್ತು. ಅದನ್ನು ನಿವಾರಿಸಿ ಸುಗಮ ಸಂಚಾರಕ್ಕೆ ಅನುಕೂಲ ಮಾಡಿಕೊಡುವ ನಿಟ್ಟಿನಲ್ಲಿ ಕಾಮಗಾರಿಯನ್ನು ತ್ವರಿತಗತಿಯಲ್ಲಿ ಮಾಡುವಂತೆ ಸೂಚನೆ ನೀಡಲಾಗಿದೆ ಎಂದರು.

ಈ ಕಾಮಗಾರಿಗೆ 2026ರ ಜನವರಿ 19ರಂದು ಅನುಮೋದನೆ ನೀಡಲಾಗಿತ್ತು. ಹಲವು ಕಾರಣಗಳಿಂದಾಗಿ ಕಾಮಗಾರಿ ಆರಂಭವಾಗಿರಲಿಲ್ಲ. ಈಗ ಎಲ್ಲವೂ ನಿವಾರಣೆಯಾಗಿದ್ದು, ಕಾಮಗಾರಿ ವೇಗವಾಗಿ ನಡೆಯುತ್ತಿದೆ. 2027ರ ಮಾರ್ಚ್ ವೇಳೆಗೆ ಕಾಮಗಾರಿ ಪೂರ್ಣಗೊಳಿಸುವ ಗುರಿ ಹೊಂದಲಾಗಿದೆ. ಈ ಯೋಜನೆಯಿಂದ ಮೈಸೂರು–ಬೆಂಗಳೂರು ರಸ್ತೆಯ ಪ್ರವೇಶ ಹಾಗೂ ನಿರ್ಗಮನ ವ್ಯವಸ್ಥೆಯು ಸುಧಾರಿಸಲಿದೆ ಎಂದು ಸಂಸದರು ತಿಳಿಸಿದರು.

ಕಾಮಗಾರಿಗಳಿಂದ ಸಾರ್ವಜನಿಕರಿಗೆ ಯಾವುದೇ ತೊಂದರೆ ಆಗದಂತೆ ನೋಡಿಕೊಳ್ಳಬೇಕು. ವಾರಾಂತ್ಯಗಳಲ್ಲಿ ಹೆಚ್ಚಿನ ವಾಹನ ಸಂಚಾರ ಇರುವುದರಿಂದ ಹೆಚ್ಚುವರಿ ಟ್ರಾಫಿಕ್ ಪೊಲೀಸರನ್ನು ನಿಯೋಜಿಸುವ ಬಗ್ಗೆ ಟ್ರಾಫಿಕ್ ಪೊಲೀಸ್ ಅಧಿಕಾರಿಗಳೊಂದಿಗೆ ಚರ್ಚಿಸಲಾಗುವುದು. ಕಾಮಗಾರಿ ನಡೆಯುವ ಸುತ್ತಮುತ್ತಲಿನ ಪ್ರದೇಶವನ್ನು ಸ್ವಚ್ಛವಾಗಿ ನಿರ್ವಹಿಸುವಂತೆ ಅಧಿಕಾರಿಗಳಿಗೆ ಸೂಚಿಸಿರುವುದಾಗಿ ತಿಳಿಸಿದರು.

ತಂಬಾಕಿಗೆ ಬೆಂಬಲ ಬೆಲೆ: ರೈತರ ತಂಬಾಕಿಗೆ ಉತ್ತಮ ಬೆಲೆ ಬಂದಿದೆ. ನಿನ್ನೆ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರ ನೇತೃತ್ವದಲ್ಲಿ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಜೊತೆಗೂಡಿ ಪಿಯೂಷ್ ಗೋಯಲ್ ಅವರನ್ನು ಭೇಟಿಯಾಗಿ ತಂಬಾಕು ಬೆಲೆ ಸಮಸ್ಯೆ ನಿವಾರಿಸುವಂತೆ ಮನವಿ ಮಾಡಿದ್ದು, ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ ಎಂದರು.

ಕಳೆದ 2 ವರ್ಷಗಳಿಂದ ತಂಬಾಕಿಗೆ ಉತ್ತಮ ಬೆಲೆ ಸಿಕ್ಕಿರುವ ಕಾರಣಕ್ಕೆ ಎಲ್ಲರೂ ತಂಬಾಕು ಬೆಳೆದಿದ್ದಾರೆ. ಐಟಿಸಿ ಹಾಗೂ ಇತರೆ ಕಂಪನಿಗಳು ತಂಬಾಕು ಖರೀದಿಸುವುದಾಗಿಯೂ ವಿಶ್ವಾಸ ವ್ಯಕ್ತಪಡಿಸಿದ್ದಾರೆ. ಇತ್ತ ತಂಬಾಕು ಮಂಡಳಿಯೊಂದಿಗೂ ಸಭೆ ಮಾಡಿದ್ದು ಎಲ್ಲರೂ ಸಹಮತ ನೀಡಿದ್ದಾರೆ ಎಂದರು.

ಗ್ಯಾಸ್ ಸಿಲಿಂಡರ್ ಸಮಸ್ಯೆ: ಮಧ್ಯಪ್ರಾಚ್ಯ ಬಿಕ್ಕಟ್ಟಿನಿಂದ ದೇಶ, ರಾಜ್ಯದಲ್ಲಿ ಗ್ಯಾಸ್ ಸಿಲಿಂಡರ್ ಸಮಸ್ಯೆ ಎಂದೂ ಯಾರು ಆತಂಕಪಡಬೇಕಿಲ್ಲ. ಕೇಂದ್ರ ಸರ್ಕಾರ ಈಗಾಗಲೇ ಸಮಸ್ಯೆ ಆಗದಂತೆ ಎಲ್ಲಾ ಮುನ್ನೆಚ್ಚರಿಕಾ ಕ್ರಮ ಕೈಗೊಂಡಿದೆ. 33 ಕೋಟಿ ಮನೆಗಳಿಗೂ ಗ್ಯಾಸ್ ಸಮರ್ಪಕವಾಗಿ ತಲುಪುವಂತೆ ಮಾಡಲು ಕೇಂದ್ರ ಸರ್ಕಾರ ಮಾಡುತ್ತಿರುವ ಕಾರ್ಯಗಳಿಗೆ ಸಾರ್ವಜನಿಕರು ಬೆಂಬಲ ಸೂಚಿಸಬೇಕು ಎಂದು ಇದೇ ವೇಳೆ ತಿಳಿಸಿದರು.

ಪಾಲಿಕೆ ಉಪ ಆಯುಕ್ತರು, ಎನ್‌ಎಚ್‌ಎಐ ಯೋಜನಾ ನಿರ್ದೇಶಕರು, ಮಹಾನಗರ ಪಾಲಿಕೆಯ ಇಂಜಿನಿಯರ್ ಹಾಗೂ ಅರ್ಕ್ಯಾ ಸಂಸ್ಥೆಯಾಧಿಕಾರಿಗಳು ಈ ವೇಳೆ ಉಪಸ್ಥಿತರಿದ್ದರು.

G9 projects
Designing your Dreams
Vee2 Developers
POORVA SHELTERS
PHASE - I, II & III
Behind Marvel PU College
PRICE STARTS FROM
₹ 2,299/-SQ.FT
8088-707-707

Ramadan FESTIVE SALE
BUY 2 GET 1 FREE
PICK THE BEST FOR UR FEET
ON GENTS & LADIES FOOTWEAR
ON ALL IN-HOUSE BRANDS
SHOE WORLD™ ESTD.1998 FOOTWEAR & ACCESSORIES
Best Brands at Your Feet...
CREDIT CARDS ACCEPTED. SUNDAY OPEN
Ph : 2424252
11am to 8-30pm
100 FT ROAD, RAMASWAMY CIRCLE, MYSORE - 4.

HOUSE FOR SALE
20 x 30
(GF & FF Individual Floors)
at Vijayanagar 4th Stage, North Face.
Price: Rs. 85 Lakhs
(Serious buyers only)
Mob: 8884551387

GODOWN FOR RENT
Hootagally Industrial Area, 2500 Sqft Suitable for Car & Scooter Service any Material Stock Purchase
9964450220
9060573900

SITES FOR SALE
1) 30'x40' - Near Varuna Lake - 25 Lakhs
2) 30'x40' - KBL Gardenia, Vijayanagar - 62 Lakhs
3) 30x40 - KBL GREEN WOOD - 47 Lakhs
4) 30'x40' per sq.ft. - Rs. 3750 KBL Silicon City
5) 60x40 - University Layout - 1.3 CR
Mob: 90356-96961

HOUSE FOR SALE
As Per Your Requirement Architect Designed.

AT MYSURU	*AT HUNSUR*
Near Vajamangala, Bannur Road.	Near KSRTC Bus Depot.
20x30 30.5 Lakhs	20x30 24 Lakhs
20x40 34 Lakhs	20x40 24.6 Lakhs
30x40 54 Lakhs	30x40 29 Lakhs.
Near St. Josheph School.	Contact
20x40 - 44 Lakhs	
30x50 - 82 Lakhs	

8123387555 / 7259348777

HIRING
GRAPHIC DESIGNERS
(Freshers/Experienced)
9164477311

WANTED IMMEDIATELY
▪ MARKETING MANAGER (M/F)
▪ COURSE COUNSELOR (F) ▪ ACCOUNTANT (F)
▪ FRONT OFFICE RECEPTIONIST (F)
Qualification: Any Graduates with Excellent communication skill in English & local languages
Salary: 15 to 25k + Attractive Incentives
Walk-in Interview on 16th & 17th March 2026
NEXTGEN College of Professional Studies (A Unit of Mifse India)
5th Main Road, Behind JSS Womens College, Saraswathipuram Mysore.
Email : mysore@mifse.com
9008717027

2ನೇ ವರ್ಷದ ಸವಿನೆನಪು



ಶ್ರೀಮತಿ ಚಿಕ್ಕದೇವಮ್ಮ
ನೀವು ನಮ್ಮನ್ನಗಲಿ ಇಂದಿಗೆ 2ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ
ದುಃಖತಪ್ತರು: ರುಕ್ಮಿಣಿ & ತಿಮ್ಮೇಗೌಡ, ಚೈತ್ರ & ವೆಂಕಟೇಶ್, ಧರ್ಮೇಶ್ ಗೌಡ ಮತ್ತು ಕುಟುಂಬವರ್ಗ

ಸ್ಥಾಪನೆ : 1919 ದೂ. 0821-2520894, 4259665
ಶ್ರೀ ಕೃಷ್ಣರಾಜೇಂದ್ರ ಸಹಕಾರ ಬ್ಯಾಂಕ್ ನಿಯಮಿತ
ಎನ್.ಮಾಧವರಾವ್ ವೃತ್ತ, ಮೈಸೂರು–570 004
ಪ್ರಕಟಣೆ
1. ಚಿನ್ನಾಭರಣಗಳ ಮೇಲೆ ಶೇ 9.5 ರಂತೆ ಗ್ರಾಂಗೆ ರೂ.10,000/– ರಂತೆ ಶೀಘ್ರವಾಗಿ ಸಾಲ ನೀಡಲಾಗುತ್ತಿದೆ.
2. ಮನೆ ಹಾಗೂ ನಿವೇಶನಗಳ ಮೇಲೆ, ಮನೆ/ನಿವೇಶನ ಕೊಳ್ಳುವ ಉದ್ದೇಶಕ್ಕೆ ಶೇ 12.5 ರಂತೆ ಗರಿಷ್ಠ 40 ಲಕ್ಷ ಶೀಘ್ರವಾಗಿ ಸಾಲ ನೀಡಲಾಗುತ್ತಿದೆ. (ಸುಸ್ತಿ ಬಡ್ಡಿ ಪಾವತಿಸದೇ ಸರಿಯಾಗಿ ಕಂತುಗಳನ್ನು ಕಟ್ಟಿದವರಿಗೆ ಬಡ್ಡಿಯಲ್ಲಿ 1% ರಿಯಾಯಿತಿ ನೀಡಲಾಗುವುದು.)
3. ಠೇವಣಿಗಳ ಮೇಲೆ ಗರಿಷ್ಠ ಶೇ.8.0% ರಂತೆ ಹಾಗೂ ಹಿರಿಯ ನಾಗರೀಕರಿಗೆ ಶೇ 8.50% ರಂತೆ ಬಡ್ಡಿ ನೀಡಲಾಗುತ್ತಿದೆ.
4. 2026ನೇ ಸಾಲಿನ ಯಶಸ್ವಿನಿ ಯೋಜನೆ ಪ್ರಾರಂಭವಾಗಿದೆ. ಕೊನೆಯ ದಿನಾಂಕ 31.03.2026

ಶ್ರೀ ಟಿ.ಬಸವರಾಜು (ಬಸಪ್ಪ), ಅಧ್ಯಕ್ಷರು | ಶ್ರೀಮತಿ ಹೆಚ್ ಎನ್.ಸರ್ವಮಂಗಳ, ಉಪಾಧ್ಯಕ್ಷರು | ಶ್ರೀಮತಿ ಶಾಂತಲ ಪ್ರ. ವ್ಯವಸ್ಥಾಪಕರು

ನಿರ್ದೇಶಕರುಗಳಾದ: ನಂಸಿದ್ದಪ್ಪ, ಜಿ.ಎಂ.ಪಂಚಾಕ್ಷರಿ, ಹೆಚ್.ವಿ.ಭಾಸ್ಕರ್, ಎಂ.ಡಿ.ಪಾರ್ಥಸಾರಥಿ(ಪಾತಿ), ಪ್ರತಿಧ್ವನಿಪ್ರಸಾದ್, ಟಿ.ವಿ. ಗಣೇಶಮೂರ್ತಿ, ಶ್ರೀಮತಿ ಬಿ. ನಾಗಜ್ಯೋತಿ, ನವೀನ್ ಕುಮಾರ್ ಎಂ.ಎನ್., ಎಂ.ಎಸ್. ಅರುಣ್ ಸಿದ್ದಪ್ಪ, ಹೆಚ್.ವಾಸು, ಶಿವಪ್ರಕಾಶ್ ಎಂ.

ಕಮರ್ಷಿಯಲ್ ಸೈಟು ಮಾರಾಟಕ್ಕಿದೆ
30X40 ಪಶ್ಚಿಮ ದಿಕ್ಕು
ರಾಮಕೃಷ್ಣನಗರ,
ಪೊಲೀಸ್ ಸ್ಟೇಷನ್ ರಸ್ತೆ,
8050216683

TEACHERS REQUIRED
For a reputed CBSE Residential School in Karnataka
Subjects:
- English,
- Mathematics,
- Computer Science,
- Kindergarten,
- Student Counselling
- Wellness Teacher.
- Send your resume to:

WhatsApp: 9483640707

ಮೈಸೂರು ಮಿತ್ರ 46
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

SITE FOR SALE
30x50 Corner Site
MUDA Approved
1 Side 80 Feet Road
2 Side 30 Feet Road
Vijayanagar 4th Stage
Martikyathanahalli.
8310897949
8553665772

Commercial Property for Sale
3900 Sqft Narayan Shastri Main Road, (Near Siddappa Circle, MG Road) Opposite to Shubham Apartment, Mysore
9535802186

Nandini TOURISTS
YATRAS, HOLIDAYS & MEMORIES
9916574089
9663653005
ಬೆಂಗಳೂರಿನಿಂದ ಪ್ಯಾಕೇಜ್ ಪ್ರವಾಸಗಳು
ಭೂತಾನ್ 6D/7N
ನೇಪಾಳ ಮುಕ್ತಿನಾಥ ಯಾತ್ರೆ 9N/10D
ಕಾಶಿ ಅಯೋಧ್ಯಾ ಪ್ರಯಾಗರಾಜ್ 4N/5D
ಶಿರಡಿ 2N/3D
ಆದಿ ಕೈಲಾಶ್ ಮತ್ತು ಓಂ ಪರ್ವತ 9N/10D
ಪುರಿ ಜಗನ್ನಾಥ 2N/3D

ತಕ್ಷಣ ಬೇಕಾಗಿದ್ದಾರೆ
ಹುದ್ದೆ
ಹ್ಯಾಂಡ್ವೆಲ್ಡಿಂಗ್ –10th / ITI/ Diploma (Pass / Fail)
ಮಷೀನ್ ಆಪರೇಟರ್ –ITI / Diploma / Engineer (any Branch)
ಕ್ವಾಲಿಟಿ ಇನ್ಸ್ಪೆಕ್ಟರ್ – ITI / Diploma / Engineer (Any Branch)
ಸಂಪರ್ಕಿಸಿ
ಎಸ್ ಎಸ್ ಟೆಕ್ನಾಲಜಿ
SS TECHNOLOGY
13th ಬ್ಲಾಕ್, ಪ್ಲೋಟ್ ನಂ 191 ಹೆಬ್ಬಾಳ್ ಇಂಡಸ್ಟ್ರಿಯಲ್ ಏರಿಯಾ, 3rd ಸ್ಟೇಜ್, ಹೆಬ್ಬಾಳ್, ಮೈಸೂರು–570018 ಸಂಪರ್ಕಿಸಿ
9606036671
8884424770
ದಸಿ ಶೌಲ್ಯವಿರುತ್ತದೆ

MUDA APPROVED SITES FOR SALE
20x30, 30x40, 30x50
Dimensions available
attached to K.H.B. Layout, close to Defence Apartment, 3 kms from Dattagalli ring road. Contact:
Mob: 8151056881

ಎರಡನೇ ವರ್ಷದ ಸವಿನೆನಪು



ದಿ|| ಶ್ರೀ ಅವಿನಾಶ್.ಎ
ಜನನ: 25.05.1991 ನಿಧನ: 15.03.2024
ಆರ್.ಎಸ್.ನಾಯ್ಡುನಗರ, ಮೈಸೂರು
ಸದಾ ನಿನ್ನ ನೆನಪಿನಲ್ಲಿರುವ ತಂದೆ, ತಾಯಿ, ನೈನಿತ, ಪ್ರೇಕ್ಷಿತ ಮತ್ತು ಕುಟುಂಬದವರು.

SITES FOR SALE
@ Rs. 2,999/- SQ.FT.
Off Bogadi, Gaddige Road, Mysore.
86604 66178



Hi! TAXI
ONLY ONE WAY TAXI CHARGE
MYSORE to BANGALORE
City drop or Pick up
BANGALORE to MYSORE
Airport drop or Pick up
MYSURU
9611177599

